ಮೈಸೂರು ಮಿತ್ರ

ಮೈಸೂರು–ಮಂಡ್ಯ–ಚಾಮರಾಜನಗರ–ಕೊಡಗು–ಹಾಸನ

ಬೆಳಗಿನ ಪ್ರಾದೇಶಿಕ ದಿನಪತ್ರಿಕೆ

ಸೆಪ್ಟೆಂಬರ್ 30 ಮಂಗಳವಾರ 2025

46

ಸಂಪುಟ: 46 | ಸಂಚಿಕೆ: 164 | ಪುಟಗಳು: 12

₹4

ಮೈಸೂರು ಸುದ್ದಿ: ದೂರವಾಣಿ: 2496520/21/26/27/28 ಜಾಹೀರಾತು: 2496522/23
ನಗರ ಕಚೇರಿಗಳು: ಕೆ.ಆರ್.ಸರ್ಕಲ್, ವಿಶ್ವೇಶ್ವರಯ್ಯ ಕಟ್ಟಡ Ph: 2431774, ಡಿ.ದೇವರಾಜ ಅರಸು ರಸ್ತೆ, Ph: 2428695
ಸುದ್ದಿ ಜಾಹೀರಾತಿಗಾಗಿ–ಮಂಡ್ಯ: 8762960325, ಚಾಮರಾಜನಗರ: 9242265657, ಕೊಡಗು: 9731469871

ಸುದ್ದಿ, ಫೋಟೋಗೆ: news@mysurumithra.com
ಜಾಹೀರಾತು: ad@mysurumithra.com, website: www.mysurumithra.com

ಸಿಸಿ, ಓಸಿ ಇಲ್ಲದ ಮನೆಗಳಿಗೆ ವಿದ್ಯುತ್, ಕುಡಿಯುವ ನೀರು ಕಲ್ಪಿಸಲು ಸರ್ಕಾರ ನಿರ್ಧಾರ

- ಒಂದು ಬಾರಿಗೆ ಅನ್ವಯವಾಗುವಂತೆ ಈ ತೀರ್ಮಾನ
- ರಾಜ್ಯಾದ್ಯಂತ ಇಂತಹ ಎರಡು ಲಕ್ಷ ಮನೆಗಳಿವೆ



ಓಸಿ ಮತ್ತು ಸಿಸಿ ಗೊಂದಲ ನಿವಾರಣೆಗೆ ಮುಖ್ಯಮಂತ್ರಿ ಸಿದ್ದರಾಮಯ್ಯ ಗೃಹ ಕಚೇರಿ ಕೃಷ್ಣಾದಲ್ಲಿ ಸಚಿವರು ಮತ್ತು ಅಧಿಕಾರಿಗಳ ಸಭೆ ನಡೆಸಿದರು.

ಬೆಂಗಳೂರು,ಸೆ.29(ಕೆಎಂಶಿ)– ರಾಜ್ಯ ವ್ಯಾಪಿ ಸಿಸಿ ಮತ್ತು ಓಸಿ ಇಲ್ಲದೆ ನಿರ್ಮಿಸಿದ ಕಟ್ಟಡಗಳಿಗೆ ವಿದ್ಯುತ್ ಮತ್ತು ಕುಡಿಯುವ ನೀರಿನ ಸಂಪರ್ಕ ಕಲ್ಪಿಸಲು ಒಂದು ಬಾರಿಗೆ ಅನ್ವಯ ಆಗುವಂತೆ ಸರ್ಕಾರ ಮಹತ್ವದ ತೀರ್ಮಾನ ಕೈಗೊಳ್ಳಲು ಉದ್ದೇಶಿಸಿದೆ.

ಈ ಸಂಬಂಧ ಸುಪ್ರೀಂಕೋರ್ಟ್ ತೀರ್ಪಿಗೆ ಮುನ್ನ ಓಸಿ ಮತ್ತು ಸಿಸಿಗೆ ಸಲ್ಲಿಸಿರುವ ಅರ್ಜಿಗಳಿಗೆ ಮಾತ್ರ ವಿನಾಯಿತಿ ನೀಡಲು ಸರ್ಕಾರ ಮುಂದಾಗಿದೆ. ಮುಖ್ಯಮಂತ್ರಿ ಸಿದ್ದರಾಮಯ್ಯ ಗೃಹ ಕಚೇರಿ ಕೃಷ್ಣಾದಲ್ಲಿ ಓಸಿ ಮತ್ತು ಸಿಸಿ ಗೊಂದಲ ನಿವಾರಣೆಗೆ ಕರೆದಿದ್ದ ಸಚಿವರು ಮತ್ತು ಅಧಿಕಾರಿಗಳ ಸಭೆಯಲ್ಲಿ ಈ ತೀರ್ಮಾನಕ್ಕೆ ಬರಲಾಗಿದೆ. ಸಭೆ ನಂತರ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಮುಖ್ಯಮಂತ್ರಿ, ಸೂಕ್ತ ಅನುಮತಿ ಇಲ್ಲದೆ, ಸುಮಾರು ಎರಡು ಲಕ್ಷಕ್ಕೂ ಹೆಚ್ಚು ಮನೆಗಳು ನಿರ್ಮಾಣಗೊಂಡಿವೆ. ಈ ಪೈಕಿ ಕೆಲವು ಮನೆಯಲ್ಲಿ ಜನ ವಾಸವಿದ್ದಾರೆ. ಅಂತಹವರಿಗೆ ಒಂದು ಬಾರಿಗೆ ಅನ್ವಯವಾಗುವಂತೆ ಕಾನೂನು ಅವಕಾಶ ಕಲ್ಪಿಸುವ ಕುರಿತು ಚರ್ಚಿಸಲಾಗಿದೆ ಎಂದರು.

ಈಗಾಗಲೇ ನಿರ್ಮಾಣಗೊಂಡ ಕಟ್ಟಡಗಳನ್ನು ನೆಲಸಮ ಮಾಡಲು ಸಾಧ್ಯವಿಲ್ಲ. ಸರ್ಕಾರ ದೃಢ ನಿರ್ಧಾರ ಕೈಗೊಂಡರೆ ಜನರಿಗೆ ಅನಾನುಕೂಲ ಆಗಲಿದೆ. ಸುಪ್ರೀಂ ಕೋರ್ಟ್ ಆದೇಶವನ್ನು ಬೇರೆ ಬೇರೆ ರಾಜ್ಯಗಳಲ್ಲಿ ಯಾವ ರೀತಿ ಅನುಷ್ಠಾನಗೊಳಿಸಲಾಗಿದೆ ಎಂಬ ಮಾಹಿತಿ ಪಡೆಯುವಂತೆ ಅಧಿಕಾರಿಗಳಿಗೆ ಸೂಚಿಸಿದ್ದೇನೆ. ಅಕ್ಟೋಬರ್ 8ರಂದು ಮತ್ತೆ ಸಭೆ ಕರೆದು, ಅನುಮತಿ ಇಲ್ಲದೆ, ನಿರ್ಮಾಣಗೊಂಡ ಮನೆಗಳಿಗೆ ▶ 6ನೇ ಪುಟಕ್ಕೆ

ನೇಮಕಾತಿ ವಯೋಮಿತಿ ಮೂರು ವರ್ಷ ಸಡಿಲಿಕೆ

- ಒಮ್ಮೆಗೆ ಅನ್ವಯವಾಗುವಂತೆ ಸರ್ಕಾರದ ಆದೇಶ
- 2027ರ ಡಿಸೆಂಬರ್ 31ರವರೆಗೆ ಎಲ್ಲಾ ಸಿವಿಲ್ ಹುದ್ದೆಗಳಿಗೆ ಅನ್ವಯ
- ಐದು ವರ್ಷಗಳ ಸಡಿಲಿಕೆಗೆ ಆಗ್ರಹಿಸಿ ಯುವ ಸಮೂಹ ಪ್ರತಿಭಟನೆ ನಡೆಸಿತ್ತು

ಬೆಂಗಳೂರು: ಸರ್ಕಾರಿ ಉದ್ಯೋಗಾಕಾಂಕ್ಷಿ ಯುವಕರಿಗೆ ರಾಜ್ಯ ಸರ್ಕಾರ ದಸರಾ ಉಡುಗೊರೆ ನೀಡಿದೆ. **ರಾಜ್ಯ ಸರ್ಕಾರದ ಸಿವಿಲ್ ನೇರ ನೇಮಕಾತಿಗಳಲ್ಲಿ ಮೂರು ವರ್ಷಗಳ ವಯೋಮಿತಿ ಸಡಿಲಿಕೆ ಮಾಡಿ ಮಹತ್ವದ ಆದೇಶ ಹೊರಡಿಸಲಾಗಿದೆ.**



ಎಲ್ಲ ಪ್ರವರ್ಗಗಳ ಅಭ್ಯರ್ಥಿಗಳಿಗೂ ಒಂದು ಬಾರಿಗೆ ಅನ್ವಯವಾಗುವಂತೆ 3 ವರ್ಷಗಳ ವಯೋಮಿತಿ ಸಡಿಲಿಕೆ ಮಾಡಿ ರಾಜ್ಯ ಸರ್ಕಾರದಿಂದ ಅಧಿಕೃತ ಆದೇಶ ಹೊರಡಿಸಲಾಗಿದೆ. ಇತ್ತೀಚೆಗೆ ಧಾರವಾಡದಲ್ಲಿ ಯುವ ಸಮೂಹ 5 ವರ್ಷಗಳ ವಯೋಮಿತಿ ಸಡಿಲಿಕೆ ಹಾಗೂ ಪಿಎಸ್ಐ/

ವಯೋಮಿತಿ ಸಡಿಲಿಕೆ ಎಷ್ಟು
- ಸಾಮಾನ್ಯ ವರ್ಗ: 35ರಿಂದ 38 ವರ್ಷ
- ಒಬಿಸಿ: 38ರಿಂದ 41 ವರ್ಷ
- ಎಸ್‌ಸಿ/ಎಸ್‌ಟಿ/ಪ್ರವರ್ಗ–1: 40ರಿಂದ 43 ವರ್ಷ

ಕಾನ್ಸ್‌ಟೇಬಲ್ ಹುದ್ದೆಗಳಿಗೆ ನೇಮಕಾತಿ ಆದೇಶಕ್ಕೆ ಆಗ್ರಹಿಸಿ ಜೆನ್ ಜಿ ಮಾದರಿಯಲ್ಲಿ ಪ್ರತಿಭಟನೆ ನಡೆಸಿ ಸರ್ಕಾರಕ್ಕೆ ಬಿಸಿ ಮುಟ್ಟಿಸಿದ್ದರು. ಇದರ ಮಧ್ಯೆ ಇದೇ ತಿಂಗಳ 6ರಂದು ರಾಜ್ಯ ಸರ್ಕಾರ ಸಿವಿಲ್ ಹುದ್ದೆಗಳ ನೇರ ನೇಮಕಾತಿಗಳಿಗೆ ಎರಡು ವರ್ಷ ಸಡಿಲಿಕೆ ಮಾಡಿ ಆದೇಶಿಸಿತ್ತು. ಈಗ 5 ವರ್ಷ ವಯೋಮಿತಿ ಸಡಿಲಿಕೆ ಮಾಡುವಂತೆ ಜನಪ್ರತಿನಿಧಿಗಳು, ಸಂಘಟನೆಗಳು ಸರ್ಕಾರದ ಮೇಲೆ ಒತ್ತಡ ಹಾಕಿದ ಪರಿಣಾಮ ಸರ್ಕಾರ ಇದೀಗ 3 ವರ್ಷಗಳ ಸಡಿಲಿಕೆ ಮಾಡಿದೆ. ಈ ವಯೋಮಿತಿ ಸಡಿಲಿಕೆ 2027ರ ಡಿಸೆಂಬರ್ 31ರೊಳಗೆ ಸರ್ಕಾರ ಹೊರಡಿಸುವ ಎಲ್ಲ ನೇರ ನೇಮಕಾತಿಗಳಿಗೂ ಒಂದು ಬಾರಿ ಎಲ್ಲಾ ಪ್ರವರ್ಗಗಳ ಅಭ್ಯರ್ಥಿಗಳಿಗೂ ಅನ್ವಯಿಸಲಿದೆ. 2019ರಿಂದಲೂ ಕೋವಿಡ್ ಹಾಗೂ ಮತ್ತಿತರೆ ಕಾರಣಗಳಿಂದ ನೇರನೇಮಕಾತಿಗಳಿಗೆ ಸರ್ಕಾರ ಅಧಿಸೂಚನೆ ಹೊರಡಿಸಲಿಲ್ಲ. ಪಿಎಸ್ಐ ಹಾಗೂ ಕಾನ್ಸ್‌ಟೇಬಲ್ ಹುದ್ದೆಗಳಿಗೆ ಪರೀಕ್ಷೆ ನಡೆಸಿತ್ತಾದರೂ ನೇಮಕಾತಿ ಆದೇಶ ಇನ್ನೂ ನೀಡಿಲ್ಲ. ಇದರಿಂದ ಸರ್ಕಾರಿ ಕೆಲಸವನ್ನೇ ನೆಚ್ಚಿಕೊಂಡು ಸ್ಪರ್ಧಾತ್ಮಕ ಪರೀಕ್ಷೆಗಳಿಗೆ ತಯಾರಿ ಮಾಡಿಕೊಂಡಿರುವ ಲಕ್ಷಾಂತರ ಯುವಕರು ವಯೋಮಿತಿ ಮೀರುತ್ತಿರುವ ಹಿನ್ನೆಲೆಯಲ್ಲಿ ಆತಂಕಗೊಂಡಿದ್ದರು.

ದಸರಾ ಪ್ರಯುಕ್ತ ಬೆಂಗಳೂರು–ಮೈಸೂರು ಬಸ್ ದರ ಏರಿಕೆ



ಬೆಂಗಳೂರು: ರಾಜ್ಯ ಸರ್ಕಾರ ಜನತೆಗೆ ಮತ್ತೆ ದರ ಏರಿಕೆಯ ಬರೆ ಎಳೆದಿದೆ. ದಸರಾ ಪ್ರಯುಕ್ತ ಕೆಎಸ್ಆರ್‌ಟಿಸಿ ಬಸ್ ಟಿಕೆಟ್ ದರ 20 ರೂ. ಏರಿಕೆಯಾಗಿದ್ದು, ಪ್ರಯಾಣಿಕರು ಆಕ್ರೋಶ ಹೊರಹಾಕಿದ್ದಾರೆ. ▶ 6ನೇ ಪುಟಕ್ಕೆ

ಪಾರದರ್ಶಕತೆ, ದಕ್ಷತೆ ಹೆಚ್ಚಿಸಲು ರಾಜ್ಯದಲ್ಲಿ ಏಕೀಕೃತ ಭೂಸ್ವಾಧೀನ ವ್ಯವಸ್ಥೆ

ಬೆಂಗಳೂರು: ರಾಜ್ಯಾದ್ಯಂತ ಭೂಸ್ವಾಧೀನ ಪ್ರಸ್ತಾವನೆಗಳಿಗೆ ಪಾರದರ್ಶಕತೆ, ದಕ್ಷತೆ ಮತ್ತು ನ್ಯಾಯ ಸಮ್ಮತತೆಯನ್ನು ಜಾರಿಗೆತರುವ ಗುರಿ ಹೊಂದಿರುವ ಏಕೀಕೃತ ಭೂಸ್ವಾಧೀನ ವ್ಯವಸ್ಥೆ(ಯುಎಲ್ಎಂಎಸ್) 'ಡೇಟಾ ಮಾಡ್ಯೂಲ್ ಅನ್ನು ರಾಜ್ಯ ಸರ್ಕಾರ ಸೋಮವಾರ ಆರಂಭಿಸಿದೆ. ಕರ್ನಾಟಕ ಏಕೀಕೃತ ಭೂಸ್ವಾಧೀನ ವ್ಯವಸ್ಥೆಯು ಭೂಸ್ವಾಧೀನ ಪ್ರಕ್ರಿಯೆಯನ್ನು ಸಮನ್ವಯಗೊಳಿಸಲು ಮತ್ತು ಪ್ರಸ್ತುತ ನಡೆಯುತ್ತಿರುವ ಮತ್ತು ಹಿಂದಿನ ಪ್ರಸ್ತಾವನೆಗಳಿಗೆ ಸಂಬಂಧಿಸಿದ ಮೊಕದ್ದಮೆಗಳನ್ನು ಪತ್ತೆ ಹಚ್ಚಲು ವಿನ್ಯಾಸಗೊಳಿಸಲಾದ ರಾಜ್ಯವ್ಯಾಪಿ ಡಿಜಿಟಲ್ ವೇದಿಕೆಯಾಗಿದೆ ಎಂದು ಸರ್ಕಾರ ತಿಳಿಸಿದೆ. ಈ ಮಾಡ್ಯೂಲ್ ಅನ್ನು ಇ–ಆಡಳಿತ ಇಲಾಖೆಯ ಅಡಿಯಲ್ಲಿ ಸ್ಮಾರ್ಟ್ ಗವರ್ನನ್ಸ್ ಸೆಂಟರ್‌ನ ಯುಎಲ್ಎಂಎಸ್ ಪ್ರಾಜೆಕ್ಟ್ ಅಭಿವೃದ್ಧಿಪಡಿಸಿದೆ ಎಂದು ಕಂದಾಯ ಇಲಾಖೆ ಪ್ರಕಟಣೆಯಲ್ಲಿ ತಿಳಿಸಿದೆ.



ಕೃಷ್ಣಬೈರೇಗೌಡ

ಇಲಾಖೆ ಪ್ರಕಾರ, ಈ ಮಾಡ್ಯೂಲ್ ಎಲ್ಲಾ ಭೂಸ್ವಾಧೀನ ಸಂಸ್ಥೆಗಳು, ಇಲಾಖೆಗಳು ಪ್ರಕ್ರಿಯೆಯ ಉದ್ದಕ್ಕೂ ಭೂಸ್ವಾಧೀನದ ಸಂಪೂರ್ಣ ವಿವರಗಳನ್ನು ನಮೂದಿಸಲು ಅನುವು ಮಾಡಿಕೊಡುತ್ತದೆ. ಇವುಗಳಲ್ಲಿ ಕಂದಾಯ ಇಲಾಖೆ, ನೀರಾವರಿ ಇಲಾಖೆ, ನಗರಾಭಿವೃದ್ಧಿ ಮತ್ತು ಮೂಲಸೌಕರ್ಯ ಅಭಿವೃದ್ಧಿ ಇಲಾಖೆಗಳು, ▶ 6ನೇ ಪುಟಕ್ಕೆ

ಜನಗಣತಿ ಅವಧಿ ವಿಸ್ತರಣೆಗೆ ವೀರಶೈವ–ಲಿಂಗಾಯತ, ಒಕ್ಕಲಿಗರ ಸಂಘ ಒತ್ತಾಯ

- ಕಡಿಮೆ ಅವಧಿಯಲ್ಲಿ ವೈಜ್ಞಾನಿಕ ರೀತಿ ಗಣತಿ ಸಾಧ್ಯವಿಲ್ಲ
- ಸಮರ್ಪಕ ಅಂಕಿ–ಅಂಶ ದಾಖಲಿಸಲು ಕಾಲಾವಕಾಶ ವಿಸ್ತರಿಸಿ: ಈ ಎರಡೂ ಸಂಘಟನೆಗಳ ಪದಾಧಿಕಾರಿಗಳ ಆಗ್ರಹ

ಬೆಂಗಳೂರು, ಸೆ29(ಕೆಎಂಶಿ)–ಸಾಮಾಜಿಕ ಮತ್ತು ಶೈಕ್ಷಣಿಕ ಸಮೀಕ್ಷೆ (ಜಾತಿಗಣತಿ)ಯಲ್ಲಿ ತಾಂತ್ರಿಕ ಸಮಸ್ಯೆಗಳು ಕಂಡುಬರುತ್ತಿರುವ ಹಿನ್ನೆಲೆಯಲ್ಲಿ ಜಾತಿ ಗಣತಿ ಕಾರ್ಯದ ಅವಧಿ ವಿಸ್ತರಿಸುವಂತೆ ಅಖಿಲ ಭಾರತ ವೀರಶೈವ–ಲಿಂಗಾಯತ ಮಹಾಸಭಾ ಹಾಗೂ ರಾಜ್ಯ ಒಕ್ಕಲಿಗರ ಸಂಘ ಇಂದಿಲ್ಲಿ ಜಂಟಿಯಾಗಿ ರಾಜ್ಯ ಸರ್ಕಾರವನ್ನು ಒತ್ತಾಯಿಸಿವೆ.

ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಮಹಾಸಭಾದ ರಾಷ್ಟ್ರೀಯ ಕಾರ್ಯದರ್ಶಿ ಎಚ್.ಎಂ.ರೇಣುಕಾ ಪ್ರಸನ್ನ, ಒಕ್ಕಲಿಗರ ಸಂಘದ ಪ್ರಧಾನ ಕಾರ್ಯದರ್ಶಿ ಟಿ.ಕೋನಪ್ಪರೆಡ್ಡಿ, ಕೆಲವೆಡೆ ಅವೈಜ್ಞಾನಿಕವಾಗಿ ಸಮೀಕ್ಷೆ ನಡೆಸಲಾಗುತ್ತಿದೆ. ಇತ್ತ ಕಡೆ ಗಮನಹರಿಸಬೇಕು. ಇನ್ನು ಕೇವಲ 9 ದಿನಗಳು ಮಾತ್ರ ಸಮಯವಿದೆ. ಈ ಅವಧಿಯಲ್ಲಿ ರಾಜ್ಯದ 7.50 ಕೋಟಿ ▶ 6ನೇ ಪುಟಕ್ಕೆ

ಕಾಂಗ್ರೆಸ್ ಸರ್ಕಾರದಲ್ಲಿ ದುಪ್ಪಟ್ಟು ಕಮಿಷನ್!

ಪಾವತಿಯಾಗದ 33,000 ಕೋಟಿ! ರಾಜ್ಯ ಗುತ್ತಿಗೆದಾರರ ಸಂಘದ ಗಂಭೀರ ಆರೋಪ

ಬೆಂಗಳೂರು: ಕಾಂಗ್ರೆಸ್ ಆಡಳಿತದಲ್ಲಿ ಕಮಿಷನ್ ದರ ದುಪ್ಪಟ್ಟು ಆಗಿದ್ದು, ಭಾರಿ ಪ್ರಮಾಣದ ಬಾಕಿಬಿಲ್ ಪಾವತಿಯಾಗಿಲ್ಲ ಎಂದು ರಾಜ್ಯ ಗುತ್ತಿಗೆದಾರರ ಸಂಘ ಆರೋಪಿಸಿದೆ.

ಈ ಸಂಬಂಧ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರಿಗೆ ಪತ್ರ ಬರೆದಿದ್ದು, ರಾಜ್ಯಾದ್ಯಂತ ಗುತ್ತಿಗೆದಾರರ ಮೇಲೆ ಪರಿಣಾಮ ಬೀರುವ ಪಾವತಿಯಾಗದ ಬಾಕಿ ಬಿಲ್ ಹಾಗೂ ಬಗೆಹರಿಯದ ಸಮಸ್ಯೆಗಳ ಬಗ್ಗೆ ತೀವ್ರ ಕಳವಳ ವ್ಯಕ್ತಪಡಿಸಿದೆ. ಸರ್ಕಾರ ರೂ. 33,000 ಕೋಟಿ ಬಾಕಿ ಉಳಿಸಿಕೊಂಡಿದೆ ಎಂದು ಸಂಘ ಹೇಳಿದೆ. ನಿಮ್ಮ ಸರ್ಕಾರದಿಂದ ನಮಗೆ ಯಾವುದೇ ಪ್ರಯೋಜನವಾಗಿಲ್ಲ ಎಂದು ಪತ್ರದಲ್ಲಿ ಉಲ್ಲೇಖಿಸಲಾಗಿದೆ. ಬಾಕಿ ಪಾವತಿ ಮತ್ತಿತರ ಸಮಸ್ಯೆ ಬಗೆಹರಿಸಲು ಕಳೆದ ಎರಡು ವರ್ಷಗಳಿಂದ ಅನೇಕ ಬಾರಿ ಸಭೆ ನಡೆಸಲಾಗಿದೆ. ಪ್ರತಿ ಬಾರಿಯೂ ನಮ್ಮನ್ನು ಸಮಾಧಾನಪಡಿಸಲಾಗುತ್ತದೆ. ಸಮಸ್ಯೆ ಪರಿಹರಿಸಲು ಅಧಿಕಾರಿಗಳಿಗೆ ಸೂಚಿಸಲಾಗುತ್ತದೆ. ನಿಮ್ಮ ಮೇಲಿನ ಗೌರವದಿಂದ ಮತ್ತು ಸಮಸ್ಯೆಗಳನ್ನು ಪರಿಹರಿಸಲಾಗುವುದು ಎಂಬ ನಂಬಿಕೆಯಿಂದ, ನಮ್ಮ ಗುತ್ತಿಗೆದಾರರು ತಾಳ್ಮೆಯಿಂದ ಇದ್ದರು. ಆದರೆ ಇದುವರೆಗೆ, ನಿಮ್ಮ ಸರ್ಕಾರದಿಂದ ನಮಗೆ ಯಾವುದೇ ಪ್ರಯೋಜನಗಳು ಆಗಿಲ್ಲ. ಹಿಂದಿನ ಸರ್ಕಾರಕ್ಕೆ ಹೋಲಿಸಿದರೆ ಕೆಲವು ಇಲಾಖೆಗಳಲ್ಲಿ ಕಮಿಷನ್ ದರ ದ್ವಿಗುಣ ಗೊಂಡಿದೆ ಎಂದು ಪತ್ರದಲ್ಲಿ ಹೇಳಲಾಗಿದೆ. ಗುತ್ತಿಗೆದಾರರ ಮೂಲಕ ಕಾಮಗಾರಿ ನಿರ್ವಹಿಸುವ 8 ಸರ್ಕಾರಿ ಇಲಾಖೆಗಳು ಬಾಕಿ ಇರುವ ಬಿಲ್‌ಗಳನ್ನು ಬಿಡುಗಡೆ ಮಾಡದಿರುವುದು ಸೇರಿದಂತೆ ▶ 6ನೇ ಪುಟಕ್ಕೆ

ಅರಮನೆ ಆವರಣದಲ್ಲಿ ಜಂಬೂಸವಾರಿ ತಾಲೀಮು

ಕೋಟೆ ಮಾರಮ್ಮ ದೇವಾಲಯದ ಬಳಿ 21 ಕುಶಾಲತೋಪು ಸಿಡಿತ



ಮೈಸೂರು ಅರಮನೆ ಆವರಣದಲ್ಲಿ ಸೋಮವಾರ ಜಂಬೂಸವಾರಿ ತಾಲೀಮು ನಡೆಯಿತು.

ಮೈಸೂರು,ಸೆ.29(ಎಂಟಿವೈ)– ಜಂಬೂಸವಾರಿಗೆ ಕ್ಷಣಗಣನೆ ಆರಂಭವಾಗಿದೆ. ಹಾಗಾಗಿ ಅರಮನೆ ಆವರಣದಲ್ಲಿ ಸೋಮವಾರ ಬೆಳಗ್ಗೆ ಅಂಬಾರಿ ಆನೆಗೆ ಪುಷ್ಪಾರ್ಚನೆ ಮಾಡುವುದು ಸೇರಿದಂತೆ ಜಂಬೂಸವಾರಿ ಮೆರವಣಿಗೆಯ ತಾಲೀಮು ನಡೆಯಿತು.

ಅ.2ರಂದು ಜಂಬೂಸವಾರಿ ನಡೆಯಲಿದ್ದು, ಮೆರವಣಿಗೆಯಲ್ಲಿ ಚಿನ್ನದ ಅಂಬಾರಿ ಆನೆ, ಗಜಪಡೆಯ ಕ್ಯಾಪ್ಟನ್ ಅಭಿಮನ್ಯುವನ್ನು ಕುಮ್ಕಿ ಆನೆಗಳಾದ ರೂಪಾ ಮತ್ತು ಹೇಮಾವತಿಯೊಂದಿಗೆ ರಾಜವಂಶಸ್ಥರ ನಿವಾಸದ ಬಳಿ ಸೆಲ್ಯೂಟ್ ಹೊಡೆಸಿ, ತ್ರಿನೇಶ್ವರಸ್ವಾಮಿ ದೇವಾಲಯದ ಬಳಿಯಿಂದ ಜಯಮಾರ್ತಾಂಡ ದ್ವಾರದ ಮುಂಭಾಗ ಹಾದು ವರಾಹಸ್ವಾಮಿ ದೇವಾಲಯದ ಪಕ್ಕದ ರಸ್ತೆಯಿಂದ ಪುಷ್ಪಾರ್ಚನೆ ಮಾಡುವ ಸ್ಥಳಕ್ಕೆ ಕರೆತರಲಾಯಿತು.

ಡಿಸಿಪಿಗಳಾದ ಆರ್.ಎನ್.ಬಿಂದುಮಣಿ, ಸುಂದರ್‌ರಾಜ್, ಸಿಎಆರ್ ಡಿಸಿಪಿ ಸಿದ್ದನಗೌಡ ಪಾಟೀಲ್, ಎಪಿಸಿಸಿಎಫ್ ಮನೋಜ್ ರಂಜನ್, ಮೈಸೂರು ವೃತ್ತದ ಸಿಎಫ್ ರವಿಶಂಕರ್, ಡಿಸಿಎಫ್ ಡಾ.ಐ.ಬಿ. ಪ್ರಭುಗೌಡ ಅಂಬಾರಿ ಆನೆ ಮೇಲೆ ಪುಷ್ಪಾರ್ಚನೆ ಮಾಡಿದರು. ಈ ವೇಳೆ ಪೊಲೀಸ್ ಬ್ಯಾಂಡ್ ತಂಡ ರಾಷ್ಟ್ರಗೀತೆ ನುಡಿಸಿತು. ಅದೇ ಸಮಯದಲ್ಲಿ ಕೋಟೆ ಮಾರಮ್ಮ ದೇವಾಲಯದ ಬಳಿ ಫಿರಂಗಿ ದಳದ ಸಿಬ್ಬಂದಿ ▶ 6ನೇ ಪುಟಕ್ಕೆ



ಜಂಬೂಸವಾರಿ ತಾಲೀಮು ಅಂಗವಾಗಿ ಕೋಟೆ ಮಾರಮ್ಮ ದೇವಾಲಯದ ಬಳಿ ಕುಶಾಲತೋಪು ಸಿಡಿಸಲಾಯಿತು.

ಅಭಿಮನ್ಯುವಿಗೆ ಕಾವೇರಿ, ರೂಪಾ ಎಡ–ಬಲ ಸಾಥ್

- 14 ಆನೆಗಳಿಗೆ ಜವಾಬ್ದಾರಿ ನಿಗದಿ
- ಮೆರವಣಿಗೆ ಮುಂಚೂಣಿಯಲ್ಲಿ ನಿಶಾನೆ ಹೊಣೆ ಧನಂಜಯನದು!

ಮೈಸೂರು,ಸೆ.29(ಎಂಟಿವೈ)– ಗಜಪಡೆಯ 14 ಆನೆಗಳಿಗೆ ಅರಣ್ಯ ಇಲಾಖೆ ಜವಾಬ್ದಾರಿ ನಿಗದಿ ಮಾಡಿದೆ. ಅಂಬಾರಿ ಆನೆ ಅಭಿಮನ್ಯುವಿಗೆ ಕಾವೇರಿ ಮತ್ತು ರೂಪಾ ಕುಮ್ಕಿ ಆನೆಗಳಾಗಿವೆ. ಮೈಸೂರು ಅರಮನೆ ಆವರಣದಲ್ಲಿ ಗಜಪಡೆಯ ಮಾವುತರು ಮತ್ತು ಕಾವಾಡಿಗಳಿಗೆ ಕಿಟ್ ವಿತರಿಸಿದ ಅರಣ್ಯ ಸಚಿವ ಈಶ್ವರ್ ಖಂಡ್ರೆ, ಜಂಬೂಸವಾರಿಯಲ್ಲಿ ಯಾವ ಯಾವ ಆನೆ ಯಾವ ಜವಾಬ್ದಾರಿ ನಿಭಾಯಿಸುತ್ತದೆ ಎಂದು ಆನೆಗಳ ಹೆಸರು ಪ್ರಕಟಿಸಿದರು. ಚಿನ್ನದ ಅಂಬಾರಿ ಹೊರಲಿರುವ ಅಭಿಮನ್ಯುವಿಗೆ ಅಕ್ಕ–ಪಕ್ಕ ಕಾವೇರಿ ಹಾಗೂ ರೂಪಾ ಕುಮ್ಕಿ ಆನೆಗಳಾಗಿ ಸಾಗುತ್ತಾರೆ. ಜಂಬೂಸವಾರಿ ಮುಂಚೂಣಿಯಲ್ಲಿ ನಿಶಾನೆಯಾಗಿ ಧನಂಜಯ, ನೌಪತ್ ಹೊಣೆ ಗೋಪಿಯದ್ದು. ಮೊದಲ ತಂಡದ ಸಾಲಾನೆಗಳಾಗಿ ಮಹೇಂದ್ರ, ಶ್ರೀಕಂಠ ಮತ್ತು ಲಕ್ಷ್ಮೀ, ಎರಡನೇ ತಂಡದ ಸಾಲಾನೆ ಗಳಾಗಿ ಕಂಜನ್, ಭೀಮ ಹಾಗೂ ಏಕಲವ್ಯ, ಮೂರನೇ ತಂಡದ ಸಾಲಾನೆಗಳಾಗಿ ಪ್ರಶಾಂತ, ಸುಗ್ರೀವ ಹಾಗೂ ಹೇಮಾವತಿ ಆನೆಯನ್ನು ಆಯ್ಕೆ ಮಾಡಲಾಗಿದೆ ಎಂದು ಸಚಿವರು ತಿಳಿಸಿದರು.

ಮೊದಲ ಬಾರಿ ಬಂದ ರೂಪಾಳಿಗೆ ಲಾಟರಿ!

ಇದೇ ಮೊದಲ ಬಾರಿಗೆ ದಸರಾಗೆ ಬಂದಿರುವ ಭೀಮನಕಟ್ಟೆ ಕ್ಯಾಂಪ್‌ನ ರೂಪಾ ಆನೆಗೆ ಕುಮ್ಕಿ ಆನೆಯಾಗಿ ಸಾಗುವ ಅವಕಾಶ ಸಿಕ್ಕಿದೆ. ಕಳೆದ 2 ವರ್ಷದಿಂದ ಆಗಮಿಸುತ್ತಿರುವ ಲಕ್ಷ್ಮೀಗೆ ಈ ಬಾರಿ ಕುಮ್ಕಿ ಆನೆಯಾಗಿ ಅವಕಾಶ ಸಿಗಬಹುದೆಂಬ ನಿರೀಕ್ಷೆ ಇತ್ತು. ಅದಕ್ಕಾಗಿ ಹಲವು ಬಾರಿ ತಾಲೀಮಿನಲ್ಲಿ ತರಬೇತಿಯನ್ನೂ ನೀಡಲಾಗಿತ್ತು ಆ ಕಾರಣದಿಂದಲೇ ಮೊದಲ ತಂಡದಲ್ಲಿ ಲಕ್ಷ್ಮೀ ಆನೆಯನ್ನು ಕರೆತರಲಾಗಿತ್ತು. ಆದರೆ, ಅಚ್ಚರಿಯ ಬೆಳವಣಿಗೆಯಲ್ಲಿ ರೂಪಾಗೆ ಕುಮ್ಕಿ ಆನೆಯಾಗಿ ಬಡ್ತಿ ಸಿಕ್ಕಿದೆ. ಈ ಹಿಂದೆ ಹಲವು ಬಾರಿ ದಸರಾದಲ್ಲಿ ಭಾಗಿಯಾಗಿದ್ದ, ಕುಮ್ಕಿ ಆನೆಯಾಗಿ ಅನುಭವ ಇರುವ ಕಾವೇರಿಗೆ ನಿರೀಕ್ಷೆಯಂತೆ ಮತ್ತೆ ಕುಮ್ಕಿ ಆನೆಯಾಗಿ ಸಾಗುವ ಅವಕಾಶ ದೊರೆತಿದೆ.

ಸಹಕಾರ ಯೂನಿಯನ್‌ಗೆ ಆಯ್ಕೆ...



ಮೈಸೂರಿನ ಸಹಕಾರ ಯೂನಿಯನ್‌ಗೆ ಎರಡನೇ ಬಾರಿ ನಿರ್ದೇಶಕರಾಗಿ ಆಯ್ಕೆಯಾದ ಅಡುಗೆ ಗುತ್ತಿಗೆದಾರರೂ ಆದ ಅಗಸ್ತ್ಯ ಕ್ರೆಡಿಟ್ ಕೋ ಆಪರೇಟಿವ್ ಸೊಸೈಟಿ ನಿರ್ದೇಶಕ ಎಚ್.ಎಸ್.ಪ್ರಶಾಂತ ತಾತಾಚಾರ್ (ಕಣ್ಣ) ಅವರನ್ನು ಶಾಸಕ ಜಿ.ಡಿ.ಹರೀಶ್‌ಗೌಡರು ಅಭಿನಂದಿಸಿದರು. ಸೊಸೈಟಿ ಅಧ್ಯಕ್ಷ ಎಂ.ಡಿ.ಗೋಪಿನಾಥ್, ಖಜಾಂಚಿ ಕೆ.ನಾಗರಾಜ್, ಸಹಕಾರ ರತ್ನ ಸಿ.ವಿ.ಪಾರ್ಥಸಾರಥಿ ಇನ್ನಿತರರಿದ್ದರು.

ಮುಕ್ತ ದೂರ ಶಿಕ್ಷಣ ವ್ಯವಸ್ಥೆಯಿಂದ ಗುಣಮಟ್ಟದ ಉನ್ನತ ಶಿಕ್ಷಣ ಲಭ್ಯ

ಭಾರತೀಯ ವಿವಿಗಳ ಸಂಶೋಧನಾ ವಿಭಾಗದ ಜಂಟಿ ನಿರ್ದೇಶಕ ಡಾ.ಅಮರೇಂದ್ರ ಪಾಣಿ ವಿಶ್ವಾಸ

ಮೈಸೂರು, ಸೆ.29(ಎಂಕೆ)– ಮುಕ್ತ ದೂರಶಿಕ್ಷಣ ವ್ಯವಸ್ಥೆಯಿಂದ ಎಲ್ಲರಿಗೂ ಗುಣಮಟ್ಟದ ಉನ್ನತ ಶಿಕ್ಷಣ ದೊರೆಯಲಿದೆ ಎಂದು ಭಾರತೀಯ ವಿಶ್ವವಿದ್ಯಾಲಯಗಳ ಸಂಘ(ಎಐಯು)ದ ಸಂಶೋಧನಾ ವಿಭಾಗದ ಜಂಟಿ ನಿರ್ದೇಶಕ ಡಾ.ಅಮರೇಂದ್ರ ಪಾಣಿ ಅಭಿಪ್ರಾಯಿಸಿದರು.

ಕರ್ನಾಟಕ ರಾಜ್ಯ ಮುಕ್ತ ವಿವಿ ಘಟಿಕೋತ್ಸವ ಸಭಾಂಗಣದಲ್ಲಿ ಭಾರತೀಯ ವಿಶ್ವವಿದ್ಯಾಲಯಗಳ ಸಂಘದ ಸಹಯೋಗದೊಂದಿಗೆ ಆಯೋಜಿಸಿರುವ 'ಸಮಕಾಲೀನ ಜಾಗತಿಕ ಸನ್ನಿವೇಶದಲ್ಲಿ ಮುಕ್ತ ದೂರಶಿಕ್ಷಣದ ಪ್ರಸ್ತುತತೆ ಮತ್ತು ಅದರ ಭವಿಷ್ಯದ ದೃಷ್ಟಿಕೋನಗಳು' ಕುರಿತ ಎರಡು ದಿನಗಳ ಅಂತರರಾಷ್ಟ್ರೀಯ ಸಮ್ಮೇಳನವನ್ನು ಉದ್ಘಾಟಿಸಿ ಮಾತನಾಡಿದ ಅವರು, ಮುಂದಿನ ದಿನಗಳಲ್ಲಿ ಮುಕ್ತ ದೂರ ಶಿಕ್ಷಣಕ್ಕೆ ಹೆಚ್ಚಿನ ಅವಕಾಶ ಮತ್ತು ಆದ್ಯತೆ ದೊರೆಯಲಿದೆ ಎಂದರು.

ಮೈಸೂರು ವಿವಿ ವಿಶ್ರಾಂತ ಕುಲಪತಿ ಪ್ರೊ.ಕೆ.ಎಸ್.ರಂಗಪ್ಪ ಮಾತನಾಡಿ,



ಕರ್ನಾಟಕ ರಾಜ್ಯ ಮುಕ್ತ ವಿವಿ ಘಟಿಕೋತ್ಸವ ಸಭಾಂಗಣದಲ್ಲಿ ಆಯೋಜಿಸಿರುವ ಎರಡು ದಿನಗಳ ಅಂತರರಾಷ್ಟ್ರೀಯ ಸಮ್ಮೇಳನವನ್ನು ಭಾರತೀಯ ವಿಶ್ವವಿದ್ಯಾಲಯಗಳ ಸಂಘ(ಎಐಯು)ದ ಸಂಶೋಧನಾ ವಿಭಾಗದ ಜಂಟಿ ನಿರ್ದೇಶಕ ಡಾ.ಅಮರೇಂದ್ರ ಪಾಣಿ ಉದ್ಘಾಟಿಸಿ, ಮಾತನಾಡಿದರು.

ದೇಶದ ಸಾಕ್ಷರತೆ ಪ್ರಮಾಣ ಹೆಚ್ಚಾಗಬೇಕಾದರೆ ಮುಕ್ತ ದೂರಶಿಕ್ಷಣ ವ್ಯವಸ್ಥೆ ಅಳವಡಿಕೆ ಹೆಚ್ಚಾಗಬೇಕು. ದೇಶದಲ್ಲಿ ಶೇ.70ರಷ್ಟು ಜನರು ಗ್ರಾಮೀಣ ಪ್ರದೇಶದವರಾಗಿದ್ದು, ಜೀವನ ನಿರ್ವಹಣೆಗಾಗಿ ಒಂದಲ್ಲಾ ಒಂದು ವೃತ್ತಿಯಲ್ಲಿ ತೊಡಗಿಕೊಳ್ಳಬೇಕಾಗಿರುತ್ತದೆ. ಅವರೆಲ್ಲರನ್ನು ವಿದ್ಯಾವಂತರನ್ನಾಗಿ ಮಾಡಲು ದೂರ ಶಿಕ್ಷಣ ವ್ಯವಸ್ಥೆ ಅವಶ್ಯವಾಗಿದೆ ಎಂದರು.

ಚೀನಾ, ಅಮೆರಿಕಾ, ಕೊರಿಯಾ, ಕೆನಡಾ, ಜರ್ಮನಿ ಮುಂತಾದ ದೇಶಗಳಲ್ಲಿ ಮುಕ್ತ ದೂರ ಶಿಕ್ಷಣ ವ್ಯವಸ್ಥೆ ಹೆಚ್ಚಾಗಿದ್ದು, ಮನೆಯಲ್ಲಿ ಅಥವಾ ಕೆಲಸ ಮಾಡುತ್ತಲೇ ಪದವಿಗಳನ್ನು ತೆಗೆದುಕೊಳ್ಳುವವರ ಸಂಖ್ಯೆ ಹೆಚ್ಚಿದೆ. ಹಾಗಾಗಿಯೇ ಆ ದೇಶಗಳ ಸಾಕ್ಷರತೆ ಪ್ರಮಾಣ ಹೆಚ್ಚಿದೆ. ಭಾರತದಲ್ಲಿಯೂ ಮುಕ್ತ ವಿವಿಯಂತಹ ಶಿಕ್ಷಣ ಸಂಸ್ಥೆಗಳು ಹೆಚ್ಚಾಗಬೇಕು ಎಂದು ವಿವರಿಸಿದರು.


> "ವಿಶ್ವವಿದ್ಯಾನಿಲಯಗಳಲ್ಲಿ ಸಂಶೋಧನೆಗಳು ಹೆಚ್ಚಾಗಬೇಕು. ನಿರಂತರವಾಗಿ ಒಂದಲ್ಲಾ ಒಂದು ಯೋಜನೆಗಳನ್ನು ಹಾಕಿಕೊಂಡು ಶೈಕ್ಷಣಿಕ ಚಟುವಟಿಕೆಗಳನ್ನು ನಡೆಸುತ್ತಿರಬೇಕು. ಆಗಲೇ ವಿವಿಗಳಿಗೆ ಜಾಗತಿಕ ಮನ್ನಣೆ ಜೊತೆಗೆ ಶೈಕ್ಷಣಿಕ ಪ್ರಗತಿ ಸಾಧಿಸಲು ಸಾಧ್ಯವಾಗುತ್ತದೆ. ಹಾಗೆಯೇ ಎಲ್ಲರೂ ನೇರವಾಗಿ ಕಾಲೇಜಿಗೆ ಹೋಗಿ ವಿದ್ಯಾಭ್ಯಾಸ ಮಾಡಿ, ಉನ್ನತ ಶಿಕ್ಷಣ ಪಡೆಯಲು ಸಾಧ್ಯವಿಲ್ಲ. ಆದ್ದರಿಂದ ಮುಕ್ತ ದೂರಶಿಕ್ಷಣ ವ್ಯವಸ್ಥೆ ಅವಲಂಬನೆ ಅವಶ್ಯವಾಗಲಿದೆ. –ಡಾ.ಅಮರೇಂದ್ರ ಪಾಣಿ

ಭಾರತದಲ್ಲಿ ಮುಕ್ತ ಅವಕಾಶವಿದೆ: ಕೆಎಸ್‌ಒಯು ಕುಲಪತಿ ಪ್ರೊ.ಶರಣಪ್ಪ ವಿ.ಹಲಸೆ ಮಾತನಾಡಿ, ಆಫ್ರಿಕಾ ಖಂಡ ಹಾಗೂ ಇನ್ನಿತರೆ ದೇಶಗಳಿಗೆ ಹೋಲಿಸಿದರೆ, ಭಾರತದಲ್ಲಿ ಮುಕ್ತ ದೂರ ಶಿಕ್ಷಣ ವ್ಯವಸ್ಥೆ ಉತ್ತಮವಾಗಿದ್ದು, ಮಿತವ್ಯಯದಲ್ಲಿ ಶುಲ್ಕ ಸೇರಿದಂತೆ ಇನ್ನಿತರೆ ಸೌಲಭ್ಯಗಳು ದೊರೆಯಲಿವೆ. ವಿದೇಶಿ ವಿದ್ಯಾರ್ಥಿಗಳು ಗುಣಮಟ್ಟದ ಶಿಕ್ಷಣ ಪಡೆಯಲು ಭಾರತದಲ್ಲಿ ಮುಕ್ತ ಅವಕಾಶವಿದೆ ಎಂದು ತಿಳಿಸಿದರು.

ಏಷ್ಯಾ ಕಾಮನ್‌ವೆಲ್ತ್ ಶೈಕ್ಷಣಿಕ ಮಾಧ್ಯಮ ಕೇಂದ್ರ(ಸಿಇಎಂಸಿಎ)ದ ನಿರ್ದೇಶಕ ಡಾ.ಬಿ.ಷಡ್ರಾಚ್, ಛತ್ತೀಸ್‌ಗಢದ ದುರ್ಗ್‌ನಲ್ಲಿರುವ ಹೇಮಚಂದ್ ಯಾದವ್ ವಿಶ್ವವಿದ್ಯಾಲಯ ಕುಲಪತಿ ಪ್ರೊ.ಸಂಜಯ್ ತಿವಾರಿ, ಕೆಎಸ್‌ಒಯು ಕುಲಸಚಿವ ಪ್ರೊ.ಎಸ್.ಕೆ.ನವೀನ್‌ಕುಮಾರ್, ಡೀನ್(ಅಕಾಡೆಮಿ) ಪ್ರೊ.ರಾಮನಾಥಂ ನಾಯ್ಡು, ಹಣಕಾಸು ಅಧಿಕಾರಿ ಪ್ರೊ.ಎಸ್.ನಿರಂಜನ್‌ರಾಜ್, ಡೀನ್(ಸ್ಟಡಿ ಸೆಂಟರ್) ಡಾ.ಎನ್.ಆರ್.ಚಂದ್ರೇಗೌಡ, ಸಂಘಟನಾ ಕಾರ್ಯದರ್ಶಿ ಡಾ.ಜಿ.ನಟರಾಜು, ಪ್ರೊ.ಆರ್.ಹೆಚ್.ಪವಿತ್ರ ಸೇರಿದಂತೆ ಮತ್ತಿತರರು ಉಪಸ್ಥಿತರಿದ್ದರು.

ಇಂದು ಮಿಶ್ರ ಸಮರ ಕಲೆ ಕ್ರೀಡಾಕೂಟ

ಮೈಸೂರು,ಸೆ.29(ಜಿಎ)–ಕರ್ನಾಟಕ ರಾಜ್ಯ ಮಿಕ್ಸ್ಡ್ ಮಾರ್ಷಲ್ ಆರ್ಟ್ಸ್ ಅಸೋಸಿಯೇಷನ್ ವತಿಯಿಂದ ನಾಳೆ(ಸೆ.30) ಬೆಳಗ್ಗೆ 11.30ಕ್ಕೆ ಮಹಾರಾಜ ಒಳಾಂಗಣ ಕ್ರೀಡಾಂಗಣದಲ್ಲಿ ಮಿಶ್ರ ಸಮರ ಕಲೆ ಕ್ರೀಡಾಕೂಟ ಆಯೋಜಿಸಲಾಗಿದೆ.



ಮೈಸೂರು ಜಿಲ್ಲಾ ಪತ್ರಕರ್ತರ ಭವನದಲ್ಲಿ ಸುದ್ದಿಗೋಷ್ಠಿಯಲ್ಲಿ ಅಸೋಸಿಯೇಷನ್ ಜಿಲ್ಲಾಧ್ಯಕ್ಷ ರ್‍ಯಾಂಬೊ ಕಿರಣ್ ಮಾತನಾಡಿ, ಸಾಮಾನ್ಯವಾಗಿ ಕರಾಟೆ, ಕುಸ್ತಿ, ಬಾಕ್ಸಿಂಗ್, ಕಿಕ್ ಬಾಕ್ಸಿಂಗ್ ಮೊದಲಾದ ಪ್ರತ್ಯೇಕ ಸಮರ ಕಲೆಗಳನ್ನು ಎಲ್ಲರೂ ವೀಕ್ಷಿಸಿರುತ್ತಾರೆ. ಆದರೆ ಈ ಕ್ರೀಡಾಕೂಟದಲ್ಲಿ ಪಾಲ್ಗೊಳ್ಳುವವರು ಈ ಎಲ್ಲವನ್ನೂ ಒಟ್ಟಿಗೇ ಪ್ರದರ್ಶಿಸುತ್ತಾರೆ. ಈ ಮಿಶ್ರ ಸಮರ ಕಲೆ ಈಚೆಗೆ ವೇಗವಾಗಿ ಪ್ರಸಿದ್ಧಿ ಪಡೆಯುತ್ತಿದೆ ಎಂದು ಹೇಳಿದರು.

ಸಂಸ್ಥೆಯ ರಾಜ್ಯಾಧ್ಯಕ್ಷ ಶ್ರೀನಿವಾಸ ರೆಡ್ಡಿ ಮಾತನಾಡಿ, ಇದಕ್ಕೆ ನೋಂದಣಿ ಶುಲ್ಕವಿಲ್ಲ. ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆ ಆಯುಕ್ತರಾದ ಆರ್.ಚೇತನ್, ಪದ್ಮಶ್ರೀ ಪ್ರಶಸ್ತಿ ಪುರಸ್ಕೃತರಾದ ಡಾ.ಹಾಸನ ರಘು, ಡಿಸಿಪಿ ಸುಂದರ್ ರಾಜ್, ಡಿ.ವೆಂಕಟೇಶ್, ಡಿಸಿಪಿ ಶಿವರಾಜ್, ಲಯನ್ ವೆಂಕಟೇಶ್, ಪ್ರೊ.ಮಹದೇವ ಭರಣಿ ಮುಖ್ಯ ಅತಿಥಿಗಳಾಗಿರುವರು. ತೀರ್ಪುಗಾರರಾಗಿ ಅಬ್ದುಲ್ ಮುನೀರ್ ಪಾಲ್ಗೊಳ್ಳಲಿದ್ದಾರೆ ಎಂದರು.

ದಸರಾ ಕ್ರೀಡಾಕೂಟದಲ್ಲಿ ಮಿಶ್ರ ಸಮರ ಕಲೆಯನ್ನು ಸೇರಿಸುವಂತೆ ಅಂತಿಮ ಹಂತದಲ್ಲಿ ಮನವಿ ನೀಡಿದ ಪರಿಣಾಮ ದಸರಾ ಕ್ರೀಡಾಕೂಟದಲ್ಲಿ ಅವಕಾಶ ದೊರೆಯಲಿಲ್ಲ. ಹಾಗಾಗಿ ಪ್ರತ್ಯೇಕವಾಗಿ ಆಯೋಜಿಸಲಾಗುತ್ತಿದೆ. ಮುಂದಿನ ಬಾರಿ ಅವಕಾಶ ನೀಡುವುದಾಗಿ ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆ ಆಯುಕ್ತರು ಭರವಸೆ ನೀಡಿ, ಈ ಬಾರಿ ಪ್ರಮಾಣ ಪತ್ರ ನೀಡುತ್ತೇನೆ ಎಂದು ತಿಳಿಸಿದ್ದಾರೆ ಎಂದರು.

ಗೋಷ್ಠಿಯಲ್ಲಿ ಕೃಷ್ಣಸ್ವಾಮಿ, ಸುನಿಲ್, ಶಶಿಕುಮಾರ್, ಅಂಬರೀಶ್ ಇದ್ದರು.

ಕಬ್ಬಿಗೆ ವೈಜ್ಞಾನಿಕ ಬೆಲೆ ನಿಗದಿಗೆ ಆಗ್ರಹಿಸಿ ರೈತರ ಪ್ರತಿಭಟನೆ

ಮೈಸೂರು,ಸೆ.29(ಜಿಎ)–ಕಬ್ಬಿಗೆ ವೈಜ್ಞಾನಿಕ ಬೆಲೆ ನಿಗದಿ ಮಾಡಬೇಕೆಂದು ಒತ್ತಾಯಿಸಿ ಕರ್ನಾಟಕ ರಾಜ್ಯ ಕಬ್ಬು ಬೆಳೆಗಾರರ ರೈತ ಸಂಘದಿಂದ ಜಿಲ್ಲಾಧಿಕಾರಿ ಕಚೇರಿ ಬಳಿ ಪ್ರತಿಭಟನೆ ನಡೆಸಲಾಯಿತು.



ಕಬ್ಬಿಗೆ ವೈಜ್ಞಾನಿಕ ಬೆಲೆ ನಿಗದಿ ಮಾಡಬೇಕೆಂದು ಒತ್ತಾಯಿಸಿ ಕರ್ನಾಟಕ ರಾಜ್ಯ ಕಬ್ಬು ಬೆಳೆಗಾರರ ರೈತ ಸಂಘದಿಂದ ಜಿಲ್ಲಾಧಿಕಾರಿ ಕಚೇರಿ ಬಳಿ ಪ್ರತಿಭಟನೆ ನಡೆಸಲಾಯಿತು.

ಪ್ರಸಕ್ತ ಸಾಲಿಗೆ ಕೇಂದ್ರ ಸರ್ಕಾರ ಬೆಲೆ ನಿಗದಿ ಮಾಡಿರುವ ಎಫ್‌ಆರ್‌ಪಿ ಪರಿಶೀಲಿಸಿ ರಾಜ್ಯ ಸರ್ಕಾರದ ಸಲಹಾ ಬೆಲೆ ಕಾಯ್ದೆಯಡಿ ಪ್ರತಿ ಟನ್ ಕಬ್ಬಿಗೆ 4000 ರೂ. ನಿಗದಿ ಮಾಡಬೇಕು. ಕಾರ್ಖಾನೆ ಮುಂಭಾಗ ತೂಕದ ಯಂತ್ರ ಅಳವಡಿಸಬೇಕು. 2023–24ನೇ ಸಾಲಿನ ಉಪ ಉತ್ಪನ್ನಗಳ ಲಾಭಾಂಶ ಹಂಚಿಕೆ ಮಾಡಬೇಕು. ಕಾರ್ಖಾನೆ ಮಾಲೀಕರು ಸಕ್ಕರೆ ಇಳುವರಿಯಲ್ಲಿ ಕಡಿಮೆ ತೋರುತ್ತಿದ್ದು ಜಿಲ್ಲಾಡಳಿತ ಅಧಿಕಾರಿಗಳ ತಂಡ ರಚನೆ ಮಾಡಿ ಇದರ ಬಗ್ಗೆ ಕ್ರಮ ವಹಿಸಬೇಕು ಎಂದು ಪ್ರತಿಭಟನಾಕಾರರು ಒತ್ತಾಯಿಸಿದರು.

ಜಿಲ್ಲೆಯ ಹುಣಸೂರು, ಪಿರಿಯಾಪಟ್ಟಣ, ಕೆ.ಆರ್.ನಗರ, ಹೆಚ್.ಡಿ.ಕೋಟೆ ಭಾಗದ ರೈತರು ಅತೀ ಹೆಚ್ಚು ತಂಬಾಕು ಬೆಳೆಗಳನ್ನೇ ನಂಬಿದ್ದಾರೆ. ತಂಬಾಕು ಬೆಲೆ ಕುಸಿತವಾದ್ದರಿಂದ ತಂಬಾಕು ಮಂಡಳಿ ಹಾಗೂ ಜಿಲ್ಲಾಡಳಿತ ಸ್ಥಳೀಯ ಸಂಸದರೊಂದಿಗೆ ಸಭೆ ನಡೆಸಿ ಸೂಕ್ತ ನ್ಯಾಯ ಒದಗಿಸಬೇಕು. ಮೈಸೂರು–ಚಾಮರಾಜನಗರ ಜಿಲ್ಲೆಯ ಕಾಡಂಚಿನ ಗ್ರಾಮಗಳಲ್ಲಿ ಮಾನವ–ಪ್ರಾಣಿ ಸಂಘರ್ಷ ಹೆಚ್ಚಿದ್ದು, ಕೂಡಲೇ ಸಮಸ್ಯೆ ಬಗೆಹರಿಸಬೇಕು. ಕಾಡುಪ್ರಾಣಿ ಅಸಹಜವಾಗಿ ಸಾವನ್ನಪ್ಪಿದರೆ ಸಂಬಂಧಪಟ್ಟ ಸಚಿವರು ರಾಜೀನಾಮೆ ನೀಡಬೇಕು. ಪ್ರಾಣಿ ಸಂಘರ್ಷದಿಂದ ರೈತ ಸಾವನ್ನಪ್ಪಿದರೆ ರಾಜ್ಯ ಸರ್ಕಾರ ಕೊಡುತ್ತಿರುವ ಪರಿಹಾರವನ್ನು ಹೆಚ್ಚಳ ಮಾಡಬೇಕು. ನಂಜನಗೂಡು ತಾಲೂಕು ಏತ ನೀರಾವರಿ ವಿಳಂಬವಾಗಿದ್ದು, ತಕ್ಷಣ ಕಾಮಗಾರಿ ಪೂರ್ಣಗೊಳಿಸಿ ಕೆರೆ–ಕಟ್ಟೆಗಳಿಗೆ ನೀರು ತುಂಬಿಸಬೇಕು ಎಂದು ಆಗ್ರಹಿಸಿದರು.

ಭತ್ತ ಕಟಾವಿಗೆ ಮುಂಚಿತವಾಗಿ ಖರೀದಿ ಕೇಂದ್ರ ತೆರೆದು ಎಂಎಸ್‌ಪಿ ಬೆಲೆಗಿಂತ ಹೆಚ್ಚುವರಿಯಾಗಿ 500 ರೂ ಸಹಾಯ ಧನ ನೀಡಬೇಕು. ಬನ್ನೂರು ಭಾಗದಲ್ಲಿ ಕೊಡಯ್ಸ್ ಬಿಲ್ವರಿ ಫ್ಯಾಕ್ಟರಿ ಇಲ್ಲದ ನೀರನ್ನು ಖಾಸಗಿ ಕೊಳವೆಬಾವಿಗಳಿಂದ ಹಾಗೂ ನಾಲೆಗಳ ಮೂಲಕ ಅಕ್ರಮವಾಗಿ ನೀರನ್ನು ಕಾರ್ಖಾನೆಗೆ ತರುವುದನ್ನು ನಿಲ್ಲಿಸಬೇಕು. ಜಿಲ್ಲೆಯ ಎಲ್ಲಾ ಎಪಿಎಂಸಿ ಮಾರುಕಟ್ಟೆಗಳಲ್ಲಿ ಹಳೆ ತೂಕದ ಯಂತ್ರ ಬದಲಾಯಿಸಿ ಡಿಜಿಟಲ್ ಯಂತ್ರ ಅಳವಡಿಸಬೇಕು. ಮೈಸೂರು, ಚಾಮರಾಜನಗರ ಜಿಲ್ಲೆಯಲ್ಲಿ ಹೆಚ್ಚು ಬಾಳೆ ಬೆಳೆದಿದ್ದು ದರ ಕುಸಿತವಾದ್ದರಿಂದ ಸೂಕ್ತ ಬೆಲೆ ಸಿಗುತ್ತಿಲ್ಲ. ಹೀಗಾಗಿ ಎಪಿಎಂಸಿಗಳಲ್ಲಿ ಹೊರರಾಜ್ಯದ ಬಾಳೆ ಖರೀದಿಗೆ ಕಡಿವಾಣ ಹಾಕಬೇಕು ಎಂದು ಒತ್ತಾಯಿಸಿದರು.

ಪ್ರತಿಭಟನೆಯಲ್ಲಿ ಸಂಘದ ರಾಜ್ಯಾಧ್ಯಕ್ಷ ಹಾಡ್ಯ ರವಿ, ಮಹೇಶ್, ಸ್ವಾಮಿರಾಜ್, ಕುಮಾರ್, ಅಂಕನಹಳ್ಳಿ ತಿಮ್ಮಪ್ಪ, ಸಿದ್ದ, ರವಿ, ಶೋಭಾ, ಗುರುಮಲ್ಲಪ್ಪ, ಚಿಕ್ಕಸ್ವಾಮಿ, ಮಹದೇವಸ್ವಾಮಿ ಸೇರಿದಂತೆ ಹಲವರು ಪಾಲ್ಗೊಂಡಿದ್ದರು.

ಸಮೀಕ್ಷೆಯ ವೇಳೆ ಧರ್ಮ ಕಾಲಂನಲ್ಲಿ 'ಲಿಂಗಾಯತ' ಬರೆಸಿ

ಮೈಸೂರು,ಸೆ.29(ಜಿಎ)–ರಾಜ್ಯ ಸರ್ಕಾರ ನಡೆಸುತ್ತಿರುವ ಸಾಮಾಜಿಕ, ಶೈಕ್ಷಣಿಕ ಸಮೀಕ್ಷೆ ವೇಳೆ ಲಿಂಗಾಯತ ಸಮುದಾಯದವರು ಇತರೆ ಕಾಲಂನಲ್ಲಿ ಧರ್ಮ ಲಿಂಗಾಯತ, ಜಾತಿ ಕಾಲಂನಲ್ಲಿಯೂ ಲಿಂಗಾಯತ ಎಂದು ಬರೆಸಬೇಕು ಎಂದು ಜಾಗತಿಕ ಲಿಂಗಾಯತ ಮಹಾಸಭಾ ಜಿಲ್ಲಾ ಘಟಕದ ಅಧ್ಯಕ್ಷ ಶರಣ ಮಹದೇವಪ್ಪ ಮನವಿ ಮಾಡಿದರು.

ಮೈಸೂರು ಜಿಲ್ಲಾ ಪತ್ರಕರ್ತರ ಭವನದಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಸಣ್ಣ ಸಣ್ಣ ಸಮುದಾಯಗಳು ಲಿಂಗಾಯತ ಧರ್ಮದಿಂದ ದೂರ ಸರಿಯುತ್ತಿರುವ ಈ ದಿನಗಳಲ್ಲಿ ಅಖಂಡ ಲಿಂಗಾಯತ ಸಮಾಜವನ್ನು ಉಳಿಸಿಕೊಳ್ಳಲು ಪ್ರಯತ್ನಿಸಬೇಕಾಗಿದೆ. ಹೀಗಾಗಿ ಸಮೀಕ್ಷೆ ವೇಳೆ ಗೊಂದಲಕ್ಕೆ ಒಳಗಾಗಬಾರದೆಂದು ಕೋರಿದರು. ಇಲ್ಲಿವರೆಗೂ ನಡೆದಿರುವ ಸಮೀಕ್ಷೆ ವೇಳೆ ಹಲವರು ತಮ್ಮ ಧರ್ಮ ಕಾಲಂನಲ್ಲಿ ಹಿಂದೂ ಎಂದು ಬರೆಸಿದ್ದಾರೆ. ಆದರೆ, ಈಗ ಈ ರೀತಿ ಮಾಡದೇ ಲಿಂಗಾಯತ ಎಂದೇ ಬರೆಸಬೇಕು. ಜಾತಿ ಕಾಲಂನಲ್ಲಿ ಜಾತಿಯೊಂದಿಗೆ ಲಿಂಗಾಯತ ಸೇರಿಸಿ ಬರೆಸಬೇಕು ಎಂದರು.

ಶಾರದಾಂಬೆಗೆ ವಿಶೇಷ ಪೂಜೆ...



ನವರಾತ್ರಿಯ 7ನೇ ದಿನದ ಸರಸ್ವತಿ ಪೂಜೆ ಅಂಗವಾಗಿ ಮೈಸೂರಿನಲ್ಲಿರುವ ಶೃಂಗೇರಿ ಶಾರದಾಂಬೆ ಪೀಠದ ಶಾಖಾ ಮಠದ ಶಾರದಾಂಬೆ ದೇವಸ್ಥಾನಕ್ಕೆ ಶಾಲಾ ಶಿಕ್ಷಣ ಇಲಾಖೆ ಶಿಕ್ಷಣಾಧಿಕಾರಿಗಳಾದ ಕರ್ನಾಟಕ ಶಾಲಾ ಪರೀಕ್ಷಾ ಮತ್ತು ಮೌಲ್ಯ ನಿರ್ಣಯ ಮಂಡಳಿ ವಿಭಾಗೀಯ ಕಾರ್ಯದರ್ಶಿ ಪ್ರಕಾಶ್, ಮೈಸೂರು ಜಿಲ್ಲೆಯ ಶಾಲಾ ಶಿಕ್ಷಣ ಇಲಾಖೆ ಉಪನಿರ್ದೇಶಕ ಜವರೇಗೌಡ, ಡಯಟ್‌ನ ಪ್ರಾಂಶುಪಾಲ ನಾಗರಾಜಯ್ಯ, ಸರ್ಕಾರಿ ಶಿಕ್ಷಕ ಶಿಕ್ಷಣ ಮಹಾವಿದ್ಯಾಲಯದ ಪ್ರವಾಚಕರಾದ ರಾಜಶೇಖರ್, ಲಕ್ಷ್ಮೀಪತಿ ಅವರು ಶಿಕ್ಷಣ ಇಲಾಖೆ ಪ್ರಗತಿಗಾಗಿ ವಿಶೇಷ ಪೂಜೆ ಸಲ್ಲಿಸಿ, ಶಾರದಾಂಬೆಯ ಆಶೀರ್ವಾದ ಪಡೆದುಕೊಂಡರು.

ಅಲ್ಪಸಂಖ್ಯಾತರ ಅಭಿವೃದ್ಧಿ ನಿಗಮ ಯೋಜನೆಗಳಲ್ಲಿ ಕ್ರೈಸ್ತರ ಕೈಬಿಟ್ಟಿರುವುದಕ್ಕೆ ಅಸಮಾಧಾನ

ಮೈಸೂರು,ಸೆ.29(ಜಿಎ)–ಕರ್ನಾಟಕ ಅಲ್ಪಸಂಖ್ಯಾತರ ಅಭಿವೃದ್ಧಿ ನಿಗಮದ ಯೋಜನೆಗಳ ಪ್ರಯೋಜನ ಪಡೆಯುವವರ ಪಟ್ಟಿಯಿಂದ ಕ್ರೈಸ್ತ ಧರ್ಮವನ್ನು ಕೈಬಿಟ್ಟಿರುವುದು ಸರಿಯಲ್ಲ. ಸರ್ಕಾರ ಕೂಡಲೇ ಮತ್ತೆ ಕ್ರೈಸ್ತ ಧರ್ಮವನ್ನು ಸೇರಿಸಬೇಕೆಂದು ಪ್ರೊಟೆಸ್ಟೆಂಟ್ ಕ್ರೈಸ್ತರ ಮಹಾಸಭಾ, ಡಯೋಸಿಸ್ ಆಫ್ ಪ್ರೊಟೆಸ್ಟೆಂಟ್ ಚರ್ಚ್ ಸಂಸ್ಥೆಗಳು ಮನವಿ ಮಾಡಿವೆ.

ಮೈಸೂರು ಜಿಲ್ಲಾ ಪತ್ರಕರ್ತರ ಭವನದಲ್ಲಿ ಸುದ್ದಿಗೋಷ್ಠಿಯಲ್ಲಿ ಬಿಷಪ್ ಸುನಿಲ್ ಜಾಕೋಬ್ ಮಾತನಾಡಿ, ಈ ಹಿಂದೆ ನಿಗಮ ಹಾಗೂ ಅಲ್ಪಸಂಖ್ಯಾತರ ಕಲ್ಯಾಣ ಇಲಾಖೆ ಕ್ರೈಸ್ತ ಧರ್ಮ ಸೇರ್ಪಡೆ ಮಾಡಿಕೊಂಡಿತ್ತು. ಆದರೆ ಈಗ ಏಕಾಏಕಿ ತೆಗೆದುಹಾಕಿರುವುದರಿಂದಾಗಿ ಕ್ರೈಸ್ತ ಸಮುದಾಯದ ಶಿಕ್ಷಣ, ಇನ್ನಿತರ ಸವಲತ್ತು ದೊರೆಯದಂತಾಗಿದೆ. ಕಾರಣ ಕೇಳಿದಲ್ಲಿ ಕ್ರೈಸ್ತ ಅಭಿವೃದ್ಧಿ ನಿಗಮ ಸ್ಥಾಪಿಸಿರುವ ಕಾರಣ ತೆಗೆದುಹಾಕಲಾಗಿದೆ ಎಂಬ ಉತ್ತರ ಬರುತ್ತಿದೆ. ಆದರೆ, ಇತರೆ ಧರ್ಮಗಳಿಗೂ ನಿಗಮ ಇದ್ದರೂ ಮುಂದುವರಿಸಿ, ಕೇವಲ ಕ್ರೈಸ್ತ ಧರ್ಮ ಕೈಬಿಡಲಾಗಿದೆ ಎಂದು ಆರೋಪಿಸಿದರು.

ಕ್ರೈಸ್ತ ಅಭಿವೃದ್ಧಿ ನಿಗಮಕ್ಕೆ ಸೂಕ್ತ ಕಚೇರಿ ಇಲ್ಲ. ಸಿಬ್ಬಂದಿಯೂ ಇಲ್ಲ. ತಕ್ಕ ಪ್ರಮಾಣದಲ್ಲಿ ಹಣ ಬಿಡುಗಡೆಗೊಳಿಸಿಲ್ಲ. ಹೀಗಾಗಿ ಸರ್ಕಾರ ಈ ಎಲ್ಲ ನ್ಯೂನತೆ ಸರಿಪಡಿಸಬೇಕೆಂದು ಕೋರಿದರು. ಸುದ್ದಿಗೋಷ್ಠಿಯಲ್ಲಿ ಡಾ.ವಿನೋದ್ ಎಂ.ಚಾಕೋ, ಅಲೆಕ್ಸ್ ಮೈಕೆಲ್, ಶಿವಕುಮಾರ್, ಫ್ರಾನ್ಸಿಸ್ ಸೇವಿಯರ್ ಉಪಸ್ಥಿತರಿದ್ದರು.

ಉಪವಿಭಾಗಾಧಿಕಾರಿಗೆ ಮನವಿ ಸಲ್ಲಿಕೆ...



ಜಾತಿಗಣತಿಯಲ್ಲಿ ಬುಂಡೆ ಬೆಸ್ತರ ಜಾತಿಯನ್ನು ಶಿಳ್ಳೆಕ್ಯಾತಾಸ್ (ಪರಿಶಿಷ್ಟ ಜಾತಿ)ಎಂದು ನಮೂದಿಸಿ, ಬುಂಡೆ ಬೆಸ್ತ ಕಾಲೋನಿಗೆ ಮೂಲ ಸೌಲಭ್ಯಗಳನ್ನು ಕಲ್ಪಿಸಿಕೊಡಬೇಕಾಗಿ ಸತ್ಯ ಎಂಎಸ್ ಫೌಂಡೇಶನ್ ಅಧ್ಯಕ್ಷ ಸತ್ಯಪ್ಪ ಹಾಗೂ ಬೆಸ್ತ ಕಾಲೋನಿ, ನಿವಾಸಿಗಳು ಹುಣಸೂರು ಉಪವಿಭಾಗಾಧಿಕಾರಿ ವಿಜಯಕುಮಾರ್ ಅವರಿಗೆ ಮನವಿ ಪತ್ರ ಸಲ್ಲಿಸಿದರು. ಬುಂಡೆ ಬೆಸ್ತ ಕಾಲೋನಿಯ ಅಣ್ಣಯ್ಯ, ಶಿವಣ್ಣ, ರಮೇಶ, ರಾಜು, ಸಣ್ಣಸ್ವಾಮಿ, ರಾಮಕೃಷ್ಣ ಇನ್ನಿತರರು ಹಾಜರಿದ್ದರು.

ನಿಧನ

ಎಂ.ಜೆ.ಸಾಯಿನಾಥ್



ಮೈಸೂರು, ಸೆ.29(ಜಿಎ)–ಮೈಸೂರಿನ ಕುವೆಂಪುನಗರದ ನಿವಾಸಿ ಎಂ.ಜೆ.ಸಾಯಿನಾಥ್ (ಕುಮಾರ್)(71) ಭಾನುವಾರ ನಿಧನರಾದರು.

ಮೃತರು ಪತ್ನಿ, ಮಗ, ಸೊಸೆ, ಮೊಮ್ಮಗ ಹಾಗೂ ಅಪಾರ ಬಂಧು ವರ್ಗ ಅಗಲಿದ್ದಾರೆ. ಅಂತ್ಯಕ್ರಿಯೆ ಭಾನುವಾರ ಚಾಮುಂಡಿಬೆಟ್ಟದ ತಪ್ಪಲಿನ ರುದ್ರಭೂಮಿಯಲ್ಲಿ ನೆರವೇರಿತು ಎಂದು ಕುಟುಂಬದ ಮೂಲಗಳು ತಿಳಿಸಿವೆ.

ಮೈಸೂರು ಹಾಗೂ ಸುತ್ತಮುತ್ತ ಇಂದು...



ಇಂದಿನ ಪಂಚಾಂಗ

30.09.2025 ಮಂಗಳವಾರ, ಮಳೆ ನಕ್ಷತ್ರ: ಹಸ್ತ 27.09.2025 ರಿಂದ 10.10.2025
ವಿಶ್ವಾವಸು ನಾಮ ಸಂವತ್ಸರ, ದಕ್ಷಿಣಾಯನ, ಶರದ್ ಋತು, ಅಶ್ವಿನಿ ಮಾಸ, ಶುಕ್ಲ ಪಕ್ಷ,
ತಿಥಿ: ಅಷ್ಟಮಿ, ನಕ್ಷತ್ರ: ಪೂಷಾ, ರಾಹುಕಾಲ: ಮಧ್ಯಾಹ್ನ 3ರಿಂದ 4.30ರವರೆಗೆ

■ **ಶ್ರೀ ಶ್ರೀ ಸುಬ್ಬರಾಯದಾಸರ ಶ್ರೀ ಪ್ರತಿನಾಮ ಗೋಪಾಲ ಒಡೆಯರ ಶ್ರೀ ಪ್ರಸನ್ನ ಶ್ರೀ ವೆಂಕಟರಮಣಸ್ವಾಮಿ ದೇವಸ್ಥಾನ:** ನವರಾತ್ರಿ ಬ್ರಹ್ಮೋತ್ಸವ, ಅಷ್ಟಮಿ, ಬೆಳಗ್ಗೆ ಪವಮಾನ ಹೋಮ, ಹನುಮಂತೋತ್ಸವ, ಸಾಯಂಕಾಲ ಪ್ರಹ್ಲಾದೋತ್ಸವ, ಗರುಡೋತ್ಸವ, ಸ್ಥಳ: ದೇವಸ್ಥಾನದ ಪ್ರಾಂಗಣ, ದೇವರಾಜ ಮೊಹಲ್ಲಾ.

■ **ಶ್ರೀ ರಾಮಕೃಷ್ಣ ಆಶ್ರಮ:** ಶ್ರೀ ದುರ್ಗಾ ಪೂಜೆ, ಮಹಾಷ್ಟಮಿ, ಬೆಳಗ್ಗೆ 7 ರಿಂದ ಶ್ರೀ ದುರ್ಗಾ ಮಾತೆಗೆ ಪೂಜೆ, ಬೆಳಗ್ಗೆ 8 ಗಂಟೆಗೆ ದುರ್ಗಾ ಸಪ್ತಸತಿ ಪಾರಾಯಣ, 11ಕ್ಕೆ ಭಜನೆ, 11.45ಕ್ಕೆ ಆರತಿ ಮತ್ತು ಪುಷ್ಪಾಂಜಲಿ, ಸಂಜೆ 7 ಗಂಟೆಗೆ ಸಂಧ್ಯಾರತಿ, ವಿಶೇಷ ಪೂಜೆ, ಸ್ಥಳ: ಆಶ್ರಮದ ಆವರಣ, ಯಾದವಗಿರಿ.

■ **ಶೃಂಗೇರಿ ಶ್ರೀ ಮಠ, ಅಭಿನವ ಶಂಕರಾಲಯ:** ಶ್ರೀ ಶಾರದಾ ಶರನ್ನವರಾತ್ರೋತ್ಸವ–2025, ಅಷ್ಟಮಿ, ಶ್ರೀ ದುರ್ಗಾಲಂಕಾರ, ಶ್ರೀ ದುರ್ಗಾಹೋಮ, ಸ್ಥಳ: ಅಭಿನವ ಶಂಕರಾಲಯ, ಬೆಳಗ್ಗೆಯಿಂದ.

■ **ತ್ರಯೀನ್ಯಾಸ್ ಶ್ರೀ ವಿದ್ಯಾ ಫೌಂಡೇಷನ್:** 29ನೇ ವರ್ಷದ ಶರನ್ನವರಾತ್ರಿ ಮಹೋತ್ಸವ, ಬೆಳಗ್ಗೆ 8.30ಕ್ಕೆ ಮಹಾಭಿಷೇಕ, ಶ್ರೀ ಗೌರಿ, ಶ್ರೀ ವಿದ್ಯಾದೀಪ ದುರ್ಗಾ ಪೂಜಾ, ಸಪ್ತಶತಿ ಪಾರಾಯಣ, ಲಲಿತೋಪಾಖ್ಯಾನ ಪಾರಾಯಣ, ಶ್ರೀ ಚಕ್ರಾರ್ಚನೆ, ಶ್ರೀ ಸುಂದರಕಾಂಡ ಪಾರಾಯಣ, ಸಂಜೆ 5.30ಕ್ಕೆ ಶ್ರೀ ವಿದ್ಯಾ ಷೋಡಶದುರ್ಗಾ ಜಗದ್ಧಾತ್ರಿ ಹೋಮ, ಸ್ಥಳ: ಫೌಂಡೇಷನ್ ಆವರಣ, ಜಯಲಕ್ಷ್ಮೀಪುರಂ.

■ **ಶ್ರೀ ಶ್ರೀ ಅವನೀ ಶೃಂಗೇರಿ ಜಗದ್ಗುರು ಶಂಕರಾಚಾರ್ಯ ಮಹಾ ಸಂಸ್ಥಾನಂ, ಶ್ರೀ ಅವನೀ ಶೃಂಗೇರಿ ಮಠ, ಮೈಸೂರು ಶಾಖೆ:** ಶ್ರೀ ಶಾರದಾ ಶರನ್ನವರಾತ್ರಿ ಮಹೋತ್ಸವ–2025, ಅಷ್ಟಮಿ–ಮಹಾಗೌರಿ ಅಲಂಕಾರ, ಬೆಳಗ್ಗೆ 9ಕ್ಕೆ ದುರ್ಗಾ ಹೋಮ, ಮಧ್ಯಾಹ್ನ 12.30ಕ್ಕೆ ಪೂರ್ಣಾಹುತಿ, ಮಹಾಮಂಗಳಾರತಿ, ತೀರ್ಥಪ್ರಸಾದ ವಿನಿಯೋಗ, ಸಂಜೆ 6.15ಕ್ಕೆ ಶ್ರೀ ರಾಮ ಮಹಿಳಾ ಭಜನಾ ಮಂಡಳಿಯಿಂದ ಭಜನಾ ಕಾರ್ಯಕ್ರಮ, ಸಂಜೆ 7.15ಕ್ಕೆ ಸ್ಕಂದ ಭಜನಾ ಮಂಡಲಿಯಿಂದ ಭಜನೆ, ಸ್ಥಳ: ಶ್ರೀ ಅವನೀ ಶೃಂಗೇರಿ ಮಠ, ವಿದ್ಯಾರಣ್ಯಪುರಂ.

■ **ಜೆಎಸ್‌ಎಸ್ ಆಯುರ್ವೇದ ಆಸ್ಪತ್ರೆ:** ಸಂಧಿವಾತ, ಶರದ್ ವಿರೇಚನ–ಪಂಚಕರ್ಮ ಚಿಕಿತ್ಸೆ, ಬೊಜ್ಜು ನಿವಾರಣಾ ಶಿಬಿರ, ಸ್ಥಳ: ಜೆಎಸ್‌ಎಸ್ ಆಯುರ್ವೇದ ಆಸ್ಪತ್ರೆ, ಲಲಿತಾದ್ರಿ ರಸ್ತೆ, ಆಲನಹಳ್ಳಿ, ಬೆಳಗ್ಗೆ 9ರಿಂದ.

■ **ಕಾವೇರಿ ಆಯುರ್ವೇದ ಆಸ್ಪತ್ರೆ:** ಯುವಕರ ಮಾನಸಿಕ ಆರೋಗ್ಯ ಜಾಗೃತಿ, ಗರ್ಭಸಂಸ್ಕಾರಕ್ಕೆ ಚಿಕಿತ್ಸಾ ಶಿಬಿರ, ಸ್ಥಳ: ಕಾವೇರಿ ಆಯುರ್ವೇದ ಆಸ್ಪತ್ರೆ, ದೇವೇಗೌಡ ಸರ್ಕಲ್ ಹತ್ತಿರ, ಬೆಳಗ್ಗೆ 10ರಿಂದ.

■ **ರಾಮ್‌ಸನ್ಸ್ ಬೊಂಬೆ ಮನೆ:** ದಸರೆಯ ಬೊಂಬೆ ಪ್ರದರ್ಶನದ 21ನೇ ಅವತರಣಿಕೆ, ಸ್ಥಳ: ರಾಮ್‌ಸನ್ಸ್ ಬೊಂಬೆ ಮನೆ, ನಜರ್‌ಬಾದ್ ಮುಖ್ಯರಸ್ತೆ, ಬೆಳಗ್ಗೆ 10ರಿಂದ.

■ **ಶ್ರೀ ಚಂದ್ರಮೌಳೀಶ್ವರ ಸ್ವಾಮಿ ದೇವಸ್ಥಾನಂ ಚಾರಿಟಬಲ್ ಟ್ರಸ್ಟ್:** ಶರನ್ನವರಾತ್ರಿ ಉತ್ಸವ–2025, ಬೆಳಗ್ಗೆ 9 ಗಂಟೆಗೆ ಕುಮಾರಿ ಪೂಜೆ, ಬ್ರಹ್ಮಚಾರಿ ಪೂಜೆ, ಸುಮಂಗಲಿ ಪೂಜೆ, ಶ್ರೀ ಕಾಲರಾತ್ರಿ ಅಲಂಕಾರ, ಸ್ಥಳ: ದೇವಸ್ಥಾನ ಪ್ರಾಂಗಣ, ದೇವಸ್ಥಾನದ ರಸ್ತೆ, ವಾಣಿವಿಲಾಸ ಮೊಹಲ್ಲಾ.

■ **ವ್ಯವಸ್ಥಾಪಕರು:** ಮೈಸೂರು ಮನೆ ಮನೆ ದಸರಾ ಬೊಂಬೆ ಪ್ರದರ್ಶನ–2025, ಸ್ಥಳ: ಹೇಮಲತಾ ಕುಮಾರಸ್ವಾಮಿ ಅವರ ನಿವಾಸ, 567/3, 2ನೇ ರಾಮಚಂದ್ರ ಅಗ್ರಹಾರ, ಖಿಲ್ಲೆ ಮೊಹಲ್ಲಾ.

■ **ಶ್ರೀ ಗಣಪತಿ ಸಚ್ಚಿದಾನಂದ ಆಶ್ರಮ:** ಶ್ರೀದೇವಿ ನವರಾತ್ರಿ ಉತ್ಸವ, ಬೆಳಗ್ಗೆ 9ಕ್ಕೆ ಶ್ರೀದೇವಿ ಪಲ್ಲಕ್ಕಿ ಉತ್ಸವ, ಕುಮಾರಿ ಪೂಜೆ, ಶ್ರೀಚಕ್ರ ಪೂಜೆ, ನವಾವರಣ ಪೂಜೆ, ವಿದುಷಿ ಆರ್ಯ ಅಂಬೆಕರ್ ಅವರಿಂದ ಹಿಂದೂಸ್ಥಾನಿ ಸಂಗೀತ ಗಾಯನ, ಮಧ್ಯಾಹ್ನ 12 ಗಂಟೆಗೆ ಅನ್ನಾರ್ಚನೆ, ಚಂಡಿ ಪೂಜೆ, ಜಯಲಕ್ಷ್ಮಿ ಮಾತಾ ಜಯಂತಿ, ಹೋಮ ಪೂರ್ಣಾಹುತಿ, ಸಂಜೆ 4ಕ್ಕೆ ಮಹಾಮಂಗಳಾರತಿ, ಡೋಲೋತ್ಸವ, ಸುವಾಸಿನಿ ಪೂಜೆ, ಸಂಜೆ 6 ಗಂಟೆಗೆ ಶ್ರೀ ಸ್ವಾಮೀಜಿ ಅವರಿಂದ ದೇವಿ ಭಜನೆ ಮತ್ತು ಪ್ರವಚನ, ಸ್ಥಳ: ನಾದ ಮಂಟಪ, ಶ್ರೀ ಸಚ್ಚಿದಾನಂದ ಆಶ್ರಮದ ಆವರಣ, ಊಟಿ ರಸ್ತೆ.

■ **ಶ್ರೀ ಅಮೃತೇಶ್ವರ ದೇವಸ್ಥಾನ:** ಶ್ರೀ ಶ್ರೀ ದಕ್ಷಿಣಾಮ್ನಾಯ ಶೃಂಗೇರಿ ಶಾರದಾ ಪೀಠದ ಉಭಯ ಜಗದ್ಗುರುಗಳ ಅನುಗ್ರಹಗಳೊಂದಿಗೆ ಶರನ್ನವರಾತ್ರಿ ಪ್ರಯುಕ್ತ 75ನೇ ವರ್ಷದ ಚಂಡಿಕಾ ಯಾಗ, ಬೆಳಗ್ಗೆ 9.30ಕ್ಕೆ 9ನೇ ದಿನದ ಸಹಸ್ರ ಚಂಡಿಕಾಯಾಗ, ಸಿದ್ಧಿದಾರ್ಥಿದೇವಿಯ ಆರಾಧನೆ, 12 ಗಂಟೆಗೆ ಪೂರ್ಣಾಹುತಿ, ಪ್ರಸಾದ ವಿನಿಯೋಗ, ಸ್ಥಳ: ಅಮೃತೇಶ್ವರ ದೇವಸ್ಥಾನ, ಧನ್ವಂತರಿ ರಸ್ತೆ.

ಮೈಸೂರು ಆಕಾಶವಾಣಿ



ಬೆಳಗ್ಗೆ: 6.10 ದಸರಾ ಚಿಂತನ, 6.15 ದಸರಾ ಗೀತಾರಾಧನ, 6.35 ಮತ್ತು ಸಂಜೆ 6.10 ಶ್ರದ್ಧೆಯ ಶಿಲ್ಪ–ಕರ್ನಾಟಕದ ಪ್ರಾಚೀನ ದೇವಾಲಯಗಳ ಪರಿಚಯ ಮಾಲಿಕೆ, ಲೇಖನ ಮತ್ತು ಪ್ರಸ್ತುತಿ: ಟಿ.ಎಸ್. ಗೋಪಾಲ್, ಪ್ರಾಯೋಜಕರು: ಅದಮ್ಯ ಚೇತನ ಫೌಂಡೇಶನ್, ಬೆಂಗಳೂರು, 6.40 ದಸರಾದಲ್ಲಿ ಇಂದು ಮತ್ತು ನಾಳೆ ನಂತರ ಮೈಸೂರು ದಸರಾ ಕಾರ್ಯಕ್ರಮ. ಪ್ರಸ್ತುತಿ–ಶ್ರೀಮಾನ್.ಎಸ್., 6.50 ರೈತರಿಗೆ ಸಲಹೆ, 7.15 ಕಾದಂಬರಿ ವಿಹಾರ:ಎಂ. ಆರ್. ಶ್ರೀನಿವಾಸಮೂರ್ತಿಯವರ ರಂಗಣ್ಣನ ಕನಸಿನ ದಿನಗಳು ಕಾದಂಬರಿಯ ಬಾನುಲಿ ಓದು. ಪ್ರಸ್ತುತಿ : ಉಮೇಶ್. ಎಸ್.ಎಸ್., 8.30 ವಿಶೇಷ ಕಾರ್ಯಕ್ರಮ ಸರಣಿ ಆಕಾಶವಾಣಿ 90–ನೆನಪುಗಳ ಹೊತ್ತು, ಮೈಸೂರು ಆಕಾಶವಾಣಿಯಿಂದ ಸನ್ಮಾನಿತರಾದ ಮೈಸೂರಿನ ಸಮುದ್ಯತಾ ಶ್ರೋತೃ ಬಳಗದ ಅಧ್ಯಕ್ಷರಾದ ವಿ.ಗೋವಿಂದಾಚಾರಿ ಹಾಗೂ ಕಾರ್ಯದರ್ಶಿಗಳಾದ ರಾಜೇಶ್ವರಿ ಟಿ.ಎನ್. ಅವರೊಂದಿಗೆ ಸಂವಾದ, ಭಾಗವಹಿಸುತ್ತಾರೆ–ಡಾ. ಮೈಸೂರು ಉಮೇಶ್, 9.00 ಕರೆಗೊಂದು ಗೀತೆ– ಶ್ರೋತೃಗಳ ಮೆಚ್ಚಿನ ಚಿತ್ರಗೀತೆಗಳ ನೇರಫೋನ್ ಇನ್ ಕಾರ್ಯಕ್ರಮ, 9.30 ಮೈಸೂರು ಬ್ರಾಂಡ–ದಸರಾ ಸಂದರ್ಭದಲ್ಲಿ ವಿಶೇಷ ಕಾರ್ಯಕ್ರಮ, ಪ್ರಸ್ತುತಿ: ಡಾ.ಮೈಸೂರು ಉಮೇಶ್, 9.40 ಮೈಸೂರು ಸಂಸ್ಥಾನದ ಕಲಾ ಪರಂಪರೆ ದಸರಾ ಸಂದರ್ಭದಲ್ಲಿ ವಿಶೇಷ ಕಾರ್ಯಕ್ರಮ, ಸಾಹಿತ್ಯ: ಡಾ.ಜ್ಯೋತಿಶಂಕರ್, ಪರಿಕಲ್ಪನೆ ಹಾಗೂ ಪ್ರಸ್ತುತಿ: ಹೆಚ್.ಎಲ್.ಶಿವಶಂಕರಸ್ವಾಮಿ, 10.00 ಕರ್ನಾಟಕ ಶಾಸ್ತ್ರೀಯ ಸಂಗೀತ–ವಿವಿಧ ಕಲಾವಿದರಿಂದ ದೇವಿಕೃತಿಗಳು, 11.00 ನಿಮ್ಮೊಂದಿಗೆ ಮೈಸೂರು ಆಕಾಶವಾಣಿ, ಹೊಂಗಿರಣ ವಿಕಸಿತ ಹಾದಿಗೊಂದು ಸೋಪಾನ, ಪ್ರಸ್ತುತಿ–ಎಸ್. ಲಕ್ಷ್ಮೀನಾರಾಯಣ, ಆರ್. ಲೋಕೇಶ್ವರಿ ಹಾಗೂ ಬಿ.ಜಿ.ಕವಿತಾ

ಮಧ್ಯಾಹ್ನ: 12.05 ವನಿತಾ ವಿಹಾರ, 12.35 ದೇವರನಾಮ, 12.45 ಕನ್ನಡದಲ್ಲಿ ಭಾಷಣ ಸಂತ ಪರಂಪರೆ ಮತ್ತು ಸಾಮಾಜಿಕ ಬದಲಾವಣೆ ಈ ಕುರಿತು ಮಾತನಾಡುತ್ತಾರೆ–ಡಾ. ಬಸವರಾಜ ಕಲ್ಲುಡಿ, 1.00 ಪ್ರಗತಿ ಪಥ – ಕೇಂದ್ರ ಸರ್ಕಾರದ ವಿವಿಧ ಅಭಿವೃದ್ಧಿ ಯೋಜನೆಗಳ ಸರಣಿ, 1.20 ಭಾವಗೀತೆಗಳು– ರಮೇಶ್ ಚಂದ್ರ, 2.40 ಚಿತ್ರಗೀತೆಗಳು, 3.00 ಕರ್ನಾಟಕ ಶಾಸ್ತ್ರೀಯ ಸಂಗೀತ, ಆರ್. ವೇದವಲ್ಲಿ – ಹಾಡುಗಾರಿಕೆ, 4.00 ಕಥಾಕಾಲಕ್ಷೇಪ, 5.00 ಸಂದೇಶ ಆಧಾರಿತ ಶ್ರೋತೃಗಳ ಮೆಚ್ಚಿನ ಚಿತ್ರಗೀತೆಗಳ ಕಾರ್ಯಕ್ರಮ, 6.50 ಕೃಷಿರಂಗ – ಕಿಸಾನ್‌ವಾಣಿ–ಭಾರತ ಸರ್ಕಾರದ ಕೃಷಿ ಹಾಗೂ ರೈತ ಕಲ್ಯಾಣ ಸಚಿವಾಲಯ ಪ್ರಾಯೋಜಿತ ಕಾರ್ಯಕ್ರಮ. ಮತ್ಸ ತರಂಗ–ಮೀನು ಸಾಕಾಣಿಕೆ ತಾಂತ್ರಿಕತೆಗಳನ್ನು ಕುರಿತ ಬಾನುಲಿ ಸರಣಿ ಮರೆಲ್ ಮೀನು ಕೃಷಿ ಕುರಿತು ಮಳವಳ್ಳಿ ತಾಲೂಕು ಕಿರಗಾವಲು ಹೋಬಳಿ ದೇವಿಪುರ ಗ್ರಾಮದ ಡಿ.ಪಿ.ಮಲ್ಲೇಶ್ ಅವರೊಂದಿಗೆ ಸಂದರ್ಶನ. ಸಂದರ್ಶಕರು – ಎನ್.ಕೇಶವಮೂರ್ತಿ, 7.45 ಚಿತ್ರಗೀತೆಗಳು, 8.00 ಹಿಂದೂಸ್ಥಾನಿ ಶಾಸ್ತ್ರೀಯ ಸಂಗೀತ, 8.30 ಹಿಂದಿ ಚಿತ್ರಗೀತೆಗಳು, 9.30 ಕರ್ನಾಟಕ ಶಾಸ್ತ್ರೀಯ ಸಂಗೀತ–ವಿವಿಧ ಕಲಾವಿದರಿಂದ ದೇವಿಕೃತಿಗಳು, 10.00 ಚೈತ್ರವನ–ಲಕ್ಷ್ಮೀಶನ ಜೈಮಿನಿ ಭಾರತದ ಸಮಗ್ರ ವಾಚನ ಹಾಗೂ ವ್ಯಾಖ್ಯಾನ, ಪ್ರಸ್ತುತಿ–ಡಾ. ಎ. ಎಸ್. ಶಂಕರನಾರಾಯಣ, 10.30 ಸವಿನೆನಪು

■ **ವ್ಯವಸ್ಥಾಪಕರು:** ಪೇಪರ್ ಪಲ್ಪ್ ಉಪಯೋಗಿಸಿ ಕೆ.ಎಸ್.ರಾಘವೇಂದ್ರ ಅವರು ಕೈಯಿಂದ ಮಾಡಿದ 500ಕ್ಕೂ ಹೆಚ್ಚು ಬೊಂಬೆಗಳ ಮೂಲಕ ಶ್ರೀನಿವಾಸ ಕಲ್ಯಾಣ, ಶ್ರೀ ರಾಘವೇಂದ್ರ ಸ್ವಾಮಿಯವರ ಮಹಿಮೆ, ದಶಾವತಾರದಲ್ಲಿ ಶ್ರೀ ಬಾಲಕೃಷ್ಣ ಲೀಲೆ ಕುರಿತು ಪ್ರದರ್ಶನ, ಸ್ಥಳ: ಇಂಚರ ಕಲಾಕ್ಷೇತ್ರ, ಮಹದೇಶ್ವರನಗರ, ಬೆಳಗ್ಗೆ 10ರಿಂದ.

■ **ಶ್ರೀ ಚಾಮರಾಜೇಂದ್ರ ಸ್ಕೂಲ್ ಫಾರ್ ಎಕ್ಸ್‌ಲೆನ್ಸ್:** ದಸರಾ ಕೇಕ್ ಶೋ, ಸ್ಥಳ: ಶ್ರೀ ಚಾಮರಾಜೇಂದ್ರ ಸ್ಕೂಲ್ ಫಾರ್ ಎಕ್ಸ್‌ಲೆನ್ಸ್, ಮಹಾರಾಜ ಕಾಲೇಜು ಮೈದಾನ, ಬೆಳಗ್ಗೆ 11ಕ್ಕೆ.

■ **ಕನ್ನಡ ಮತ್ತು ಸಂಸ್ಕೃತಿ ಇಲಾಖೆ, ಬೆಂಗಳೂರು, ಮೈಸೂರು ದಸರಾ ಮಹೋತ್ಸವ ಸಮಿತಿ, ಕನ್ನಡ ಪುಸ್ತಕ ಪ್ರಾಧಿಕಾರ, ಬೆಂಗಳೂರು:** ಕನ್ನಡ ಪುಸ್ತಕಗಳ ರಿಯಾಯಿತಿ ಮಾರಾಟ ಮೇಳ, ಸಾಹಿತಿಗಳೊಂದಿಗೆ ಸೆಲ್ಫಿ–ಡಾ. ಟಿ.ವಿ. ವೆಂಕಟಾಚಲ ಶಾಸ್ತ್ರಿ, ಶ್ರೀ ಕೃಷ್ಣಮೂರ್ತಿ ತುಂಗ ಮತ್ತು ತಂಡ, ಬೆಂಗಳೂರು ಅವರಿಂದ ಕಂಸವಧೆ ಯಕ್ಷಗಾನ ಪ್ರಸಂಗ, ಸ್ಥಳ: ರಾಷ್ಟ್ರಕವಿ ಕುವೆಂಪು ಸಾಂಸ್ಕೃತಿಕ ವೇದಿಕೆ, ಸ್ಕೌಟ್ಸ್ ಮತ್ತು ಗೈಡ್ಸ್ ಮೈದಾನ, ಹಳೇ ಡಿಸಿ ಕಚೇರಿ ಎದುರು, ಬೆಳಗ್ಗೆ 11.30ರಿಂದ.

■ **ಶ್ರೀ ವಿದ್ಯಾಗಣಪತಿ ದೇವಸ್ಥಾನ ಸೇವಾ ಸಮಿತಿ ಟ್ರಸ್ಟ್ :** ವಿಶ್ವ ಹಿಂದೂ ಪರಿಷದ್, ಕುವೆಂಪುನಗರ ಪ್ರಖಂಡದಿಂದ ಕುವೆಂಪುನಗರ ದಸರಾ ಮಹೋತ್ಸವ, ಸಂಜೆ 4ಕ್ಕೆ ಶ್ರೀ ಚಾಮುಂಡೇಶ್ವರಿ ದೇವಿಯ ಪಲ್ಲಕ್ಕಿ ಉತ್ಸವ ಮೆರವಣಿಗೆ, ಸರಸ್ವತಿಪುರಂ ಶ್ರೀಕೃಷ್ಣಧಾಮದಿಂದ, ಚಾಲನೆ: ಶಾಸಕ ಟಿ.ಎಸ್.ಶ್ರೀವತ್ಸ, ಡಾ. ಎ.ಎಸ್.ಚಂದ್ರಶೇಖರ್, ಮಹೇಶ್ ಕಾಮತ್, ಹೋಟೆಲ್ ಸುರೇಶ್, ಸಂಜೆ 6ಕ್ಕೆ ಶ್ರೀ ದುರ್ಗಾ ಹೋಮ ಮತ್ತು ಸುಮಂಗಲಿಯರಿಂದ ಕುಂಕುಮದಿಂದ ಶ್ರೀ ಲಲಿತ ಸಹಸ್ರನಾಮಾರ್ಚನೆ, ಪ್ರಸಾದ ವಿನಿಯೋಗ.


■ **ಮೈಸೂರು ಬೊಂಬೆ ರಂಗ ಮಂದಿರ:** ಮೈಸೂರು ಬೊಂಬೆ ಪ್ರದರ್ಶನ, ಸ್ಥಳ: ಮೈಸೂರು ಪಪ್ಪೆಟ್ ಥಿಯೇಟರ್, ಮೃಗಾಲಯದ ಎದುರು, ಸಂಜೆ 4.30ರಿಂದ.

■ **ಶಬರಿಮಲೆ ಶ್ರೀ ಅಯ್ಯಪ್ಪ ಪೂಜಾ ಸಮಿತಿ:** ನವರಾತ್ರಿ ಪೂಜಾ ಮಹೋತ್ಸವ, ಪವಿತ್ರ ಗ್ರಂಥ ಪೂಜೆ ಹಾಗೂ ಪುಸ್ತಕ ಪೂಜೆ, ಸ್ಥಳ: ಶ್ರೀ ಅಯ್ಯಪ್ಪ ಸ್ವಾಮಿ ದೇವಸ್ಥಾನ, ಚಾಮುಂಡಿಬೆಟ್ಟದ ಪಾದ, ಸಂಜೆ 5.30ಕ್ಕೆ

■ **ವಿವೇಕಾನಂದನಗರ ಬ್ರಾಹ್ಮಣ ಮಹಾಸಭಾ:** ಶರನ್ನವರಾತ್ರಿ, ಕುಮಾರಿ ಭಾಗ್ಯಲಕ್ಷ್ಮಿ ಮತ್ತು ಕುಮಾರಿ ಅಕ್ಷತಾರಿಂದ ದೇವರನಾಮ, ನೃತ್ಯರೂಪಕ, ಸ್ಥಳ: ಶ್ರೀ ಶಂಕರ ಪ್ರಾರ್ಥನಾ ಮಂದಿರ, ಸಂಜೆ 7 ರಿಂದ.

ದಸರಾ ಜಂಬೂಸವಾರಿಯಲ್ಲಿ ಸಾಗುವ ಆಕರ್ಷಕ ಸ್ತಬ್ಧಚಿತ್ರಗಳಿಗೆ ಫೈನಲ್ ಟಚ್

●ನಾಡಿನ ಸಾಂಸ್ಕೃತಿಕ ಪರಂಪರೆ ಅನಾವರಣ, ಅನಿಷ್ಟ ಪದ್ಧತಿಗಳ ವಿರುದ್ಧ ಜಾಗೃತಿ ಮೂಡಿಸಲಿವೆ ●ಒಂದಕ್ಕಿಂತ ಒಂದು ಭಿನ್ನ, ವಿಶಿಷ್ಟ, ಕುತೂಹಲಕಾರಿ ●ಹೆಚ್‌ಎಎಲ್ ತೇಜಸ್ ವಿಮಾನದ 'ತೇಜಸ್ಸು' ●ಪ್ರಗತಿಯ ಜೊತೆಗೆ ಪರಿಸರ ಸಂರಕ್ಷಣೆಗೂ ಒತ್ತಾಸೆ





ಚಿಕ್ಕಮಗಳೂರು ಜಿಲ್ಲಾಡಳಿತ ನಿರ್ಮಾಣ ಮಾಡುತ್ತಿರುವ ಭದ್ರ ಬಾಲ್ಯ ಯೋಜನೆಯ ಸ್ತಬ್ಧಚಿತ್ರ (ಎಡಚಿತ್ರ), ಮೈಸೂರಿನ ಎಪಿಎಂಸಿ ಪ್ರಾಂಗಣದಲ್ಲಿ ನಿರ್ಮಾಣವಾಗುತ್ತಿರುವ ಸ್ತಬ್ಧಚಿತ್ರಗಳ ಪರಿಕಲ್ಪನೆಯ ತ್ರೀಡಿ ಫೋಟೋ (ಬಲಚಿತ್ರ).

ಮೈಸೂರು, ಸೆ.29(ಬಿಎಲ್‌ಯು)– ವಿಶ್ವ ವಿಖ್ಯಾತ ಮೈಸೂರು ದಸರಾ ಮಹೋತ್ಸವದ ಅದ್ಧೂರಿ ಕ್ಲೈಮ್ಯಾಕ್ಸ್, ಜಂಬೂಸವಾರಿ ಮೆರವಣಿಗೆಯ ಪ್ರಮುಖ ಆಕರ್ಷಣೆಯಾದ ಸ್ತಬ್ಧಚಿತ್ರಗಳ ರೂಪಿಸುವ ಕಾರ್ಯ ಬಹುತೇಕ ಪೂರ್ಣಗೊಂಡಿದೆ. ಆಪರೇಷನ್ ಸಿಂಧೂರದಲ್ಲಿ ಪಾಕಿಸ್ತಾನ ನಲುಗುವಂತೆ ಮಾಡಿದ್ದ ತೇಜಸ್ ಯುದ್ಧ ವಿಮಾನ, ಪ್ಲಾಸ್ಟಿಕ್ ತ್ಯಾಜ್ಯದಿಂದ ಪರಿಸರ ಹಾಳಾಗುತ್ತಿರುವ ಬಗ್ಗೆ ಜನಜಾಗೃತಿ, ಮಹಿಳಾ ಸಬಲೀಕರಣ, ಪ್ರಗತಿಯ ಜೊತೆಗೆ ಪರಿಸರ ಸಂರಕ್ಷಣೆ ಸೇರಿದಂತೆ ಹತ್ತಾರು ಸ್ತಬ್ಧಚಿತ್ರಗಳು ಸಮಾಜಕ್ಕೆ ಅರ್ಥಪೂರ್ಣ ಸಂದೇಶ ನೀಡುತ್ತಿವೆ.

ಮೈಸೂರಿನ ಎಪಿಎಂಸಿ ಪ್ರಾಂಗಣದಲ್ಲಿ ಸ್ತಬ್ಧಚಿತ್ರಗಳ ನಿರ್ಮಾಣ ಕಾರ್ಯ ನಡೆಯುತ್ತಿದ್ದು, ನಾಳೆ ಸಂಜೆ ವೇಳೆಗೆ ಅಂತಿಮ ರೂಪ ಪಡೆಯಲಿವೆ.

ಜಂಬೂಸವಾರಿ ಮೆರವಣಿಗೆಯಲ್ಲಿ ಜಾನಪದ ಕಲಾತಂಡಗಳ ಜೊತೆಗೆ ಸ್ತಬ್ಧಚಿತ್ರಗಳು ಸಾಗಲಿವೆ. ಒಂದೊಂದು ಸ್ತಬ್ಧಚಿತ್ರ ಒಂದೊಂದು ವಿಭಿನ್ನ ಸಂದೇಶ ಸಾರುತ್ತವೆ. ದಸರಾ ಅಂದರೆ ಮನೋರಂಜನೆಗೆ ಮಾತ್ರ ಸೀಮಿತವಾಗದೆ, ನಾಡಿನ ಸಾಂಸ್ಕೃತಿಕ ಪರಂಪರೆಯನ್ನು ಅನಾವರಣಗೊಳಿಸುತ್ತದೆ.

ಮೇಕ್ ಇನ್ ಇಂಡಿಯಾ ಮಾಡೆಲ್: ಮೇಕ್ ಇನ್ ಇಂಡಿಯಾ ಪರಿಕಲ್ಪನೆಯಲ್ಲಿ ಹೆಚ್‌ಎಎಲ್ ನಿರ್ಮಾಣ ಮಾಡಿರುವ ತೇಜಸ್ ಸ್ತಬ್ಧಚಿತ್ರ ಅತ್ಯಾಕರ್ಷಕವಾಗಿದೆ. ಆಪರೇಷನ್ ಸಿಂಧೂರದಲ್ಲಿ ಪಾಕಿಸ್ತಾನವನ್ನು ಬಗ್ಗು ಬಡಿದ ತೇಜಸ್, ಇಂಜಿನ್, ರಾಕೆಟ್, ಹೆಲಿಕಾಪ್ಟರ್‌ಗಳ ಸಾಂಕೇತಿಕವಾಗಿ ಪ್ರದರ್ಶಿಸಲಾಗುತ್ತಿದೆ. ಹೆಚ್‌ಎಎಲ್‌ಗೆ ಜಾಗ ನೀಡಿದ ನಾಲ್ವಡಿ ಕೃಷ್ಣರಾಜ ಒಡೆಯರ್ ಅವರ ಭಾವಚಿತ್ರವನ್ನು ಕೂಡ ಈ ಸ್ತಬ್ಧಚಿತ್ರದಲ್ಲಿ ಪ್ರದರ್ಶಿಸಲಾಗುತ್ತಿದೆ.

ಮೈಸೂರು ನಗರ ಪಾಲಿಕೆ ನಿರ್ಮಾಣ ಮಾಡಿರುವ ಸ್ತಬ್ಧಚಿತ್ರ ಪರಿಸರದ ಈಗಿನ ಸವಾಲುಗಳನ್ನು ಸಾರಿ ಹೇಳಲಿದೆ. ಹಸಿರಿನಿಂದ ಕಂಗೊಳಿಸುತ್ತಿರುವ ಬೆಟ್ಟ–ಗುಡ್ಡಗಳು ಒಂದೆಡೆಯಾದರೆ, ಪ್ಲಾಸ್ಟಿಕ್ ತ್ಯಾಜ್ಯ ಸೇರಿದಂತೆ ಇತರೆ ತ್ಯಾಜ್ಯ ಹಾಗೂ ಕೈಗಾರಿಕೆಗಳ ಮಾಲಿನ್ಯದಿಂದ ಮನುಷ್ಯ ಎದುರಿಸುವ ಸವಾಲುಗಳನ್ನು ಸವಿವರವಾಗಿ ಚಿತ್ರಿಸಲಾಗಿದೆ.

ಒಂದಕ್ಕಿಂತ ಒಂದು ಆಕರ್ಷಕ: ರೇಷ್ಮೆ ಇಲಾಖೆ ನಿರ್ಮಾಣ ಮಾಡಿರುವ ಸ್ತಬ್ಧಚಿತ್ರದಲ್ಲಿ ರೇಷ್ಮೆ ಬೆಳೆ ಕೃಷಿ, ರೇಷ್ಮೆ ಹುಳು ಸಾಕಾಣಿಕೆ, ರೇಷ್ಮೆ ನೂಲು ತೆಗೆಯುವುದು, ಸೀರೆ ನೇಯ್ಗೆ, ಇದರಿಂದ ಅಂತಿಮವಾಗಿ ಮಹಿಳಾ ಸಬಲೀಕರಣದ ಸಂದೇಶ ಸಾರಲಾಗಿದೆ.

ಬೆಂಗಳೂರು ನಗರ ಜಿಲ್ಲೆ ನಿರ್ಮಿಸುತ್ತಿರುವ ಸ್ತಬ್ಧಚಿತ್ರದಲ್ಲಿ ಬೆಂಗಳೂರು ಅರಮನೆ, ಕೆಂಪೇಗೌಡರ ಪ್ರತಿಮೆ, ಬ್ರ್ಯಾಂಡ್ ಅಂಡ್ ಗ್ರೇಟೆಡ್ ಬೆಂಗಳೂರು, ಮೆಟ್ರೋ ರೈಲು ಸಂಚಾರ, ಡಬ್ಬಲ್ ಡೆಕ್ಕರ್ ಸೇತುವೆ, ಸುರಂಗ ಮಾರ್ಗದ ಪರಿಕಲ್ಪನೆಯನ್ನು ಪ್ರದರ್ಶನ ಮಾಡಲಾಗುತ್ತಿದೆ.

ಕೆಎಸ್‌ಆರ್‌ಟಿಸಿ, ಬಿಎಂಟಿಸಿ, ವಾಯುವ್ಯ ಸಾರಿಗೆ, ಈಶಾನ್ಯ ಸಾರಿಗೆ ಬಸ್‌ಗಳಲ್ಲಿ 560 ಕೋಟಿ ಶಕ್ತಿ ಯೋಜನೆಯ ಮಹಿಳೆಯರು ಪ್ರಯಾಣ ಮಾಡಿರುವ ಸ್ತಬ್ಧಚಿತ್ರ ಅತ್ಯಾಕರ್ಷಕವಾಗಿದೆ. ಈ ಹಿನ್ನೆಲೆ ಗೋಲ್ಡನ್ ಬುಕ್ ಆಫ್ ರೆಕಾರ್ಡ್ ಸೇರಿದಂತೆ ಇತರೆ ಬಹುಮಾನ ಪಡೆದಿರುವುದನ್ನು ಈ ಸ್ತಬ್ಧಚಿತ್ರದಲ್ಲಿ ತೋರಿಸಲಾಗಿದೆ.

ತಾಂಡಾ ಅಭಿವೃದ್ಧಿ ನಿಗಮದಿಂದ ನಿರ್ಮಿಸಿರುವ ಸ್ತಬ್ಧಚಿತ್ರದಲ್ಲಿ ತಾಂಡಾ ಜನರ ಆಚರಣೆ, ಉಡುಗೆ, ತೊಡುಗೆ, ಕುಲ ಕಸುಬು ಗಮನ ಸೆಳೆಯುತ್ತದೆ.

ಉಡುಪಿ ಜಿಲ್ಲೆಯ ಸ್ತಬ್ಧಚಿತ್ರದಲ್ಲಿ ಘನ ತ್ಯಾಜ್ಯ ಸಂಸ್ಕರಣೆಯಿಂದ ಪರಿಸರ ಸಂರಕ್ಷಣೆ, ಸ್ವಚ್ಛತೆಯಲ್ಲಿ ಮಹಿಳಾ ಪೌರಕಾರ್ಮಿಕರ ಶ್ರಮ, ಮಹಿಳಾ ಸಬಲೀಕರಣದ ಸಂದರ್ಭೋಚಿತ ವಿಷಯ ವಸ್ತುವನ್ನು ಕಟ್ಟಿಕೊಡಲಿದೆ.

ಮಂಡ್ಯ ಜಿಲ್ಲೆಯ ಸ್ತಬ್ಧಚಿತ್ರದಲ್ಲಿ ಸ್ವಾತಂತ್ರ್ಯ ಹೋರಾಟದ ವೇಳೆ ಧ್ವಜ ಸತ್ಯಾಗ್ರಹ ನಡೆದ ಮದ್ದೂರಿನ ಶಿವಪುರವನ್ನು ನಿರ್ಮಾಣ ಮಾಡಲಾಗಿದೆ.

ಚಾಮರಾಜನಗರದ ಸ್ತಬ್ಧಚಿತ್ರದಲ್ಲಿ ನಗರದ ಅಭಿವೃದ್ಧಿ ಹಾಗೂ ಪ್ರಗತಿಯ ಜೊತೆ ಜೊತೆಯಾಗಿ ಪರಿಸರ ಸಂರಕ್ಷಣೆ ಮಾಡುವುದರ ಬಗ್ಗೆ ಬೆಳಕು ಚೆಲ್ಲಲಾಗಿದೆ.

ವಾರ್ತಾ ಇಲಾಖೆ ಸ್ತಬ್ಧಚಿತ್ರದಲ್ಲಿ ರಾಜ್ಯ ಸರ್ಕಾರದ ಪಂಚ ಗ್ಯಾರಂಟಿಯ ಪ್ರಯೋಜನಗಳು, ಲಿಡ್ಕರ್ ಸ್ತಬ್ಧಚಿತ್ರದಲ್ಲಿ ಲಿಡ್ಕರ್ ಉತ್ಪನಗಳು, ಗದಗ ಜಿಲ್ಲೆಯ ಸ್ತಬ್ಧಚಿತ್ರದಲ್ಲಿ ಜೋಡು ಕಳಸದ ಗುಡಿ, ಬಿಜಾಪುರ ಜಿಲ್ಲೆಯ ಸ್ತಬ್ಧಚಿತ್ರದಲ್ಲಿ ಅಂಜನಾದ್ರಿ ಬೆಟ್ಟ, ಹಂಪಿ ಕಲ್ಲಿನ ರಥ, ಐಹೊಳೆ ದೇವಾಲಯ ಚಿತ್ರಿಸಲಾಗಿದೆ.

ಧಾರವಾಡದ ಸ್ತಬ್ಧಚಿತ್ರದಲ್ಲಿ ಕರಕುಶಲ ವಸ್ತುಗಳು, ರಾಷ್ಟ್ರಧ್ವಜ ತಯಾರಿಕಾ ಕೇಂದ್ರ, ಕಲಘಟಗಿಯ ಮರದ ತೊಟ್ಟಿಲು ಅತ್ಯಾಕರ್ಷಕವಾಗಿ ಮೂಡಿಬಂದಿದೆ.

ಜಂಬೂಸವಾರಿಯಲ್ಲಿ 60 ಸ್ತಬ್ಧಚಿತ್ರಗಳು ಭಾಗಿ

ಜಂಬೂಸವಾರಿ ಮೆರವಣಿಗೆಯಲ್ಲಿ ಸುಮಾರು 60 ಸ್ತಬ್ಧಚಿತ್ರಗಳು ಭಾಗಿಯಾಗಲಿವೆ. ಪ್ರತಿಯೊಂದು ಸ್ತಬ್ಧಚಿತ್ರ ಒಂದೊಂದು ರೀತಿಯ ಸಂದೇಶ ಸಾರಲಿವೆ ನಾಳೆ ಸಂಜೆ ವೇಳೆಗೆ ಎಲ್ಲಾ ಸ್ತಬ್ಧಚಿತ್ರಗಳ ನಿರ್ಮಾಣ ಕಾರ್ಯ ಪೂರ್ಣಗೊಳ್ಳಲಿವೆ.

ಆಯಾ ಜಿಲ್ಲೆ ಮತ್ತು ಆಯಾ ತಾಲೂಕಿನವರು ಸ್ತಬ್ಧಚಿತ್ರ ನಿರ್ಮಾಣ ಮಾಡಿದ್ದಾರೆ. ಸ್ತಬ್ಧಚಿತ್ರದ ವಿಷಯ ವಸ್ತು(ಥೀಮ್), ಇದಕ್ಕೆ ತಗಲುವ ವೆಚ್ಚವನ್ನು ಆಯಾ ಇಲಾಖೆ ಮತ್ತು ಜಿಲ್ಲೆಯವರು ಭರಿಸುತ್ತಾರೆ.

ಎಲ್ಲಾ ಸ್ತಬ್ಧಚಿತ್ರಗಳ ನಿರ್ಮಾಣ ಪೂರ್ಣಗೊಳಿಸಿ, ಮೆರವಣಿಗೆಯಲ್ಲಿ ಕೊಂಡೊಯ್ಯಲು ಸಮನ್ವಯತೆಯನ್ನು ನಾವು ನಿರ್ವಹಿಸುತ್ತೇವೆ.

– **ದೀಪಕ್**, ಕಾರ್ಯಾಧ್ಯಕ್ಷರು, ಮೈಸೂರು ನಗರಪಾಲಿಕೆಯ ಇಇ

ಮಕ್ಕಳ ಲೈಂಗಿಕ ಶೋಷಣೆ ವಿರುದ್ಧ ಜಾಗೃತಿ

ಭದ್ರ ಬಾಲ್ಯ ಯೋಜನೆಯ ಕುರಿತಂತೆ ಚಿಕ್ಕಮಗಳೂರು ಜಿಲ್ಲಾಡಳಿತ ನಿರ್ಮಾಣ ಮಾಡುತ್ತಿರುವ ಸ್ತಬ್ಧಚಿತ್ರ ಮಕ್ಕಳ ಸುರಕ್ಷತೆಯನ್ನು ಸಾರಿ ಹೇಳುತ್ತದೆ.

ಪ್ರತಿ ಮಗುವಿಗೂ ಸುರಕ್ಷಿತ, ಗೌರವಪೂರ್ವಕ ಮತ್ತು ಸಬಲೀಕೃತ ಬಾಲ್ಯವನ್ನು ಅನುಭವಿಸುವಂತೆ ಮಾಡುವ ಪರಿಕಲ್ಪನೆಯನ್ನು ಇದು ಹೊಂದಿದೆ.

ಬಾಲ್ಯವಿವಾಹ, ಲೈಂಗಿಕ ಶೋಷಣೆ, ಅಪ್ರಾಪ್ತ ವಯಸ್ಸಿನಲ್ಲಿ ಗರ್ಭಧಾರಣೆ ಬಗ್ಗೆ ಅರಿವು ಮೂಡಿಸಿ ಶಿಕ್ಷಣದ ಮಹತ್ವವನ್ನು ಸಾರಿ ಹೇಳಲಾಗುತ್ತಿದೆ. ಜ್ಞಾನ ತುಂಬಿದ ಆತ್ಮವಿಶ್ವಾಸವನ್ನು ದುಪ್ಪಟ್ಟುಗೊಳಿಸಿ, ಪರಿಪೂರ್ಣ ವ್ಯಕ್ತಿತ್ವ ನಿರ್ಮಾಣ ಮಾಡುವ ದೃಷ್ಟಿಯಿಂದ ಈ ಸ್ತಬ್ಧಚಿತ್ರ ನಿರ್ಮಾಣ ಮಾಡಲಾಗಿದೆ. ಶಾಲೆಯಲ್ಲಿನ ಕನಸುಗಳ ಗೋಡೆ ಪರಿಕಲ್ಪನೆ, ವಿದ್ಯಾರ್ಥಿಗಳು ಗೌಪ್ಯವಾಗಿ ಸಮಸ್ಯೆ ದಾಖಲಿಸುವ ವಿಶ್ವಾಸದ ಪೆಟ್ಟಿಗೆ ಅಳವಡಿಕೆ, ಬೆಳಗಿನ ಉಪಾಹಾರ, ಬಾಲ್ಯ ವಿವಾಹ ವಿರೋಧಿ ಪ್ರತಿಜ್ಞಾ ವಿಧಿ ಬೋಧನೆ ಸೇರಿದಂತೆ ಹಲವು ವಿಷಯಗಳನ್ನು ಈ ಸ್ತಬ್ಧಚಿತ್ರ ಕಟ್ಟಿಕೊಡುತ್ತದೆ.

ವ್ಯವಸ್ಥಿತ ಜಂಬೂಸವಾರಿಗೆ ಸಿದ್ಧತೆ ಆರಂಭ

●ಮೆರವಣಿಗೆ ಮಾರ್ಗ ಐದೂವರೆ ಕಿಲೋ ಮೀಟರ್ ತಡೆಗಟ್ಟೆ ನಿರ್ಮಾಣ ●ಪೊಲೀಸರ ಹದ್ದಿನಕಣ್ಣು



ಮೈಸೂರು ದಸರಾ ಜಂಬೂಸವಾರಿ ಮೆರವಣಿಗೆ ಸಾಗುವ ರಾಜಬೀದಿಗಳಲ್ಲಿ ತಡೆಗಟ್ಟೆ ನಿರ್ಮಾಣ ಕಾರ್ಯ ಭರದಿಂದ ಸಾಗಿದೆ.

ಮೈಸೂರು, ಸೆ.29(ಬಿಎಲ್‌ಯು)– ವಿಶ್ವ ಪ್ರಸಿದ್ಧ ಮೈಸೂರು ದಸರಾ ಉತ್ಸವದ ಕೊನೆಯ ದಿನ ನಡೆಯುವ ಜಂಬೂಸವಾರಿ ಮೆರವಣಿಗೆ ವೀಕ್ಷಣೆಗೆ ನಗರದ ರಾಜಬೀದಿಗಳಲ್ಲಿ ಶಿಸ್ತುಬದ್ಧ ವ್ಯವಸ್ಥೆ ಮಾಡಲಾಗುತ್ತಿದೆ.

ಮೈಸೂರು ಅರಮನೆಯಿಂದ ಆರಂಭವಾಗುವ ಜಂಬೂಸವಾರಿ ಮೆರವಣಿಗೆ ಚಾಮರಾಜ ಒಡೆಯರ್ ವೃತ್ತ, ಆಲ್ಬರ್ಟ್ ವಿಕ್ಟರ್ ರಸ್ತೆ ಕೆ.ಆರ್.ವೃತ್ತ ಸಯ್ಯಾಜಿರಾವ್ ರಸ್ತೆ ಆಯುರ್ವೇದಿಕ್ ಆಸ್ಪತ್ರೆ ವೃತ್ತ ಬಂಬೂ ಬಜಾರ್ ರಸ್ತೆ ಅಬ್ದುಲ್ ಕಲಾಂ ಆಜಾದ್ ವೃತ್ತದ ಮೂಲಕ ಬನ್ನಿಮಂಟಪ ತಲುಪಲಿದೆ

ಸುಮಾರು 5.5 ಕಿಲೋಮೀಟರ್ ವರೆಗೆ ಜಂಬೂಸವಾರಿ ಮೆರವಣಿಗೆ ಸಾಗಲಿದ್ದು, ರಸ್ತೆಯುದ್ದಕ್ಕೂ ಅಕ್ಕಪಕ್ಕದಲ್ಲಿ ಲಕ್ಷಾಂತರ ಜನರು ಮೆರವಣಿಗೆ ವೀಕ್ಷಣೆ ಮಾಡಲಿದ್ದಾರೆ.

ಜಂಬೂಸವಾರಿ ಮೆರವಣಿಗೆಯಲ್ಲಿ ಚಿನ್ನದ ಅಂಬಾರಿ ಹೊರುವ ಅಭಿಮನ್ಯು ಸೇರಿದಂತೆ 14 ಆನೆಗಳು ಸಾಗುತ್ತವೆ. ಮೆರವಣಿಗೆ ಸಾಗುವಾಗ ಜನರು ರಸ್ತೆಗಿಳಿದರೆ ಆನೆಗಳು ಗಾಬರಿಗೊಂಡು ಅವಘಡ ಸಂಭವಿಸುವ ಸಾಧ್ಯತೆ ಇರುತ್ತದೆ. ಆದ ಕಾರಣ ಜಿಲ್ಲಾಡಳಿತ ಮುಂಜಾಗ್ರತಾ ಕ್ರಮ ಕೈಗೊಂಡಿದೆ.



ಆಗಲೇ ಜಾಗ ಕಾಯ್ದಿರಿಸಿದ್ದಾರೆ..!

ಮತ್ತೊಂದೆಡೆ ಜಂಬೂಸವಾರಿ ಮೆರವಣಿಗೆಯನ್ನು ನಿರಾತಂಕವಾಗಿ ವೀಕ್ಷಿಸುವ ಸಲುವಾಗಿ ಜನ ರಸ್ತೆ ಬದಿ ತಮ್ಮ ಸ್ಥಳ ಕಾಯ್ದಿರಿಸುವ ಕಾರ್ಯವೂ ನಡೆದಿದೆ. ಹಲವರು ಚಾಪೆ, ಗೋಣಿತಾಟು, ಇನ್ನಿತರೆ ಪದಾರ್ಥ ತುಂಬುವ ಚೀಲಗಳ ಹಾಸಿ, ಅವುಗಳು ಗಾಳಿಯಿಂದ ಹಾರಿ ಹೋಗದಂತೆ ಕಲ್ಲುಗಳನ್ನು ಇರಿಸಿದ್ದಾರೆ.

ಮೆರವಣಿಗೆ ವೀಕ್ಷಣೆ ವೇಳೆ ನೂಕುನುಗ್ಗಲು ಉಂಟಾಗಿ ಜನರು ರಸ್ತೆಗೆ ಇಳಿಯದಂತೆ ತಡೆಗಟ್ಟೆಗಳನ್ನು ನಿರ್ಮಾಣ ಮಾಡಲಾಗುತ್ತಿದೆ. 5.5 ಕಿಲೋ ಮೀಟರ್ ಉದ್ದಕ್ಕೂ ಸಾವಿರಾರು ಪೊಲೀಸರನ್ನು ನಿಯೋಜನೆ ಮಾಡಲಾಗುತ್ತಿದೆ. ಒಬ್ಬರೂ ರಸ್ತೆಗಿಳಿಯದಂತೆ ಪೊಲೀಸರು ಹದ್ದಿನಕಣ್ಣಿಟ್ಟಿದ್ದಾರೆ.

ಜಂಬೂಸವಾರಿ ಮೆರವಣಿಗೆ ವೀಕ್ಷಣೆಗೆ ಟಿಕೆಟ್ ಹಾಗೂ ಪಾಸ್ ವಿತರಣೆ ಮಾಡಲಾಗಿದೆ. ಚಾಮರಾಜ ಒಡೆಯರ್ ವೃತ್ತದಿಂದ ಕೆಆರ್.ವೃತ್ತದವರೆಗೆ ಅಕ್ಕಪಕ್ಕದ ಫುಟ್‌ಪಾತ್‌ನಲ್ಲಿ ಪೆಂಡಾಲ್ ನಿರ್ಮಾಣ ಮಾಡಲಾಗಿದೆ.

ಅಲ್ಲದೆ ಚಿಕ್ಕಗಡಿಯಾರ ಹಾಗೂ ಬಂಬೂ ಬಜಾರ್‌ನಲ್ಲಿ ಮೆರವಣಿಗೆ ವೀಕ್ಷಣೆಗೆ ಪೊಲೀಸ್ ಇಲಾಖೆ ಅನುಮತಿ ಪಡೆದು ಕೆಲವು ಸಂಘ ಸಂಸ್ಥೆಯವರು ತಮಗಾಗಿ ಪೆಂಡಾಲ್ ನಿರ್ಮಾಣ ಮಾಡಿಕೊಂಡಿದ್ದಾರೆ.

ವನ್ಯಜೀವಿ–ಮಾನವ ಸಂಘರ್ಷ ತಡೆಗಟ್ಟುವಲ್ಲಿ ರಾಜ್ಯದ ಮಾವುತರು, ಕಾವಾಡಿಗಳಿಗೆ ಒಳ್ಳೆ ಹೆಸರಿದೆ

●ಅರಣ್ಯ ಸಚಿವ ಈಶ್ವರ ಖಂಡ್ರೆ ಪ್ರಶಂಸೆ ●ಪುಂಡಾನೆ ಪಳಗಿಸುವುದು ನಮ್ಮ ಮಾವುತರಿಗೆ ಕರಗತವಾಗಿದೆ

ಮೈಸೂರು,ಸೆ.29(ಎಂಟಿವೈ)– ದೇಶದಲ್ಲಿಯೇ ಹೆಸರುವಾಸಿಯಾಗಿರುವ ಕರ್ನಾಟಕದ ಮಾವುತರು, ಕಾವಾಡಿಗಳು ವನ್ಯಜೀವಿ–ಮಾನವ ಸಂಘರ್ಷ ತಡೆಗಟ್ಟುವಲ್ಲಿ ಪ್ರಮುಖ ಪಾತ್ರ ವಹಿಸುತ್ತಿದ್ದಾರೆ ಎಂದು ಅರಣ್ಯ ಸಚಿವ ಈಶ್ವರ ಬಿ.ಖಂಡ್ರೆ ಅಭಿಪ್ರಾಯಪಟ್ಟಿದ್ದಾರೆ.

ಮೈಸೂರು ಅರಮನೆ ಆವರಣದಲ್ಲಿ ಸೋಮವಾರ ಗಜಪಡೆಯ ಮಾವುತರು, ಕಾವಾಡಿಗಳಿಗೆ ಕಿಟ್ ವಿತರಿಸಿದ ಬಳಿಕ ಮಾತನಾಡಿದ ಅವರು, ಸೆರೆ ಹಿಡಿದ ಪುಂಡಾನೆಗಳನ್ನು ಪಳಗಿಸುವ ಕಲೆ ಕರ್ನಾಟಕದ ಮಾವುತರಿಗೆ ಕರಗತವಾಗಿದೆ. ಯಾವುದೇ ವಿಶ್ವವಿದ್ಯಾನಿಲಯದಲ್ಲಿ ಕಲಿಸದೇ ಇರುವ ಕಲೆಯನ್ನು ನಮ್ಮ ಮಾವುತರು, ಕಾವಾಡಿಗಳು ವಂಶಪಾರಂಪರ್ಯವಾಗಿ ಕಲಿತುಕೊಳ್ಳುತ್ತಿದ್ದಾರೆ. 3–4 ತಲೆಮಾರಿನಿಂದ ಕಲಿತ ಕಲೆಯನ್ನು ಪುಂಡಾನೆ ಹಾಗೂ ಜನರ ಮೇಲೆ ದಾಳಿ ಮಾಡುವ ಹುಲಿ ಸೆರೆ ಕಾರ್ಯಾಚರಣೆಗಳಲ್ಲಿ ತೋರ್ಪಡಿಸುತ್ತಿದ್ದಾರೆ. ದೇಶದಲ್ಲಿಯೇ ಆನೆಗಳನ್ನು ಪಳಗಿಸುವಲ್ಲಿ ಕರ್ನಾಟಕದ ಮಾವುತರು ಮತ್ತು ಕಾವಾಡಿಗಳಿಗೆ ವಿಶೇಷ ಕೌಶಲವಿದೆ ಆ ಕಾರಣದಿಂದ ಆಂಧ್ರಪ್ರದೇಶ, ಕರ್ನಾಟಕದ ಸಾಕಾನೆಗಳನ್ನು ಕೇಳಿತ್ತು. ಅದಕ್ಕೆ ಅವಕಾಶ ಕಲ್ಪಿಸಲಾಗಿದೆ. ಹಾಗೆಯೇ ಇದೀಗ ಗೋವಾ ಸೇರಿದಂತೆ ಕೆಲ ರಾಜ್ಯಗಳು ಅಲ್ಲಿನ ಪುಂಡಾನೆ ಸೆರೆಗಾಗಿ ರಾಜ್ಯದ ಕುಮ್ಕಿ ಆನೆಗಳನ್ನೇ ಕೇಳುತ್ತಿವೆ. ಇದರಿಂದ ರಾಜ್ಯದ ಮಾವುತರು, ಕಾವಾಡಿಗಳ ಮಹತ್ವ ಎಷ್ಟಿದೆ ಎಂಬುದು ಗೊತ್ತಾಗುತ್ತಿದೆ. ರಾಜ್ಯದ ಮಾವುತರು, ಕಾವಾಡಿಗಳಿಗೆ ಆನೆಗಳನ್ನು ಪಳಗಿಸುವ ಕಲೆ ಚೆನ್ನಾಗಿಯೇ ತಿಳಿದಿದ್ದರೂ, ಅವರಿಗೆ ತಜ್ಞರಿಂದ ವೃತ್ತಿ ತರಬೇತಿ ನೀಡಿ, ನೈಪುಣ್ಯತೆಯನ್ನು ಮತ್ತಷ್ಟು ಹೆಚ್ಚಿಸಲಾಗುತ್ತಿದೆ ಎಂದರು.

ದಸರಾ ಗಜಪಡೆಯ ಮುಂದೆ ಸೆಲ್ಫಿ, ರೀಲ್ಸ್‌ಗೆ ಅವಕಾಶವಿಲ್ಲ: ದಸರಾ ಆನೆಗಳ ಸೊಂಡಿಲು ದುತಹಿಡಿದುಕೊಂಡು ಫೋಟೋ, ರೀಲ್ಸ್ ಮಾಡಿ ಸಾಮಾಜಿಕ ಜಾಲತಾಣಗಳಲ್ಲಿ ಹಾಕುವವರ ಸಂಖ್ಯೆ ಹೆಚ್ಚಾಗುತ್ತಿದೆ. ಆನೆಗಳನ್ನು ಪಳಗಿಸಿದ್ದರೂ, ಕೆಲವೊಂದು ಸಂದರ್ಭದಲ್ಲಿ ಪ್ರಾಣಿಗಳ ವರ್ತನೆಯನ್ನು ಊಹಿಸುವುದೂ ಅಸಾಧ್ಯ ಹೀಗಾಗಿ ದಸರಾ ಮಹೋತ್ಸವದಲ್ಲಿ ಪಾಲ್ಗೊಂಡಿರುವ ಆನೆಗಳ ಬಳಿ ಯಾರಿಗೂ ಬಿಡದಂತೆ ಸೂಚನೆ ನೀಡಲಾಗಿದೆ. ಆದರೂ ಕೆಲವರು ಫೋಟೋ, ರೀಲ್ಸ್ ಮಾಡಿದ್ದು ಇಂತಹವರಿಗೆ ನಿರ್ದಾಕ್ಷಿಣ್ಯವಾಗಿ ದಂಡ ವಿಧಿಸಲು ಸೂಚಿಸಲಾಗಿದೆ

ಕಮಾಂಡೋ ಭದ್ರತೆ: ದಸರಾ ಆನೆಗಳ ಬಳಿ ಹೋಗದಂತೆ ತಡೆಯಲು ಕಮಾಂಡೋ ಬಳಕೆಗೂ ಸೂಚಿಸಲಾಗಿದೆ. ಇತ್ತೀಚೆಗೆ ಮಹಿಳೆಯೊಬ್ಬರು ಸಿಬ್ಬಂದಿಯ ಕಣ್ತಪ್ಪಿಸಿ ರೀಲ್ಸ್ ಮಾಡಿದ್ದಾರೆ. ಇದು ಮೇಲ್ನೋಟಕ್ಕೆ ಕರ್ತವ್ಯಲೋಪವಾಗಿದೆ ಎಂಬುದನ್ನು ಪುಷ್ಟೀಕರಿಸಿದ್ದು, ಅಧಿಕಾರಿ, ಸಿಬ್ಬಂದಿಗೂ ಕಾರಣ ಕೇಳಿ ನೋಟಿಸ್ ನೀಡಲಾಗಿದೆ ಎಂದು ಸ್ಪಷ್ಟಪಡಿಸಿದರು.

ಇದೇ ತಿಂಗಳು ಯಸಳೂರಿನಲ್ಲಿ ಅರ್ಜುನನ ಸ್ಮಾರಕ ಅನಾವರಣ: ಮೈಸೂರು ದಸರಾದಲ್ಲಿ 8 ಬಾರಿ ಅಂಬಾರಿ ಹೊತ್ತು ಹೆಜ್ಜೆ ಹಾಕುತ್ತಾ ಜನಮನ ಗೆದ್ದಿದ್ದ ಅರ್ಜುನ ಹಾಸನ ಜಿಲ್ಲೆ ಯಸಳೂರು ಬಳಿ ಪುಂಡಾನೆ ಸೆರೆ ಕಾರ್ಯಾಚರಣೆ ವೇಳೆ ಹುತಾತ್ಮನಾಗಿದ್ದು, ಸರ್ಕಾರ ಅರ್ಜುನ ಆಶ್ರಯ ಪಡೆದಿದ್ದ ನಾಗರಹೊಳೆಯ ಬಳ್ಳೆ ಮತ್ತು ಯಸಳೂರಿನಲ್ಲಿ ಸ್ಮಾರಕ ನಿರ್ಮಿಸಲಾಗಿದೆ. ಈಗಾಗಲೇ ಬಳ್ಳೆಯಲ್ಲಿ ನಿರ್ಮಿಸಿರುವ ಸ್ಮಾರಕವನ್ನು ಉದ್ಘಾಟಿಸಲಾಗಿದ್ದು, ಈ ತಿಂಗಳಲ್ಲಿ ಯಸಳೂರಿನಲ್ಲೂ ಅರ್ಜುನನ ಸ್ಮಾರಕ ಉದ್ಘಾಟಿಸುವುದಾಗಿ ತಿಳಿಸಿದರು.

ಕಿಟ್ ವಿತರಣೆ: ಇದೇ ವೇಳೆ ದಸರಾ ಗಜಪಡೆ 14 ಆನೆಗಳ ಮಾವುತರು, ಕಾವಾಡಿಗಳು ಹಾಗೂ ವಿಶೇಷ ಮಾವುತರಿಗೆ ಕಿಟ್ ವಿತರಿಸಲಾಯಿತು. ಈ ಸಂದರ್ಭದಲ್ಲಿ ಎಪಿಸಿಸಿಎಫ್ ಮನೋಜ್ ರಂಜನ್, ಸಿಎಫ್ ರವಿಶಂಕರ್, ಡಿಸಿಎಫ್‌ಗಳಾದ ಡಾ.ಐ.ಬಿ.ಪ್ರಭುಗೌಡ, ಕೆ.ಪರಮೇಶ್, ಶಂಕರೇಗೌಡ, ಮೃಗಾಲಯದ ಕಾರ್ಯನಿರ್ವಾಹಕ ನಿರ್ದೇಶಕರಾದ ಅನುಷಾ, ಜಿಲ್ಲಾ ಕಾಂಗ್ರೆಸ್ ಅಧ್ಯಕ್ಷ ಡಾ.ಬಿ.ಜೆ.ವಿಜಯ್ ಕುಮಾರ್ ಹಾಗೂ ಇನ್ನಿತರರು ಉಪಸ್ಥಿತರಿದ್ದರು.



ಅರಮನೆ ಆವರಣದಲ್ಲಿ ಗಜಪಡೆಯ ಕ್ಯಾಪ್ಟನ್ ಅಭಿಮನ್ಯು, ಕಾವೇರಿ ಮತ್ತು ಹೇಮಾವತಿ ಆನೆಗೆ ಪೂಜೆ ಸಲ್ಲಿಸಲಾಯಿತು.

ಅಭಿಮನ್ಯುವಿಗೆ ಪೂಜೆ ಸಲ್ಲಿಸಿದ ಸಚಿವ ಖಂಡ್ರೆ

ಮೈಸೂರು, ಸೆ.29(ಎಂಟಿವೈ)– ದಸರಾ ಜಂಬೂಸವಾರಿಯಲ್ಲಿ ಅಂಬಾರಿ ಹೊರಲಿರುವ ಕ್ಯಾಪ್ಟನ್ ಅಭಿಮನ್ಯು ಹಾಗೂ ಕಾವೇರಿ, ಹೇಮಾವತಿಗೆ ಸಚಿವ ಈಶ್ವರ ಖಂಡ್ರೆ ಪೂಜೆ ಸಲ್ಲಿಸಿದರು.

ಅರಮನೆ ಆವರಣದಲ್ಲಿರುವ ಕೋಡಿ ಸೋಮೇಶ್ವರ ದೇವಾಲಯದ ಬಳಿ ಈ ಮೂರು ಆನೆಗಳಿಗೆ ಅರ್ಚಕ ಪ್ರಹ್ಲಾದ್‌ರಾವ್ ಪೂಜೆ ಸಲ್ಲಿಸಿದರು. ಈ ವೇಳೆ ಸಚಿವರು ಕಬ್ಬು, ಬೆಲ್ಲ, ಹಣ್ಣುಗಳನ್ನು ತಿನ್ನಿಸಿ, ಆಶೀರ್ವಾದ ಪಡೆದರು.

ಇದಕ್ಕೂ ಮುನ್ನಾ ಸಚಿವರು ಆನೆ ಬಿಡಾರದತ್ತ ಆಗಮಿಸುತ್ತಿದ್ದಂತೆ ಧನಂಜಯ, ಭೀಮ ಮತ್ತು ಏಕಲವ್ಯ ಗೌರವ ಸಲ್ಲಿಸಿದವು. ಜತೆಗೆ ಇದೇ ಮೊದಲ ಬಾರಿಗೆ ಅರಮನೆ ಅಂಗಳದಲ್ಲಿ ಅರಣ್ಯ ಸಚಿವರಿಗೂ ಇಲಾಖೆ ಸಿಬ್ಬಂದಿ ಗೌರವ ವಂದನೆ ಸಲ್ಲಿಸಿದರು.



ಮಾವುತರು, ಕಾವಾಡಿಗಳಿಗೆ ಅರಣ್ಯ ಸಚಿವ ಈಶ್ವರ್ ಖಂಡ್ರೆ ಕಿಟ್ ವಿತರಿಸಿದರು.

ಚಿರತೆ ಕಾರ್ಯಪಡೆಗೆ ವಾಹನ, ಸುರಕ್ಷತಾ ಪರಿಕರ



ಮೈಸೂರು, ಸೆ.29(ಎಂಟಿವೈ)– ಮೈಸೂರು ಜಿಲ್ಲೆಯಲ್ಲಿ ಚಿರತೆಗಳ ಉಪಟಳ ನಿಯಂತ್ರಣಕ್ಕೆ ಸಂಬಂಧಿಸಿದಂತೆ ರಚಿಸಿರುವ ಚಿರತೆ ಕಾರ್ಯಪಡೆಗೆ ಹೊಸದಾಗಿ ಐದು ವಾಹನ ಹಾಗೂ ಸಿಬ್ಬಂದಿಯ ಸುರಕ್ಷತೆಗೆ ವಿವಿಧ ಪರಿಕರಗಳನ್ನು ಅರಣ್ಯ ಸಚಿವ ಈಶ್ವರ್ ಬಿ.ಖಂಡ್ರೆ ವಿತರಿಸಿದರು.

ಅರಮನೆ ಆವರಣದಲ್ಲಿ ನಡೆದ ಕಾರ್ಯಕ್ರಮದಲ್ಲಿ ಚಿರತೆ ಕಾರ್ಯಪಡೆಗಾಗಿ ಅರಣ್ಯ ಇಲಾಖೆ ಖರೀದಿಸಿರುವ ಐದು ಹೊಸ ವಾಹನ ಹಾಗೂ ಫೈಬರ್ ಲಾಟಿ, ರಕ್ಷ ಕವಚ ಸೇರಿದಂತೆ ವಿವಿಧ ಪರಿಕರಗಳನ್ನು ಚಿರತೆ ಪಡೆಗೆ ಸಮರ್ಪಿಸಿದರು.

ಇದೇ ವೇಳೆ ಉಪಟಳ ನೀಡುವ ಚಿರತೆ ಸೆರೆ ಹಾಗೂ ಪತ್ತೆಗೆ ಬಳಸುವ ಥರ್ಮಲ್ ಡ್ರೋನ್, 360 ಡಿಗ್ರಿ ಡ್ರೋನ್, ಸೋಲಾರ್ ಚಾಲಿತ ಸೆನ್ಸಾರ್ ಡ್ರೋನ್, ಟಾರ್ಚ್, ಚಿರತೆ ಸೆರೆಗೆ ಬಳಸುವ ಬೋನ್, ಚಿರತೆ ಮರಿಗಳ ರಕ್ಷಣೆಗೆ ಬಳಸುವ ಚಿಕ್ಕ ಬೋನ್, ಬಲೆ ಸೇರಿದಂತೆ ವಿವಿಧ ವಸ್ತುಗಳನ್ನು ಪ್ರದರ್ಶಿಸಿ, ಸಚಿವರಿಗೆ ಮಾಹಿತಿ ನೀಡಲಾಯಿತು.

ಸಮೀಕ್ಷೆಯಲ್ಲಿ ಎಲ್ಲರೂ ಪಾಲ್ಗೊಳ್ಳಲೇಬೇಕು

ಮೈಸೂರು,ಸೆ.29(ಎಂಟಿವೈ)– ರಾಜ್ಯ ಸರ್ಕಾರದಿಂದ ನಡೆಸಲಾಗುತ್ತಿರುವ ಆರ್ಥಿಕ, ಸಾಮಾಜಿಕ ಮತ್ತು ಶೈಕ್ಷಣಿಕ ಸಮೀಕ್ಷೆಯಲ್ಲಿ ಯಾವುದೇ ಗೊಂದಲ ಇಲ್ಲ. ಎಲ್ಲರೂ ಇದರಲ್ಲಿ ಪಾಲ್ಗೊಳ್ಳಬೇಕು ಎಂದು ಅರಣ್ಯ ಸಚಿವ ಈಶ್ವರ್ ಬಿ. ಖಂಡ್ರೆ ಮನವಿ ಮಾಡಿದ್ದಾರೆ.

ಮೈಸೂರಲ್ಲಿ ಪತ್ರಕರ್ತರೊಂದಿಗೆ ಮಾತನಾಡಿದ ಅವರು, ಗಣತಿಯಲ್ಲಿ ಯಾವುದೇ ಗೊಂದಲ ಇಲ್ಲ. ಸಮೀಕ್ಷೆಯಲ್ಲಿ ಪಾಲ್ಗೊಳ್ಳಿ ಎಂದು ನಾವು ಮನವಿ ಮಾಡುತ್ತೇವೆ. ಎಲ್ಲಾ ಸಮುದಾಯದವರು ಕಡ್ಡಾಯವಾಗಿ ಪಾಲ್ಗೊಳ್ಳಬೇಕು. ಸರ್ವೋಚ್ಚ ನ್ಯಾಯಾಲಯ ಸಮೀಕ್ಷೆಯಲ್ಲಿ ಪಾಲ್ಗೊಳ್ಳುವುದು ಕಡ್ಡಾಯ ಅಲ್ಲ ಎಂದು ಹೇಳಿದೆ. ಆದರೂ, ಸರ್ಕಾರ ಇದರಲ್ಲಿ ಭಾಗಿಯಾಗುವಂತೆ ಕೋರುವುದಾಗಿ ತಿಳಿಸಿದರು. ಭದ್ರಾ ಅರಣ್ಯದಲ್ಲಿ ಜಿಂಕೆ ಬೇಟೆ ಪ್ರಕರಣ ಕುರಿತು ಎರಡು ದಿನಗಳ ಹಿಂದೆಯಷ್ಟೇ ನನಗೆ ವಿಚಾರ ಗೊತ್ತಾಗಿದೆ. ತನಿಖೆಗೆ ಆದೇಶ ಮಾಡಿದ್ದು, ವರದಿ ಬಂದ ನಂತರ ಕ್ರಮ ಕೈಗೊಳ್ಳಲಾಗುವುದು. ಯಾರೇ ಅರಣ್ಯ ಕಾನೂನನ್ನು ಉಲ್ಲಂಘಿಸಿದರೂ ಬಿಡುವ ಮಾತಿಲ್ಲ ಎಂದು ಹೇಳಿದರು.

ಪಾಕ್ ಸರ್ಕಾರದ ವಿರುದ್ಧ ಪಿಒಕೆ ಭಾರೀ ಪ್ರತಿಭಟನೆ

ಪಿಒಕೆ: ಪಾಕಿಸ್ತಾನಕ್ಕೆ ಬಲೂಚಿಸ್ಥಾನದ ಬಳಿಕ ಮತ್ತೊಂದು ದೊಡ್ಡ ತಲೆನೋವು ಎದುರಾಗಿದ್ದು, ಪಾಕ್ ಆಕ್ರಮಿತ ಕಾಶ್ಮೀರದಲ್ಲಿ ಮತ್ತೆ ಪ್ರತಿಭಟನೆಗಳು ತೀವ್ರಗೊಂಡಿವೆ.

ಪಾಕಿಸ್ತಾನ ಆಕ್ರಮಿತ ಕಾಶ್ಮೀರ (ಪಿಒಕೆ) ಇತ್ತೀಚಿನ ಇತಿಹಾಸದಲ್ಲಿಯೇ ಅತಿದೊಡ್ಡ ಪ್ರತಿಭಟನೆಗಳಲ್ಲಿ ಒಂದಕ್ಕೆ ಸಾಕ್ಷಿಯಾಗುತ್ತಿದೆ. ಅವಾಮಿ ಕ್ರಿಯಾ ಸಮಿತಿ (ಎಎಸಿ) ಸೋಮವಾರ ಈ ಪ್ರದೇಶದಾದ್ಯಂತ ವ್ಯಾಪಕ ಪ್ರದರ್ಶನಗಳನ್ನು ಪ್ರಾರಂಭಿಸಿದೆ. 'ಶಟರ್–ಡೌನ್ ಮತ್ತು ವೀಲ್–ಜಾಮ್' ಮುಷ್ಕರಕ್ಕೆ ಕರೆ ನೀಡಿರುವುದು ಅನಿರ್ದಿಷ್ಟ ಉದ್ವಿಗ್ನತೆಗೆ ಕಾರಣವಾಗಿದೆ.

ಇತ್ತೀಚಿನ ತಿಂಗಳುಗಳಲ್ಲಿ ಜನಪ್ರಿಯತೆಯನ್ನು ಗಳಿಸಿರುವ ನಾಗರಿಕ ಸಮಾಜದ ಒಕ್ಕೂಟವಾದ ಎಎಸಿ, ದಶಕಗಳ ರಾಜಕೀಯ ಅಂಚಿನಲ್ಲಿರುವಿಕೆ ಮತ್ತು ಆರ್ಥಿಕ ನಿರ್ಲಕ್ಷ್ಯವನ್ನು ಉಲ್ಲೇಖಿಸಿ ತನ್ನ ಬ್ಯಾನರ್ ಅಡಿಯಲ್ಲಿ ಸಾವಿರಾರು ಜನರನ್ನು ಒಟ್ಟುಗೂಡಿಸಿದೆ. ಗುಂಪಿನ 38–ಅಂಶಗಳ ಚಾರ್ಟರ್ ಪಾಕಿಸ್ತಾನದಲ್ಲಿ ವಾಸಿಸುವ ಕಾಶ್ಮೀರಿ ನಿರಾಶ್ರಿತರಿಗೆ ಮೀಸಲಾಗಿರುವ ಪಿಒಕೆ ವಿಧಾನಸಭೆಯಲ್ಲಿ 12 ಶಾಸಕಾಂಗ ಸ್ಥಾನಗಳನ್ನು ರದ್ದುಗೊಳಿಸುವುದು ಸೇರಿದಂತೆ ರಚನಾತ್ಮಕ ಸುಧಾರಣೆಗಳನ್ನು ಒತ್ತಾಯಿಸುತ್ತದೆ. 12 ಶಾಸಕ ಸ್ಥಾನಗಳನ್ನು ಮೀಸಲಿರಿಸಿರುವುದು ಪ್ರತಿನಿಧಿ ಆಡಳಿತವನ್ನು ದುರ್ಬಲಗೊಳಿಸುತ್ತದೆ ಎಂದು ಸ್ಥಳೀಯರು ವಾದಿಸುತ್ತಾರೆ. ಇತರ ಆದ್ಯತೆಗಳಲ್ಲಿ ಸಬ್ಸಿಡಿ ಹಿಟ್ಟು, ಮಂಗ್ಲಾ ಜಲವಿದ್ಯುತ್ ಯೋಜನೆಗೆ ಸಂಬಂಧಿಸಿದ ನ್ಯಾಯಯುತ ವಿದ್ಯುತ್ ಸುಂಕಗಳು ಮತ್ತು ಇಸ್ಲಾಮಾಬಾದ್ ಭರವಸೆ ನೀಡಿದ ದೀರ್ಘಕಾಲದಿಂದ ವಿಳಂಬವಾದ ಸುಧಾರಣೆಗಳ ಅನುಷ್ಠಾನ ಸೇರಿವೆ.

ಕರೂರು ಕಾಲ್ತುಳಿತ ದುರಂತ

ತೇಜಸ್ವಿ ಸೂರ್ಯ ಸೇರಿ 8 ಎನ್‌ಡಿಎ ಸಂಸದರ ನಿಯೋಗ ರಚನೆ



ತೇಜಸ್ವಿ ಸೂರ್ಯ

ನವದೆಹಲಿ: ತಮಿಳುನಾಡಿನ ಕರೂರು ಜಿಲ್ಲೆಯಲ್ಲಿ ನಡೆದ ಭೀಕರ ಕಾಲ್ತುಳಿತ ದುರಂತದ ಬಗ್ಗೆ ತನಿಖೆ ನಡೆಸಲು ಎನ್‌ಡಿಎ ಮೈತ್ರಿಕೂಟದಿಂದ 8 ಸಂಸದರ ನಿಯೋಗ ವನ್ನು ರಚಿಸಲಾಗಿದೆ ಎಂದು ಬಿಜೆಪಿ ರಾಷ್ಟ್ರೀಯ ಅಧ್ಯಕ್ಷ ಜೆ.ಪಿ. ನಡ್ಡಾ ತಿಳಿಸಿದ್ದಾರೆ.

ಬಿಜೆಪಿ ಸಾಮಾನ್ಯವಾಗಿ ದುರಂತಗಳು ನಡೆದ ಸಂದರ್ಭದಲ್ಲಿ ತನಿಖೆಗಾಗಿ ತನ್ನದೇ ಪಕ್ಷದ ನಾಯಕರನ್ನು ಕಳುಹಿಸುತ್ತಿತ್ತು. ಆದರೆ, ಈ ಬಾರಿ ತನ್ನ ಮಿತ್ರಪಕ್ಷಗಳಾದ ಶಿವಸೇನಾ, ತೆಲುಗು ದೇಶಂ ಪಕ್ಷದ (ಟಿಡಿಪಿ) ಸಂಸದರನ್ನು ಒಳಗೊಂಡ ಎಂಟು ಸದಸ್ಯರ ಸಮಿತಿಯನ್ನು ರಚಿಸಿದೆ. ಈ ನಿಯೋಗದಲ್ಲಿ ಶಿವಸೇನಾ ಸಂಸದ ಶ್ರೀಕಾಂತ್ ಶಿಂಧೆ, ಟಿಡಿಪಿ ಸಂಸದ ಮಹೇಶ್‌ಕುಮಾರ್ ಸೇರಿದಂತೆ ಬಿಜೆಪಿ ಸಂಸದರಾದ ಹೇಮಾಮಾಲಿನಿ, ಅಪರಾಜಿತಾ ಸಾರಂಗಿ, ರೇಖಾ ಶರ್ಮಾ, ಬ್ರಿಜ್‌ಲಾಲ್, ಅನುರಾಗ್ ಠಾಕೂರ್, ತೇಜಸ್ವಿ ಸೂರ್ಯ ಇದ್ದಾರೆ.

ನಕ್ಕರೆ ಅದೇ ಸ್ವರ್ಗ

ಗುಂಡ ಎಮ್ಮೆ ಕಳೆದುಕೊಂಡು ಹುಚ್ಚನಂಗ ಹುಡುಕಾಡಿ ಮಂಗ್ಯಾನಂಗ ಮರ ಹತ್ತಿ ಕುಳಿತ. ಅದೇ ಮರದ ಕೆಳಗೆ ಲವರ್ಸ್‌ಗಳು ಬಂದು ಕುಳಿತುಕೊಂಡರು.
ಹುಡುಗ : ಪ್ರಿಯೆ... ನಿನ್ನ ಕಣ್ಣಿನಲ್ಲಿ ಇಡೀ ಪ್ರಪಂಚಾನೇ ಕಾಣುತ್ತಿದೆ!
ಮರದ ಮೇಲಿದ್ದ ಗುಂಡ ತಕ್ಷಣ ಕೇಳಿದ ; ಯಪ್ಪಾ ಸ್ವಲ್ಪ ನನ್ ಎಮ್ಮಿ ಎಲ್ಲೀ ನಿಂತದ ಅಂತ ನೋಡು ಮತ್ತಾ...!

ಮೈಸೂರು ಮಿತ್ರ
ಮಂಗಳವಾರ, 30 ಸೆಪ್ಟೆಂಬರ್ 2025
ಸತ್ಯೇನೋತ್ತಭಿತಾ ಭೂಮಿಃ ನ ಹಿ ಸತ್ಯಾತ್ಪರೋ ಧರ್ಮಃ
(ಭೂಮಿಯು ಸತ್ಯದ ಮೇಲೆ ನಿಂತಿದೆ, ಸತ್ಯಕ್ಕಿಂತ ಮಿಗಿಲಾದ ಧರ್ಮವಿಲ್ಲ)
ಸಂಪಾದಕ: ಎಂ.ಗೋವಿಂದೇಗೌಡ M.A.

ಅಮೃತ ವಾಹಿನಿ......


ಸ್ನೇಹ, ಸೌಜನ್ಯದಿಂದ ಮನುಷ್ಯನನ್ನು ಗೆಲ್ಲಬಹುದೇ ಹೊರತು ಬರಿಯ ಶಕ್ತಿಯಿಂದಲ್ಲ. – ಅರಿಸ್ಟಾಟಲ್

ವೇದ ಸುಳ್ಳಾದರೂ { ಆರಕ್ಕೇರಲಿಲ್ಲ,
ಗಾದೆ ಸುಳ್ಳಾಗದು { ಮೂರಕ್ಕಿಳಿಯಲಿಲ್ಲ

ನಿಮ್ಮ ಪತ್ರಗಳು

ಮರೆಯಲಾಗದ ಶಂಕರ್‌ನಾಗ್

ಮಾನ್ಯರೆ,



ಹಿರಿಯ ನಟ, ನಿರ್ದೇಶಕ, ಕರಾಟೆ ಕಿಂಗ್ ಶಂಕರ್ ನಾಗ್ ನಮ್ಮನ್ನಗಲಿ (ಸೆಪ್ಟೆಂಬರ್ 30/1990) ಇಂದಿಗೆ 35 ವರ್ಷಗಳು ಕಳೆದಿವೆ. ಆದರೆ ಅವರ ನಟನೆ–ನಿರ್ದೇಶನದ ಚಿತ್ರಗಳು ಕನ್ನಡಿಗರಲ್ಲಿ ಇಂದಿಗೂ ಹಸಿರಾಗಿವೆ.

ಒಂದಾನೊಂದು ಕಾಲದಲ್ಲಿ ಚಿತ್ರದ ಮೂಲಕ ಸಿನಿಮಾ ಪ್ರವೇಶ ಮಾಡಿದ ಶಂಕರ್‌ನಾಗ್ ಬಹು ಬೇಗನೆ ಅಭಿಮಾನಿಗಳ ಹೃದಯದಲ್ಲಿ ಆಸೀನರಾದರು. ಶಂಕರ್ ನಾಗ್ ನಿರ್ದೇಶನದ ಕರ್ನಾಟಕ ರತ್ನ, ಪದ್ಮಭೂಷಣ ಡಾ.ರಾಜ್‌ಕುಮಾರ್ ನಟನೆಯ "ಒಂದು ಮುತ್ತಿನ ಕಥೆ". ಮೈಸೂರ್ ರತ್ನ ಡಾ.ರೆಬಲ್‌ಸ್ಟಾರ್ ಅಂಬರೀಶ್ ನಟನೆಯ 'ಹೊಸ ತೀರ್ಪು' ಚಿತ್ರಗಳು ವಿಭಿನ್ನ, ವಿಶಿಷ್ಟವಾದವು. ನಟನೆ, ನಿರ್ದೇಶನ ಎರಡರಲ್ಲೂ ಸೈ ಎನಿಸಿಕೊಂಡ ಶಂಕರ್‌ನಾಗ್ ಚಿತ್ರರಂಗದಲ್ಲಿದ್ದದ್ದು ಕೇವಲ 12 ವರ್ಷ. ಆದರೆ ಗಳಿಸಿದ್ದು ಮಾತ್ರ ಅಪಾರ ಪ್ರೀತಿ, ವಿಶ್ವಾಸ ಹಾಗೂ ಯಶಸ್ಸು.

ಸೀತಾರಾಮು, ಗೀತ, ಅಪೂರ್ವ ಸಂಗಮ, ಭರ್ಜರಿ ಬೇಟೆ, ಮಿಂಚಿನ ಓಟ, ಗೆದ್ದ ಮಗ, ನ್ಯಾಯ ಎಲ್ಲಿದೆ, ಮಾನವ ದಾನವ, ಆರದ ಗಾಯ, ಮುನಿಯನ ಮಾದರಿ, ಮೂಗನ ಸೇಡು, ಜಯಭೇರಿ, ಮಹೇಶ್ವರ, ದೇವರ ಆಟ, ಸಿ.ಬಿ.ಐ. ಶಂಕರ್, ಸಾಂಗ್ಲಿಯಾನ, ಸುಂದರಕಾಂಡ, ನಾಗಿಣಿ, ಹೊಸ ಜೀವನ, ಪ್ರಾಣ ಸ್ನೇಹಿತ, ಇನ್ನೂ ಹಲವು ಚಿತ್ರಗಳಲ್ಲಿ ಮನೋಜ್ಞವಾಗಿ ಅಭಿನಯಿಸಿ ಅಭಿಮಾನಿಗಳ ಮನದಲ್ಲಿ ಶಾಶ್ವತವಾಗಿ ನೆಲೆಸಿದ್ದಾರೆ. ಆಟೋರಾಜ ಚಿತ್ರದ ಮೂಲಕ ಹೊಸ ಇತಿಹಾಸ ಬರೆದ ಶಂಕರ್‌ನಾಗ್ ಇಂದಿಗೂ ಆಟೋಚಾಲಕರ ಪ್ರತಿನಿಧಿಯಾಗಿದ್ದಾರೆ. 30.9.1990ರ ರಾತ್ರಿ ದಾವಣಗೆರೆ ಸಮೀಪ ಕಾರು ಅಪಘಾತದಲ್ಲಿ ನಮ್ಮಿಂದ ದೂರವಾದರೂ ಅವರ ಅಭಿನಯದ ಚಿತ್ರಗಳ ಮೂಲಕ ನಮಗೆ ಇನ್ನೂ ಹೆಚ್ಚೆಚ್ಚು ಹತ್ತಿರವಾಗುತ್ತಿದ್ದಾರೆ. ರಾಜ್ಯದ ಯಾವುದಾದರೂ ವಿಶ್ವವಿದ್ಯಾನಿಲಯ ಕರಾಟೆ ಕಿಂಗ್ ಶಂಕರ್ ನಾಗ್ ಅವರಿಗೆ ಮರಣೋತ್ತರವಾಗಿ ಗೌರವ ಡಾಕ್ಟರೇಟ್ ನೀಡಲಿ. –ಅಹಲ್ಯ .ಸಿ .ನಾ.ಚಂದ್ರ, ಜನತಾನಗರ, ಮೈಸೂರು.

ಹರಿಕಥೆ ಬಗ್ಗೆ ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಗಮನಹರಿಸಲಿ

ಮಾನ್ಯರೆ,

ಹರಿಕಥೆಗಳು ಈಗ ಬಹಳ ಅಪರೂಪ ಎನ್ನುವಷ್ಟು ಕಡಿಮೆಯಾಗಿವೆ. ಇದಕ್ಕೆ ಮುಖ್ಯ ಕಾರಣ ಗ್ರಾಮಗಳೆಲ್ಲಾ ನಗರೀಕರಣಗೊಳ್ಳುತ್ತಿವೆ. ಇಂದಿನ ಪೀಳಿಗೆಯವರು ತೋರುವ ತಾತ್ಸಾರ ಕೂಡ ಇದಕ್ಕೆ ಕಾರಣವಾಗಿದೆ. ಹಳ್ಳಿಗಳಲ್ಲಿ ಈಗ ಇಂತಹ ಸಂಸ್ಕೃತಿಯನ್ನು ಉಳಿಸಬೇಕು ಎನ್ನುವ ಕಾಳಜಿ ಕಡಿಮೆಯಾಗಿದೆ. ಇನ್ನು ವಿಶೇಷ ದಿನಗಳಂದು ಇಂತಹ ಕಾರ್ಯಕ್ರಮ ಏರ್ಪಡಿಸಿದರೂ ಪ್ರೇಕ್ಷಕರು ಕಡಿಮೆ ಎನ್ನುವುದು ಒಂದು ಕಾರಣವಾದರೆ, ಕಾರ್ಯಕ್ರಮಗಳ ವೆಚ್ಚ ಏರಿಕೆಯಾಗಿದ್ದು ಕೂಡ ಕಾರಣವಿರಬಹುದು. ಅಲ್ಲದೆ ಹಿಂದಿನ ಸುಪ್ರಸಿದ್ಧ ಹರಿಕಥಾ ವಿದ್ವಾನ್‌ಗಳಾದ ಗುರುರಾಜುಲು ನಾಯ್ಡು, ಭದ್ರಗಿರಿ ಅಚ್ಯುತದಾಸ್, ಕೇಶವದಾಸ್‌ರಂತೆ ಕಂಚಿನ ಕಂಠದ ಮೂಲಕ ಕಥೆಗಳನ್ನು ತಮ್ಮ ವಿಶಿಷ್ಟ ಶೈಲಿಯಲ್ಲಿ ಹೇಳುವ ಕಲೆ ಎಲ್ಲರಲ್ಲೂ ಕಾಣಲು ಸಾಧ್ಯವಿಲ್ಲ. ಅವರು ಜನರನ್ನು ಇಂತಹ ಮಾತಿನ ಚಾಕಚಕ್ಯತೆಯಿಂದ ಹಿಡಿದಿಡುತ್ತಿದ್ದರು. ಹರಿಕಥೆ; ನಡುವೆ ಉಪಕಥೆಗೆ ಪ್ರಸಿದ್ಧರಾಗಿದ್ದರು.

ಕನ್ನಡ ಮತ್ತು ಸಂಸ್ಕೃತಿ ಇಲಾಖೆ, ಕರ್ನಾಟಕ ಜಾನಪದ ಪರಿಷತ್ತು ಮುಂತಾದ ಸಂಬಂಧಪಟ್ಟವರು ಈ ಕಲೆಯ ಬಗ್ಗೆ ಗಮನಹರಿಸಿ ಹಬ್ಬ ಹರಿದಿನ, ಧಾರ್ಮಿಕ ಸಮಾರಂಭಗಳ ಸಂದರ್ಭದಲ್ಲಿ ಹರಿಕಥೆ ವಾಚನ ಏರ್ಪಡಿಸಿ ಜನಪ್ರಿಯಗೊಳಿಸಬೇಕು. ಹಿಂದಿನ ಹರಿಕಥೆ ವಿದ್ವಾನ್‌ರಿಗೆ ರಾಜ್ಯ ಸರ್ಕಾರ ಕೊಡಮಾಡುವ ಯಾವುದೇ ಪ್ರಶಸ್ತಿಗಳನ್ನು ನೀಡಿರುವುದು ಬಹುಶಃ ಇಲ್ಲವೆಂದು ಕಾಣುತ್ತದೆ. ಈ ಪ್ರಸಿದ್ಧ ಸಾಹಿತ್ಯ ಕಲೆಯನ್ನು ಕಡೆಗಣಿಸಿರುವುದು ವಿಷಾದನೀಯ.

ಈಗಲೂ ತಮ್ಮ ಕುಟುಂಬದವರು ನಿಧನರಾದಾಗ ಶ್ರದ್ಧಾ ಕಾರ್ಯಕ್ರಮದ ದಿನ ಅನೇಕರು ರಾತ್ರಿ ಹರಿಕಥೆ ಕಾರ್ಯಕ್ರಮ ಏರ್ಪಡಿಸುವುದನ್ನು ಪತ್ರಿಕೆಗಳ ಜಾಹೀರಾತುಗಳಲ್ಲಿ ಆಗೊಮ್ಮೆ ಈಗೊಮ್ಮೆ ನೋಡಬಹುದು. ಮೈಸೂರು ಆಕಾಶವಾಣಿ ಕೇಂದ್ರದವರು ಪ್ರತಿ ಮಂಗಳವಾರದಂದು ಸಂಜೆ 4 ಗಂಟೆಗೆ ಈ ಖ್ಯಾತನಾಮರ ಹರಿಕಥೆಯನ್ನು ಪ್ರಸಾರ ಮಾಡುತ್ತಿದ್ದಾರೆ ಎನ್ನುವುದು ಸಮಾಧಾನದ ಸಂಗತಿ.

–ಮುಳ್ಳೂರು ಪ್ರಕಾಶ್, ಕನಕದಾಸ ನಗರ, ಮೈಸೂರು.

ಬೆಲೆ ಏರಿಕೆಗಿಂತ ವೇಗವಾಗಿದೆ ಕಮಿಷನ್ ದರ ಏರಿಕೆ ಗತಿ!?

ಮಾನ್ಯರೆ,

ಕಳೆದ ಎರಡು ವರ್ಷಗಳ ಹಿಂದೆ, ರಾಜ್ಯದಲ್ಲಿ ಬಿಜೆಪಿ ಸರ್ಕಾರವಿದ್ದಾಗ, ರಾಜ್ಯ ಗುತ್ತಿಗೆದಾರರ ಸಂಘದ ಪದಾಧಿಕಾರಿಗಳು ಸರ್ಕಾರದ ಬಿಲ್ ಪಾವತಿಗೆ ಶೇ.40 ಪರ್ಸೆಂಟ್ ಕಮಿಷನ್ ಕೊಡಬೇಕು ಎಂದು ಆರೋಪಿಸಿ ರಾಜ್ಯಪಾಲರಿಗೆ ದೂರು ನೀಡಿದ್ದರು. ಈಗ ಅದೇ ಗುತ್ತಿಗೆದಾರರ ಸಂಘವು ಸರ್ಕಾರದ ಬಿಲ್ ಪಾವತಿಗೆ ದುಪ್ಪಟ್ಟು ಕಮಿಷನ್ ನೀಡಬೇಕು ಎಂದು, ಅಂದರೆ ಶೇ.80 ರಷ್ಟು ಕಮಿಷನ್ ನೀಡಬೇಕಿದೆ ಎಂದು ಆರೋಪಿಸಿ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರಿಗೆ ಪತ್ರ ಬರೆದಿದೆ.

ಶೇ.80 ರಷ್ಟು ಹಣ, ಮಧ್ಯವರ್ತಿಗಳ ಪಾಲಾದರೆ, ಯಾವುದೇ ಕಾಮಗಾರಿಗಳಲ್ಲಿ ಗುಣಮಟ್ಟವನ್ನು ನಿರೀಕ್ಷಿಸುವುದಾದರೂ ಹೇಗೆ? ಡಾಂಬರ್ ರಸ್ತೆಗಳು ಕಾಮಗಾರಿ ನಡೆದ ತಿಂಗಳಲ್ಲೇ ಕಿತ್ತುಹೋಗದೇ ಉಳಿಯುತ್ತವೆಯಾ? ಕಳಪೆ ಗುಣಮಟ್ಟದ ಕಾಮಗಾರಿಗಳು ಏಕೆ ನಡೆಯುತ್ತವೆ ಎಂಬ ವಿಚಾರ ಸಾರ್ವಜನಿಕರಿಗೆ ಈಗ ತಿಳಿಯುತ್ತಿದೆ. ಯಾವ ಸರ್ಕಾರ ಅಧಿಕಾರಕ್ಕೆ ಬಂದರೂ ಲಂಚದ ಹಾವಳಿ ತಪ್ಪದು. ಇದನ್ನು ತಪ್ಪಿಸಲು ಲೋಕಾಯುಕ್ತ ಅಲ್ಲ ಬೇರೆ ಯಾವುದೇ ಕಣ್ಗಾವಲು ಹಾಕಿದರೂ ತಪ್ಪದು. ಜನ ಎಚ್ಚೆತ್ತು, ಅರಿತು ಮತದಾನ ಮಾಡಿದರೆ ನಿಯಂತ್ರಣಕ್ಕೆ ತರಬಹುದೇನೋ?

–ಬೂಕನಕೆರೆ ವಿಜೇಂದ್ರ, ಕುವೆಂಪುನಗರ, ಮೈಸೂರು

ಕಾಲ್ತುಳಿತ; ಸಾಂಕ್ರಾಮಿಕ ಸೋಂಕಾಗುತ್ತಿದೆಯಾ...!







–ವಿವೇಕಾನಂದ
ಬೆಂಗಳೂರು,
ಮೊ.9663750451

ಕಾಲ್ತುಳಿತ ಎಂಬ ಸಾಮಾಜಿಕ–ಸಾಂಕ್ರಾಮಿಕ ರೋಗ ಮತ್ತು ಈ ವರ್ಷದ ದಸರಾ ಸಂದರ್ಭದಲ್ಲಿ ತೆಗೆದುಕೊಳ್ಳಬೇಕಾದ ಎಚ್ಚರಿಕೆ........

ಇತ್ತೀಚಿನ ವರ್ಷಗಳಲ್ಲಿ ಮತ್ತೊಂದು ಸಾಮಾಜಿಕ ಸಾಂಕ್ರಾಮಿಕ ರೋಗ ಪ್ರಾಕೃತಿಕ ವಿಕೋಪದಂತೆ ದಿಢೀರನೆ ತೊಂದರೆ ಕೊಡುತ್ತಿದೆ. ಅದುವೇ ಕಾಲ್ತುಳಿತಗಳು ಎಂಬ ಭಯಂಕರ ದುರ್ಘಟನೆಗಳು.....

ಈ ಕಾಲ್ತುಳಿತ ಪ್ರಕರಣಗಳು ಭಾರತಕ್ಕೆ ಹೊಸದೇನು ಅಲ್ಲ. ಆಗಾಗ ನಡೆಯುತ್ತಲೇ ಇರುತ್ತವೆ. ಆದರೆ ಇತ್ತೀಚಿನ ಕೆಲವು ವರ್ಷಗಳಲ್ಲಿ ತುಂಬಾ ಹೆಚ್ಚು ಹೆಚ್ಚು ಈ ರೀತಿಯ ಘಟನೆಗಳು ನಡೆಯುತ್ತಿವೆ. ಆಗೆಲ್ಲಾ ಸಿನಿಮಾ ಮಂದಿರಗಳಲ್ಲಿ ಸಿನಿಮಾ ಟಿಕೆಟ್ ಪಡೆಯುವ ಕ್ಯೂನಲ್ಲಿ ಕಾಲ್ತುಳಿತಗಳಾಗುತ್ತಿದ್ದವು. ಚುನಾವಣಾ ಸಂದರ್ಭದಲ್ಲಿ ರಾಜಕಾರಣಿಗಳು ಹಂಚುವ ಸೀರೆ, ಪಂಚೆ, ಹಣ ಮುಂತಾದ ಸಮಯದಲ್ಲಿ, ಇನ್ನು ಕೆಲವು ಸಲ ಆಹಾರ ಪದಾರ್ಥಗಳ ಹಂಚಿಕೆಯ ಸಂದರ್ಭದಲ್ಲಿ ಅದನ್ನು ಪಡೆಯಲು ಕಾಲ್ತುಳಿತ ಉಂಟಾಗುತ್ತಿತ್ತು. ಪ್ರಖ್ಯಾತ ದೇವಸ್ಥಾನದ ಪ್ರವೇಶಕ್ಕಾಗಿ ಅಥವಾ ವಿಶೇಷ ಸಂದರ್ಭದಲ್ಲಿಯೂ ಕಾಲ್ತುಳಿತಗಳು ಉಂಟಾಗುತ್ತಿದೆ. ತಿರುಪತಿ, ಶಬರಿಮಲೆ, ವೈಷ್ಣೋದೇವಿ ಮುಂತಾದ ಕಡೆ ಆಗಾಗ ಕಾಲ್ತುಳಿತಗಳು ಸಂಭವಿಸುತ್ತಿರುತ್ತವೆ.

ಇತ್ತೀಚಿನ ವರ್ಷಗಳಲ್ಲಿ ಕುಂಭಮೇಳ ಸಂದರ್ಭದಲ್ಲಿ, ಒರಿಸ್ಸಾದ ಜಗನ್ನಾಥ ರಥೋತ್ಸವದಲ್ಲಿ, ತೀರಾ ಇತ್ತೀಚೆಗೆ ಬೆಂಗಳೂರಿನ ಚಿನ್ನಸ್ವಾಮಿ ಕ್ರೀಡಾಂಗಣದ ಬಳಿ ಐಪಿಎಲ್ ಕ್ರಿಕೆಟ್‌ನ ಆರ್‌ಸಿಬಿ ವಿಜಯೋತ್ಸವದ ಸಂದರ್ಭದಲ್ಲಿ, ಇದೀಗ ತೀರ ಭೀಕರವಾಗಿ ತಮಿಳು ನಟ ವಿಜಯ್ ಅವರ ರಾಜಕೀಯ ಪ್ರಚಾರ ಸಭೆಯಲ್ಲಿ ಕಾಲ್ತುಳಿತ ಉಂಟಾಗಿ ಸರಿಸುಮಾರು 41 ಮಂದಿ ಬಲಿಯಾಗಿ ಸಾಕಷ್ಟು ಜನ ಗಾಯಗೊಂಡಿದ್ದಾರೆ.

ಮೊದಲನೆಯದಾಗಿ ಕಾಲ್ತುಳಿತ ಎಂಬುದು ಒಂದು ಸ್ವಯಂಕೃತಾಪರಾಧ, ಭಾವಾವೇಶದ ಮೂರ್ಖತನ, ಭದ್ರತಾ ವ್ಯವಸ್ಥೆಯ ವೈಫಲ್ಯ, ದಡ್ಡತನದ ಅನಾಗರಿಕ ವರ್ತನೆ ಎಂಬುದು ವಾಸ್ತವ. ಏಕೆಂದರೆ ಎಷ್ಟೋ ಬಾರಿ ಯಾವುದೇ ಪ್ರಚೋದನೆ ಇಲ್ಲದೇ ಅಥವಾ ಕೆಲವು ಕಿಡಿಗೇಡಿಗಳ ತುಂಟಾಟದಿಂದ ಅಥವಾ ಗುಂಪಿನ ಗಾಳಿ ಮಾತುಗಳಿಂದ ಅಥವಾ ಯಾವುದಾದರೂ ಪ್ರಚೋದನೆಯಿಂದ ಅಥವಾ ವಿಧ್ವಂಸಕ ಕೃತ್ಯದ ಭಾಗವಾಗಿ ಜನರಲ್ಲಿ ಗಾಬರಿ ಉಂಟಾದಾಗ ಅನವಶ್ಯಕವಾಗಿ ಓಡಿ ಹೋಗುವ ಸಂದರ್ಭದಲ್ಲಿ ಈ ದುರ್ಘಟನೆಗಳು ನಡೆಯುತ್ತವೆ.

ಈ ರೀತಿಯ ದುರ್ಘಟನೆಗಳು ನಡೆಯುವ ಸಂದರ್ಭದಲ್ಲಿ ಸರ್ಕಾರಗಳು ಪರಿಹಾರ ಘೋಷಿಸಿ, ತನಿಖೆಗೆ ಆದೇಶಿಸಿ ಕೈ ತೊಳೆದುಕೊಳ್ಳುತ್ತದೆ. ಅಲ್ಲಿಗೆ ವಿಷಯ ಮುಕ್ತಾಯವಾಗಿ ಮತ್ತೊಂದು ದುರ್ಘಟನೆಯವರೆಗೂ ಸುದ್ದಿಯೇ ಇರುವುದಿಲ್ಲ.

ವಾಸ್ತವವಾಗಿ ಇಂದಿನ ಆಧುನಿಕ ಕಾಲದಲ್ಲಿ ಕಾಲ್ತುಳಿತ ತಡೆಯಲು ಸಾಕಷ್ಟು ಮಾರ್ಗಗಳಿವೆ. ಸಂಪೂರ್ಣ ಅಲ್ಲದಿದ್ದರೂ ಕಾಲ್ತುಳಿತದ ತೀವ್ರತೆಯನ್ನು ಖಂಡಿತ ಕಡಿಮೆ ಮಾಡಬಹುದು. ಆದರೆ ರಾಜಕೀಯ ಮತ್ತು ಆಡಳಿತಗಾರರ ಇಚ್ಛಾಶಕ್ತಿ ಇಲ್ಲದೇ ಇರುವುದರಿಂದ ಈ ದುರಂತಗಳು ಮತ್ತೆ ಮತ್ತೆ ಸಂಭವಿಸುತ್ತದೆ.

ಕಾರ್ಯಕ್ರಮಗಳನ್ನು ಆಯೋಜಿಸುವ ಸಂದರ್ಭ, ಸಮಯ, ಅದಕ್ಕಾಗಿ ಸಿದ್ಧವಾಗಿರುವ ವೇದಿಕೆ ಮತ್ತು ಪ್ರದೇಶ, ಅದರಲ್ಲಿ ಭಾಗವಹಿಸುವವರ ಸಂಖ್ಯೆ, ಅತಿಥಿ ಯಾರು, ಸಮಯಕ್ಕೆ ಸರಿಯಾಗಿ ಆ ಕಾರ್ಯಕ್ರಮ ನಡೆಯುತ್ತದೆಯೇ, ನಿರೀಕ್ಷೆಗಿಂತ ಹಲವು ಪಟ್ಟು ಹೆಚ್ಚು ಜನರು ಬರಲು ಪ್ರಾರಂಭವಾದಾಗ ಪೊಲೀಸ್ ಗುಪ್ತಚರ ಇಲಾಖೆ ಅದನ್ನು ಗುರುತಿಸಿ ಮಾಹಿತಿ ನೀಡುವುದು ಮುಂತಾದ ಅನೇಕ ವಿಷಯಗಳು ಇಲ್ಲಿ ಅಡಕವಾಗಿರುತ್ತದೆ.

ಜನರು ಎಚ್ಚರದಿಂದಿರಬೇಕು: ಇದೆಲ್ಲವನ್ನು ಮೀರಿ ಜನರ ವಿವೇಚನೆಯೂ ಬಹಳ ಮುಖ್ಯವಾಗುತ್ತದೆ. ಟಿವಿ ಮಾಧ್ಯಮಗಳು, ಮೊಬೈಲ್ ಲೈವ್‌ಗಳು ಇರುವಾಗ ಅನವಶ್ಯಕವಾಗಿ ಕೆಲವು ಕಾರ್ಯಕ್ರಮಗಳಿಗೆ ಹೋಗದೇ ಇರುವುದು, ಮಕ್ಕಳನ್ನು ಮತ್ತು ದೈಹಿಕ ದುರ್ಬಲರನ್ನು ಅಂತಹ ಕಾರ್ಯಕ್ರಮಗಳಿಂದ ದೂರ ಇಡುವುದು ಮುಂತಾದ ಮುಂಜಾಗ್ರತಾ ಕ್ರಮಗಳನ್ನು ಕೈಗೊಳ್ಳಬೇಕು.

> ಅನವಶ್ಯಕವಾಗಿ ಒಂದೇ ಜಾಗದಲ್ಲಿ ಲಕ್ಷಾಂತರ ಜನ ಸೇರುವುದು, ಸೇರಿದ ಮೇಲೆ ಹುಚ್ಚುಚ್ಚಾಗಿ ವರ್ತಿಸುವುದು, ದಿಢೀರನೆ ಭಯಗೊಳ್ಳುವುದು, ದಿಗ್ಭ್ರಮೆಯಾಗುವುದು, ತಾನು, ತನ್ನ ಕುಟುಂಬ ಮಾತ್ರ ಸುರಕ್ಷಿತವಾಗಿರಬೇಕು ಎಂದು ಒಟ್ಟು ಪರಿಸ್ಥಿತಿಯನ್ನು ಅವಲೋಕಿಸದೆ ಓಡುವುದು, ಸಿಕ್ಕಸಿಕ್ಕವರನ್ನು, ಕೆಳಗೆ ಬಿದ್ದವರನ್ನು ತುಳಿಯುವುದು, ಅಂತಹ ಸಂದರ್ಭದಲ್ಲಿ ವೈದ್ಯಕೀಯ ಸೌಕರ್ಯಗಳನ್ನು ಒದಗಿಸದೆ ಇರುವುದು, ಪೊಲೀಸರ ನಿರ್ಲಕ್ಷ್ಯ, ಸೂಕ್ಷ್ಮ ಗ್ರಹಿಕೆಯ ವೈಫಲ್ಯ ಎಲ್ಲವೂ ಸೇರಿ ಕಾಲ್ತುಳಿತಗಳು ನಿರಂತರವಾಗಿ ಸಂಭವಿಸುತ್ತಿರುತ್ತದೆ.

ಅನವಶ್ಯಕವಾಗಿ ಒಂದೇ ಜಾಗದಲ್ಲಿ ಲಕ್ಷಾಂತರ ಜನ ಸೇರುವುದು, ಸೇರಿದ ಮೇಲೆ ಹುಚ್ಚುಚ್ಚಾಗಿ ವರ್ತಿಸುವುದು, ದಿಢೀರನೆ ಭಯಗೊಳ್ಳುವುದು, ದಿಗ್ಭ್ರಮೆಯಾಗುವುದು, ತಾನು, ತನ್ನ ಕುಟುಂಬ ಮಾತ್ರ ಸುರಕ್ಷಿತವಾಗಿರಬೇಕು ಎಂದು ಒಟ್ಟು ಪರಿಸ್ಥಿತಿಯನ್ನು ಅವಲೋಕಿಸದೆ ಓಡುವುದು, ಸಿಕ್ಕಸಿಕ್ಕವರನ್ನು, ಕೆಳಗೆ ಬಿದ್ದವರನ್ನು ತುಳಿಯುವುದು, ಅಂತಹ ಸಂದರ್ಭದಲ್ಲಿ ವೈದ್ಯಕೀಯ ಸೌಕರ್ಯಗಳನ್ನು ಒದಗಿಸದೆ ಇರುವುದು, ಪೊಲೀಸರ ನಿರ್ಲಕ್ಷ್ಯ, ಸೂಕ್ಷ್ಮ ಗ್ರಹಿಕೆಯ ವೈಫಲ್ಯ ಎಲ್ಲವೂ ಸೇರಿ ಕಾಲ್ತುಳಿತಗಳು ನಿರಂತರವಾಗಿ ಸಂಭವಿಸುತ್ತಿರುತ್ತದೆ.

ಅಲ್ಲದೆ ಇತ್ತೀಚೆಗೆ ಇದೊಂದು ಸಾಂಕ್ರಾಮಿಕ, ಸಾಮಾಜಿಕ ರೋಗವಾಗಿ ಪರಿವರ್ತನೆ ಆಗಿರುವುದರಿಂದ ಈ ಕ್ಷಣದಲ್ಲಿ ನನ್ನ ಮನಸ್ಸಿನಲ್ಲಿ ಆತಂಕ ಸೃಷ್ಟಿ ಮಾಡುತ್ತಿರುವುದು ಇನ್ನೇನು ಕೆಲವೇ ದಿನಗಳಲ್ಲಿ ನಡೆಯುವ ಮೈಸೂರು ದಸರಾ ಉತ್ಸವದ ಸಂದರ್ಭದ ಬಹುದೊಡ್ಡ ಗುಂಪನ್ನು ನಿಯಂತ್ರಿಸುವ ಸವಾಲು. ಬಹುಶಃ ನನಗಿರುವ ಮಾಹಿತಿಯಂತೆ ಮೈಸೂರು ದಸರಾ ಸಂದರ್ಭದಲ್ಲಿ ಅತ್ಯಂತ ಭೀಕರ ಎನ್ನುವ ಯಾವುದೇ ಕಾಲ್ತುಳಿತ ಇಲ್ಲಿಯವರೆಗೂ ಸಂಭವಿಸಿಲ್ಲ ಎನಿಸುತ್ತದೆ. ಅಲ್ಲಿ ಸಾಕಷ್ಟು ಮುಂಜಾಗ್ರತೆ ವಹಿಸಲಾಗುವುದು. ಸಣ್ಣಪುಟ್ಟ ಘಟನೆಗಳು ಆನೆ ರೊಚ್ಚಿಗೆದ್ದಾಗ ಆಗಿರುವ ಕೆಲವು ಘಟನೆಗಳನ್ನು ಹೊರತುಪಡಿಸಿದರೆ ಅಂತಹ ಗಂಭೀರ ಪರಿಸ್ಥಿತಿ ಸಂಭವಿಸಿಲ್ಲ.

ಆದರೆ ಹಾಗೆಂದು ನಿರ್ಲಕ್ಷಿಸುವಂತಿಲ್ಲ. ಆಕಸ್ಮಿಕಗಳು ಯಾವ ಕ್ಷಣದಲ್ಲಿ ಏನು ಬೇಕಾದರೂ ಆಗಬಹುದು. ಸರಿಸುಮಾರು ಹತ್ತು ಲಕ್ಷಕ್ಕೂ ಹೆಚ್ಚು ಜನ ಭಾಗವಹಿಸುವ ನಿರೀಕ್ಷೆಯಲ್ಲಿರುವ ದಸರಾ ಸಂದರ್ಭದಲ್ಲಿ ಮುಖ್ಯ ದಿನದಂದು ಈ ಪ್ರಮಾಣದ ಜನಸಂಖ್ಯೆಯನ್ನು ನಿಯಂತ್ರಿಸುವುದು ತುಂಬಾ ಕಷ್ಟವಿದೆ. ಎಷ್ಟು ಸಾಧ್ಯವೋ ಅಷ್ಟು ಎಚ್ಚರಿಕೆಯ ಕ್ರಮಗಳನ್ನು ಕೈಗೊಳ್ಳಬೇಕು. ನಾಗರಿಕರು ಸಹ ತುಂಬಾ ಜವಾಬ್ದಾರಿಯಿಂದ ವರ್ತಿಸಬೇಕು. ಇಲ್ಲದಿದ್ದರೆ ಹೇಗೆ ಚಿನ್ನಸ್ವಾಮಿ ಸ್ಟೇಡಿಯಂ ಕಾಲ್ತುಳಿತದ ನಂತರ ಆ ಕ್ರೀಡಾಂಗಣದಲ್ಲಿ ಸದ್ಯಕ್ಕೆ ಕ್ರಿಕೆಟ್ ನಡೆಯಲು ನಿಷೇಧವಿದೆಯೋ ಹಾಗೆ ದಸರಾ ಸಂದರ್ಭದಲ್ಲಿ ಹೆಚ್ಚು ಕಡಿಮೆಯಾದರೆ ದಸರಾ ಉತ್ಸವದಲ್ಲಿ ಜನರ ಪಾಲ್ಗೊಳ್ಳುವಿಕೆಯ ಮೇಲೆ ನಿಯಂತ್ರಣ ಹೇರಬಹುದು. ಆದ್ದರಿಂದ ಸಾಮಾನ್ಯ ಜನ ಹೆಚ್ಚು ಜವಾಬ್ದಾರಿಯಿಂದ, ಎಚ್ಚರಿಕೆಯಿಂದ ನಡೆದುಕೊಳ್ಳಬೇಕಾಗುತ್ತದೆ.

ಹಾಗೆಯೇ ಹೆಚ್ಚು ಜನರು ಭಾಗವಹಿಸುವ ಎಲ್ಲಾ ಮೆರವಣಿಗೆ, ಕಾರ್ಯಕ್ರಮ, ಉತ್ಸವ, ಜಾತ್ರೆಗಳ ಸಂದರ್ಭದಲ್ಲಿ ವಹಿಸುವ ಎಚ್ಚರಿಕೆಯ ಕ್ರಮಗಳ ಬಗ್ಗೆ ಪುನರ್ ವಿಮರ್ಶೆ ಮಾಡಿ ಹೊಸ ಪರ್ಯಾಯ ಮಾರ್ಗಗಳ ಅನುಸರಣೆ ಆಗಬೇಕಾಗಿದೆ....

ಟೀಕಾಕಾರರಿಗೆ ಸಾಮಾಜಿಕ ಜಾಲತಾಣದ ಮೂಲಕವೇ ಬಾನು ಮುಷ್ತಾಕ್ ತಿರುಗೇಟು

ನಿಮ್ಮ ಪದಗಳ ಬಾಣಗಳಿಗೆ ನಾನು ಹೆದರಲ್ಲ... ಕುಗ್ಗಲ್ಲ...!

ಹಾಸನ: ನಿಮ್ಮ ಕೋಪದ ಹಿಂದೆ ಸಹ ಒಂದು ಪ್ರಶ್ನೆ ಇದೆ ಎಂಬುದನ್ನು ನಾನು ನೋಡುತ್ತೇನೆ. ಆ ಪ್ರಶ್ನೆಗೆ ನನ್ನ ಉತ್ತರ ಪ್ರೀತಿ. ನನ್ನ ಉತ್ತರ ಸಂವಾದ. ನನ್ನ ಉತ್ತರ ಸತ್ಯ. ನಿಮ್ಮ ಪ್ರತಿಯೊಂದು ವಾಕ್ಯವು ನನ್ನ ನಿರ್ಧಾರ ಮತ್ತು ಶ್ರಮವನ್ನು ಇನ್ನಷ್ಟು ಗಟ್ಟಿಗೊಳಿಸುತ್ತದೆ. ನಾನು ಕೃತಜ್ಞಳಾಗಿದ್ದೇನೆ. ಎಲ್ಲವೂ ನನ್ನ ಪಯಣದ ಭಾಗ... ಇಂತಹ ಭಾವನಾತ್ಮಕ ನುಡಿಗಳ ಮೂಲಕ ಬೂಕರ್ ಪ್ರಶಸ್ತಿ ವಿಜೇತೆ ಬಾನು ಮುಷ್ತಾಕ್ ಅವರು ಟೀಕಾಕಾರರಿಗೆ ಸೌಮ್ಯವಾಗಿಯೇ ಚಾಟಿ ಬೀಸಿದ್ದಾರೆ.

ಇತ್ತೀಚಿನ ಬೆಳವಣಿಗೆ ಬಗ್ಗೆ ಸಾಮಾಜಿಕ ಜಾಲತಾಣದಲ್ಲಿ ಪ್ರತಿಕ್ರಿಯಿಸಿರುವ ಅವರು, ಧನ್ಯವಾದದೊಂದಿಗೆ ಹೀಗೊಂದು ಲಹರಿ ಎಂದು ಆರಂಭಿಸಿ, ಸುದೀರ್ಘವಾಗಿ ಬರೆದುಕೊಂಡಿದ್ದಾರೆ.

Dear ಉರಿಯಮ್ಮ/ಉರಿಯಪ್ಪನವರೇ, ನಿಮ್ಮ ಮಾತುಗಳ ಬಿರುಗಾಳಿಯನ್ನು ನಾನು ಓದುತ್ತಿದ್ದೇನೆ. ನೀವು ಬರೆದ ಪದಗಳಲ್ಲಿ ನೋವು ಇದೆ, ಅಸಹನೆ ಇದೆ, ಕೆಲವೊಮ್ಮೆ ಕೋಪವೂ ಇದೆ. ಆದರೆ ನನಗೆ ಅವುಗಳನ್ನು ಎದುರಿಸಲು ಯಾವುದೇ ರಕ್ಷಣೆಯ ಅವಶ್ಯಕತೆಯಿಲ್ಲ. ಏಕೆಂದರೆ ನಾನು ಬರವಣಿಗೆಗೆ ಕೈ ಹಾಕಿದ ದಿನದಿಂದಲೂ ತಿಳಿದಿದ್ದೇನೆ. ಪದಗಳು ಪ್ರೀತಿಯನ್ನು ಕೂಡ ಹುಟ್ಟಿಸುತ್ತವೆ, ದ್ವೇಷವನ್ನೂ ಹುಟ್ಟಿಸುತ್ತವೆ. ಎರಡೂ ಸಹ ನನಗೆ ಬರಹಗಾರ್ತಿಯಾಗಿ ಒದಗಿ ಬಂದಿರುವ ಬದುಕಿನ ಭಾಗವೇ ಎಂದಿದ್ದಾರೆ.

ಬೂಕರ್ ಪ್ರಶಸ್ತಿ ನನಗೆ ವ್ಯಕ್ತಿಗತ ಜಯವಲ್ಲ, ಅದು ಕನ್ನಡ ಭಾಷೆಯ ಮಣ್ಣಿನ ಧ್ವನಿಗೆ ಬಂದ ಗೌರವ. ನನ್ನ ಜೀವನದ ಅನುಭವಗಳ ಸಾರ. ನಿಮ್ಮ ಅಸಹನೆ ನನಗೆ ಅಸಹ್ಯವಲ್ಲ. ಅದನ್ನು ನಾನು ಮತ್ತೊಂದು ಧ್ವನಿಯಾಗಿ, ಮತ್ತೊಂದು ಪ್ರಶ್ನೆಯಾಗಿ ಸ್ವೀಕರಿಸುತ್ತೇನೆ. ಏಕೆಂದರೆ ಸಾಹಿತ್ಯದ ನಿಜವಾದ ಶಕ್ತಿ



ಬಾನು ಮುಷ್ತಾಕ್

ಏನೆಂದರೆ, ಅದು ಒಪ್ಪಿಗೆಯನ್ನೂ ಹುಟ್ಟಿಸುತ್ತದೆ, ವಿರೋಧವನ್ನೂ ಹುಟ್ಟಿಸುತ್ತದೆ. ಆದರೆ ಕೊನೆಯಲ್ಲಿ ಅದು ಚಿಂತನೆಗೆ ದಾರಿ ತೆರೆದೀತು. ನೀವು ನನ್ನನ್ನು ಕುರಿತು ಕಟುವಾಗಿ ಬರೆದಾಗ, ನಾನು ಕೇವಲ ಹೀಗೆ ಯೋಚಿಸುತ್ತೇನೆ: 'ನನ್ನ ಪದಗಳು ನಿಮಗೆ ತಲುಪಿವೆ. ನೀವು ಅವುಗಳನ್ನು ನಿರ್ಲಕ್ಷಿಸಿಲ್ಲ. ನಿಮಗೆ ಏನೋ ತಟ್ಟಿದೆ. ಇದು ನನಗೆ ಸಾಕು'. ದ್ವೇಷಕ್ಕೆ ಪ್ರೀತಿಯೇ ಉತ್ತರ. ಅಸಹನೆಗೆ ಸಂವಾದವೇ ಉತ್ತರ. ನಿಂದನೆಗೆ ಮೌನದಲ್ಲಿ ಹೊಳೆಯುವ ಸತ್ಯವೇ ಉತ್ತರ ಎಂದು ನಯವಾಗಿಯೇ ಕುಟುಕಿದ್ದಾರೆ.

ಬೂಕರ್ ಪ್ರಶಸ್ತಿ ನನಗೆ ಬಂದದ್ದು, ನನ್ನ ವೈಯಕ್ತಿಕ ಸ್ವಾರ್ಥವಲ್ಲ, ಅದು ಕನ್ನಡದ ಮಣ್ಣಿನ ಮೆಲುಕು, ನನ್ನ ಜನರ ನೋವು, ಕನಸು, ಹೋರಾಟ, ಈ ಎಲ್ಲವೂ ಒಟ್ಟಾಗಿ ಹೊತ್ತಿರುವ ದೀಪ. ನೀವು ನನ್ನ ವಿರುದ್ಧ ಕೋಪದಿಂದ ಬರೆದಾಗ, ನಾನು ಅದನ್ನು ಅಪಮಾನವೆಂದು ತೆಗೆದುಕೊಳ್ಳುವುದಿಲ್ಲ. ಅದರೊಳಗೆ ಒಂಥರದ ತವಕವಿದೆ, ಒಂಥರದ ಪ್ರಶ್ನೆಯಿದೆ, ಅದು ಸಹ ಸಾಹಿತ್ಯದ ಅಂಗವೇ ಸರಿ. ನಿಮ್ಮ ಪ್ರತಿಯೊಂದು ಕಟುವಾದ ಪದಕ್ಕೂ ನಾನು ಕೃತಜ್ಞಳಾಗಿದ್ದೇನೆ. ಏಕೆಂದರೆ ಅವು ನನ್ನ ಹೆಜ್ಜೆಗಳನ್ನು ಬಲಪಡಿಸುತ್ತವೆ, ನನ್ನ ಹಾದಿಯನ್ನು ಇನ್ನಷ್ಟು ತೆರೆಯುತ್ತವೆ. ನಾನು ಬಾನು ಮಾತ್ರವಲ್ಲ, ನಾನು ಅನೇಕ ಕನ್ನಡಿಗರ ಕನಸು, ಅವರ ಶಬ್ದದ ಪ್ರತಿಧ್ವನಿ, ಅವರ ಬದುಕಿನ ಬಿಂಬ. ಆದ್ದರಿಂದ, ನಿಮ್ಮ ಹೃದಯದ ಅಸಹನೆಯ ಬೆಂಕಿ ನನ್ನ ಹೃದಯದಲ್ಲಿ ಬೆಳಕಾಗಲಿ. ಅದೇ ನಮ್ಮಿಬ್ಬರ ನಡುವಿನ ನಂಟು.

ನಿಮ್ಮ ದ್ವೇಷಕ್ಕೆ ನಾನು ತಲೆಬಾಗುವುದಿಲ್ಲ. ನಾನು ಪ್ರೀತಿಯನ್ನು ಹೊತ್ತ ದೀಪ ಹಿಡಿದು ಮುಂದೆ ಸಾಗುತ್ತೇನೆ. ದ್ವೇಷದ ದೈತ್ಯ ಬಿರುಗಾಳಿಯೂ ಈ ದೀಪವನ್ನು ನಂದಿಸಲು ಸಾಧ್ಯವಿಲ್ಲ. ಯಾರು ನನ್ನ ಬರವಣಿಗೆಯನ್ನು ಪ್ರೀತಿಯಿಂದ ಓದಿದ್ದಾರೆ, ಯಾರು ಅನುಭವಿಸಿದ್ದಾರೆ, ಮತ್ತು ಯಾರು ಈ ಸಾಧನೆಗಾಗಿ ಅಭಿನಂದನೆಗಳನ್ನು ತಿಳಿಸಿದ್ದಾರೆ. ನಿಮ್ಮ ಪ್ರೇಮ ಮತ್ತು ಬೆಂಬಲವೇ ನನಗೆ ಸ್ಫೂರ್ತಿ. ಒಬ್ಬ ಬರಹಗಾರನ ಯುದ್ಧ ಟೀಕೆಗಳೊಂದಿಗೆ ಅಲ್ಲ, ಬರಹದ ಮೂಲಕ ತಾನು ನಂಬಿದ ಸತ್ಯ ಮತ್ತು ಸೌಂದರ್ಯವನ್ನು ಹೇಗೆ ಚೆನ್ನಾಗಿ ವ್ಯಕ್ತಪಡಿಸಬಹುದು ಎಂಬುದರೊಂದಿಗೆ ನನ್ನ ಕನಸುಗಳು ಮುಂದೆ ಹೋಗುತ್ತವೆ. ಈ ಪ್ರಶಸ್ತಿ ಮತ್ತು ಅದರ ನಂತರದ ಎಲ್ಲ ಧ್ವನಿಗಳು, ಪ್ರಶಂಸೆಯಾಗಲಿ, ವಿರೋಧವಾಗಲಿ, ನನ್ನ ಈ ಮುಂದಿನ ಪಯಣದ ಒಂದು ಭಾಗವಾಗಿ ಮಾರ್ಪಡುತ್ತವೆ.

ಶಬ್ದಗಳಿಂದ ನನ್ನನ್ನು ಗುರಿ ಮಾಡುವವರಿಗೆ: ನಿಮ್ಮ ಶಬ್ದಗಳು ನನ್ನ ಪುಸ್ತಕದ ಪುಟಗಳನ್ನು ನಾಶ ಮಾಡಲಾರವು. ಅಭಿನಂದನೆಗಳಿಗೆ ಧನ್ಯವಾದ, ಟೀಕೆಗಳಿಗೆ ಧನ್ಯವಾದ. ಬೂಕರ್ ಪಡೆದ ಅಪರಾಧಕ್ಕಾಗಿ ಕನ್ನಡದೊಡನೆ ಪ್ರಪಂಚ ಪರ್ಯಟನೆ ಕೈಗೊಂಡು ಜೊತೆ ಜೊತೆಯಲ್ಲಿ ನಡೆಯುತ್ತಿರುವ ಅಪರಾಧಕ್ಕಾಗಿ ಧನ್ಯವಾದ. ಅಪ್ರಾಮಾಣಿಕ ಆರೋಪ ಪಟ್ಟಿಯನ್ನು ಹೊರಿಸುವ ವಿಫಲ ಪ್ರಯತ್ನದ ಮೂಲಕ ಇತಿಹಾಸದಲ್ಲಿ ದಾಖಲಾದ ಮತ್ತು ದಾಖಲಾಗುತ್ತಿರುವ ಎಲ್ಲರಿಗೂ ಧನ್ಯವಾದ. ಎಲ್ಲವೂ ನನ್ನ ಪಯಣದ ಭಾಗ ಎಂದು ಬರೆದುಕೊಂಡಿದ್ದಾರೆ.

ಮೈಸೂರು ಜಿಲ್ಲೆಯ ಸ್ಥಳೀಯ ಸಂಸ್ಥೆಗಳ ಚುನಾವಣೆ ಮೀಸಲಾತಿ ನಿಗದಿಗೆ ಸರ್ಕಾರಕ್ಕೆ ಮಾಹಿತಿ ನೀಡಿರುವುದನ್ನು ಖಚಿತಪಡಿಸಿ

ಮೈಸೂರು ಡಿಸಿಗೆ ಚುನಾವಣಾ ಆಯೋಗದ ಅಧೀನ ಕಾರ್ಯದರ್ಶಿ ಪತ್ರ

ಮೈಸೂರು,ಸೆ.29– ಜಿಲ್ಲೆಯ ವಿವಿಧ ಸ್ಥಳೀಯ ಸಂಸ್ಥೆಗಳ ಚುನಾವಣೆಗೆ ಮೀಸಲಾತಿ ನಿಗದಿಪಡಿಸಲು ಸರ್ಕಾರ ಕೋರಿದ್ದ ಮಾಹಿತಿಯನ್ನು ಒದಗಿಸಿರುವ ಬಗ್ಗೆ ಖಚಿತಪಡಿಸುವಂತೆ ಮೈಸೂರು ಜಿಲ್ಲಾಡಳಿತಕ್ಕೆ ರಾಜ್ಯ ಚುನಾವಣಾ ಆಯೋಗ ಚುರುಕು ಮುಟ್ಟಿಸಿದೆ.

ಜಿಲ್ಲೆಯ ಕೆಲ ನಗರಸಭೆ, ಪುರಸಭೆಗಳ ಸದಸ್ಯರ ಪದಾವಧಿ ಒಂದೆರಡು ತಿಂಗಳಲ್ಲಿ ಮುಕ್ತಾಯಗೊಳ್ಳಲಿದ್ದು, ಈ ಸಂಬಂಧ ಟ್ರಸ್ಟ್‌ವೊಂದರ ಪ್ರತಿನಿಧಿ ಜಿಲ್ಲಾಡಳಿತಕ್ಕೆ ಪತ್ರ ಬರೆದಿದ್ದರು. ಚುನಾವಣೆ ಪ್ರಕ್ರಿಯೆ ವಿಳಂಬಗೊಂಡಿರುವ ಬಗೆಗಿನ ಆ ಪತ್ರವನ್ನು ಉಲ್ಲೇಖಿಸಿ ಜಿಲ್ಲಾಧಿಕಾರಿಗಳು, ಚುನಾವಣಾ ಆಯೋಗಕ್ಕೆ ಪತ್ರ ಬರೆದಿದ್ದರು. ಸೆ.2ರಂದು ಪತ್ರ ಸ್ವೀಕರಿಸಿರುವ ಆಯೋಗವು, ವಾರ್ಡ್‌ವಾರು ಮೀಸಲಾತಿ ನಿಗದಿಗೆ ಸರ್ಕಾರ ಕೇಳಿದ್ದ ಮಾಹಿತಿ ಸಲ್ಲಿಸಿರುವ ಬಗ್ಗೆ ಸ್ಪಷ್ಟತೆ ಕೇಳಿದೆ.

ಪತ್ರದ ಸಾರಾಂಶ: ಮೈಸೂರು ಜಿಲ್ಲೆಯ ಹುಣಸೂರು ಮತ್ತು ನಂಜನಗೂಡು ನಗರಸಭೆ, ತಿ.ನರಸೀಪುರ, ಪಿರಿಯಾಪಟ್ಟಣ, ಹೆಚ್.ಡಿ.ಕೋಟೆ, ಕೆ.ಆರ್.ನಗರ ಹಾಗೂ ಬನ್ನೂರು ಪುರಸಭೆಗಳ ಸದಸ್ಯರ ಪದಾವಧಿಯು ಅಕ್ಟೋಬರ್ ಹಾಗೂ ನವೆಂಬರ್ 2025ಕ್ಕೆ ಮುಕ್ತಾಯಗೊಳ್ಳುತ್ತದೆ. ನಗರ ಸ್ಥಳೀಯ ಸಂಸ್ಥೆಗಳ ಅವಧಿ ಮುಕ್ತಾಯಗೊಳ್ಳುವ ಮುನ್ನ ಚುನಾವಣೆ ನಡೆಸುವುದು ರಾಜ್ಯ ಚುನಾವಣಾ ಆಯೋಗದ ಸಾಂವಿಧಾನಿಕ ಕರ್ತವ್ಯವಾಗಿರುತ್ತದೆ. ಈ ಹಿನ್ನೆಲೆಯಲ್ಲಿ ಸರ್ಕಾರದ ನಗರಾಭಿವೃದ್ಧಿ ಇಲಾಖೆಯವರು ತಮ್ಮ ಜಿಲ್ಲೆಯ ವ್ಯಾಪ್ತಿಯ ನಗರ ಸ್ಥಳೀಯ ಸಂಸ್ಥೆಗಳಿಗೆ ವಾರ್ಡ್‌ವಾರು ಮೀಸಲಾತಿಯನ್ನು ನಿಗದಿಪಡಿಸಲು ಅಗತ್ಯ ಮಾಹಿತಿಗಳನ್ನು ಒದಗಿಸುವಂತೆ ಕೋರಿ ತಮ್ಮ ಕಚೇರಿಗೆ ಪತ್ರ ಬರೆದಿದ್ದು, ಈ ಸಂಬಂಧ ಕೋರಿರುವ ಮಾಹಿತಿಯನ್ನು ಸರ್ಕಾರಕ್ಕೆ ಒದಗಿಸಲಾಗಿದೆಯೇ ಎಂಬ ಅಂಶವನ್ನು ಆಯೋಗಕ್ಕೆ ಇಮೇಲ್ ಮೂಲಕ ತಿಳಿಸುವುದು.





ಲಕ್ಷ್ಮಿಕಾಂತ ರೆಡ್ಡಿ ಜಿ.ಎಸ್.ಸಂಗ್ರೇಶಿ

> **ಮೈಸೂರು ಜಿಲ್ಲೆಯ ಕೆಲ ನಗರಸಭೆ, ಪುರಸಭೆಗಳ ಸದಸ್ಯರ ಪದಾವಧಿ ಮುಕ್ತಾಯದ ಹಂತ ತಲುಪಿದ್ದು, ಚುನಾವಣೆ ವಿಳಂಬದ ಬಗ್ಗೆ ಜಿಲ್ಲಾಧಿಕಾರಿ ಪತ್ರ ಬರೆದಿದ್ದರು. ಆದರೆ ವಾರ್ಡ್‌ವಾರು ಮೀಸಲಾತಿ ನಿಗದಿಪಡಿಸದೆ ಮುಂದಿನ ಪ್ರಕ್ರಿಯೆ ನಡೆಸಲಾಗದು. ಆದ್ದರಿಂದ ಮೀಸಲಾತಿ ನಿಗದಿಗೆ ಸರ್ಕಾರ ಕೇಳಿದ್ದ ಮಾಹಿತಿ ಒದಗಿಸಿರುವ ಬಗ್ಗೆ ಸ್ಪಷ್ಟನೆ ಕೇಳಲಾಗಿದೆ.**
>
> –ಜಿ.ಎಸ್.ಸಂಗ್ರೇಶಿ, ಆಯುಕ್ತರು ರಾಜ್ಯ ಚುನಾವಣಾ ಆಯೋಗ

ಸರ್ಕಾರವು ಕೋರಿರುವ ಮಾಹಿತಿಗಳನ್ನು ಈವರೆಗೂ ಒದಗಿಸದಿದ್ದಲ್ಲಿ ಸದರಿ ನಗರ ಸ್ಥಳೀಯ ಸಂಸ್ಥೆಗಳ ಚುನಾವಣೆಯ ನಿಗದಿತ ಸಮಯಕ್ಕೆ ನಡೆಯುದೇ ಇರುವುದಕ್ಕೆ ಹಾಗೂ ಚುನಾವಣೆಯು ಮುಂದೂಡುವುದಕ್ಕೆ ತಾವೇ ನೇರವಾಗಿ ಕಾರಣವಾಗುವುದರಿಂದ ಸರ್ಕಾರವು ಕೋರಿರುವ ಮಾಹಿತಿಯನ್ನು ಕೂಡಲೇ ಒದಗಿಸುವಂತೆ ತಿಳಿಸಿದೆ. ತಪ್ಪಿದ್ದಲ್ಲಿ ತಮ್ಮ ಕರ್ತವ್ಯ ನಿರ್ಲಕ್ಷ್ಯತೆ ಕುರಿತು ಸರ್ಕಾರಕ್ಕೆ ವರದಿ ಮಾಡಬೇಕಾಗುತ್ತದೆ.

ಅಲ್ಲದೆ, ಅಂತಹ ಪತ್ರಗಳನ್ನು ಮಾನ್ಯ ಉಚ್ಛ ನ್ಯಾಯಾಲಯಕ್ಕೂ ಹಾಗೂ ಚುನಾವಣಾ ಆಯೋಗಕ್ಕೂ ಕಳುಹಿಸುವ ಮುನ್ನ ಸರಿಯಾಗಿ ಓದಬೇಕು. ಈ ರೀತಿಯ ಪತ್ರಗಳನ್ನು ಕಳುಹಿಸುವ ಮುನ್ನ ಎಚ್ಚರಿಕೆ ವಹಿಸುವುದು ಸೂಕ್ತವೆಂದು ತಮಗೆ ತಿಳಿಸಲು ನಾನು ನಿರ್ದೇಶಿಸಲ್ಪಟ್ಟಿದ್ದೇನೆ ಎಂದು ಆಯೋಗದ ಅಧೀನ ಕಾರ್ಯದರ್ಶಿ ಪತ್ರದಲ್ಲಿ ತಿಳಿಸಿದ್ದಾರೆ.

Printed by T.S. Gopinath, Published by M. Govinde Gowda on behalf of Academy Newspapers Private Limited, 15-C Industrial 'A' Layout, Bannimantap, Mysore-570 015 and Printed at Academy Newspapers Private Limited, 15-C Industrial 'A' Layout, Bannimantap, Mysore-570 015 and Published at 15-C Industrial 'A' Layout, Bannimantap, Mysore-570 015, Editor: M. Govinde Gowda Ph: 2496520 / 2496521 / 2496526 / 2496527 / 2496528. Fax: 0821-2496525. CITY OFFICES: Visveswaraya Building, III Floor, K.R. CIRCLE, MYSORE-570 001, Ph: 2431774 and No. 114, D. DEVARAJ URS ROAD (Opposite Big Bus), MYSORE-570 001. Ph: 2428695. RNI Reg. No. 36581 / 1980 E-mail address: news@mysurumithra.com For advertisements: ad@mysurumithra.com

ದಸರಾ ಪುಸ್ತಕ ಮೇಳದಲ್ಲಿ 4 ಕೃತಿಗಳ ಬಿಡುಗಡೆ


'ದಸರಾ ಕನ್ನಡ ಪುಸ್ತಕ ಮೇಳ'ದಲ್ಲಿ 4 ಕೃತಿಗಳನ್ನು ಬಿಡುಗಡೆಗೊಳಿಸಲಾಯಿತು.

ಮೈಸೂರು,ಸೆ.29(ಎಂಕೆ)– ಮಾತುಗಳು ಸೋತು, ಮಾಹಿತಿಗಳು ಸ್ಫೋಟಿಸುತ್ತಿರುವ ಕಾಲದಲ್ಲಿ ಸಾಂಸ್ಕೃತಿಕ ಮನಸ್ಸುಗಳನ್ನು ಒಂದೆಡೆ ಸೇರಿಸಬೇಕಿದೆ ಎಂದು ಲೇಖಕಿ ಡಾ.ಎಂ.ಎಸ್.ಅನಿತಾ ಮಂಗಲ ಹೇಳಿದರು.

ಮೈಸೂರಿನ ಸ್ಕೌಟ್ಸ್ ಅಂಡ್ ಗೈಡ್ಸ್ ಮೈದಾನದಲ್ಲಿ ಮೈಸೂರು ದಸರಾ ಮಹೋತ್ಸವದ ಅಂಗವಾಗಿ ಕನ್ನಡ ಮತ್ತು ಸಂಸ್ಕೃತಿ ಇಲಾಖೆ, ಕನ್ನಡ ಪುಸ್ತಕ ಪ್ರಾಧಿಕಾರ ಹಾಗೂ ಪುಸ್ತಕ ಮೇಳ ಉಪ ಸಮಿತಿ ವತಿಯಿಂದ ಆಯೋಜಿಸಿರುವ 'ದಸರಾ ಕನ್ನಡ ಪುಸ್ತಕ ಮೇಳ'ದಲ್ಲಿ ಸೋಮವಾರ 4 ಕೃತಿಗಳನ್ನು ಬಿಡುಗಡೆಗೊಳಿಸಿ ಅವರು ಮಾತನಾಡಿದರು.

ವಿಪ್ಲವ ಕಾಲದಲ್ಲಿ ಕಲೆ, ಸಾಹಿತ್ಯ ರಚನೆ ಮೂಲಕ ಮಾನವೀಯತೆ ಮರು ಸ್ಥಾಪಿಸಬೇಕಿದೆ. ಓದಿಗೆ ಪ್ರತಿಯೊಬ್ಬರನ್ನು ಸಜ್ಜುಗೊಳಿಸಬೇಕಿದೆ. ಈ ನಿಟ್ಟಿನಲ್ಲಿ ದಸರಾ ಕನ್ನಡ ಪುಸ್ತಕ ಮೇಳದಂತಹ ಕಾರ್ಯಕ್ರಮಗಳು ನಿರಂತರವಾಗಿ ನಡೆಯುತ್ತಿರಬೇಕು ಎಂದರಲ್ಲದೆ ಬಿಡುಗಡೆಗೊಳಿಸಿದ ಕೃತಿಗಳ ಪರಿಚಯ ಮಾಡಿಕೊಟ್ಟರು.

ಲೇಖಕರಾದ ಎಸ್.ಸುಂದರ್ ಕುಮಾರ್ ರಚಿತ 'ಜನರೊಡಲ ಜಂಗಮ', ಶ್ರೀಮತಿ ವಸು ವತ್ಸಲೆ ರಚಿತ 'ಮನಸೇ ಥ್ಯಾಂಕ್ಯೂ', ಆರ್.ಸದಾಶಿವಯ್ಯ ಚರಗನಹಳ್ಳಿ ರಚಿತ 'ಕಾವ್ಯಧಾರೆ' ಹಾಗೂ ದಿವಾಕರ ಆಜಾದ್ ರಚಿತ 'ವಿಕರ್ಣ' ಕೃತಿಗಳನ್ನು ಬಿಡುಗಡೆ ಮಾಡಲಾಯಿತು. ಕನ್ನಡ ಪುಸ್ತಕ ಪ್ರಾಧಿಕಾರದ ಅಧ್ಯಕ್ಷ ಡಾ.ಮಾನಸ ಅಧ್ಯಕ್ಷತೆ ವಹಿಸಿದ್ದರು. ರಂಗಕರ್ಮಿ ರಾಜಶೇಖರ ಕದಂಬ, ಜಿಲ್ಲಾ ಕಸಾಪ ಮಾಜಿ ಅಧ್ಯಕ್ಷ ಎಂ.ಚಂದ್ರಶೇಖರ್ ಸೇರಿದಂತೆ ಮತ್ತಿತರರು ಉಪಸ್ಥಿತರಿದ್ದರು.

ಜನಗಣತಿಗೆ ಬಿಜೆಪಿ ವಿರೋಧಕ್ಕೆ ಮುಖ್ಯಮಂತ್ರಿ ಸಿದ್ದರಾಮಯ್ಯ ತಿರುಗೇಟು

ಸಬ್ ಕಾ ಸಾಥ್ ಸಬ್ ಕಾ ವಿಕಾಸ್ ಅಂತರಂಗದ ನಿಜ ಬಣ್ಣ ಬಯಲು!

ಬೆಂಗಳೂರು, ಸೆ.29(ಕೆಎಂಶಿ)– ನಮ್ಮ ಸರ್ಕಾರ ಸಾಮಾಜಿಕ, ಆರ್ಥಿಕ ಮತ್ತು ಶೈಕ್ಷಣಿಕ ಸಮೀಕ್ಷೆ ಪ್ರಾರಂಭಿಸುತ್ತಿದ್ದಂತೆಯೇ 'ಸಬ್ ಕಾ ಸಾಥ್ ಸಬ್ ಕಾ ವಿಕಾಸ್' ಕೂಗು ಹಾಕುತ್ತಿರುವವರ ಅಂತರಂಗದ ನಿಜ ಬಣ್ಣ ಬಯಲಾಗುತ್ತಿದೆ ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಇಂದಿಲ್ಲಿ ಟೀಕಿಸಿದ್ದಾರೆ.

ಈ ಸಂಬಂಧ ಮಾಧ್ಯಮ ಹೇಳಿಕೆ ನೀಡಿರುವ ಅವರು, ರಾಜ್ಯ ಬಿಜೆಪಿ ನಾಯಕರು ಒಬ್ಬೊಬ್ಬರಾಗಿ ನಮ್ಮ ಸಮೀಕ್ಷೆ ಬಹಿಷ್ಕರಿಸುವಂತೆ ಕರೆ ನೀಡುವ ಮೂಲಕ ಸಾರ್ವಜನಿಕರ ಎದುರು ಬೆತ್ತಲಾಗುತ್ತಿದ್ದಾರೆ ಎಂದಿದ್ದಾರೆ. ರಾಜ್ಯ ಹಿಂದುಳಿದ ವರ್ಗಗಳ ಶಾಶ್ವತ ಆಯೋಗ ನಡೆಸುತ್ತಿರುವ ಸಮೀಕ್ಷೆ ಯಾವುದೇ ಒಂದು ಜಾತಿ, ಧರ್ಮಕ್ಕೆ ಸೀಮಿತ ವಾಗಿಲ್ಲ. ಏಳು ಕೋಟಿ ಜನರ ಸಾಮಾಜಿಕ, ಆರ್ಥಿಕ ಮತ್ತು ಶೈಕ್ಷಣಿಕ ಮಾಹಿತಿ ಸಂಗ್ರಹಣೆಯಾಗಿದ್ದು, ಯಾರ ವಿರುದ್ಧವೂ ಅಲ್ಲ, ಎಲ್ಲರ ಪರವಾಗಿರುವ ಸಮೀಕ್ಷೆ. ಇದರ ಮುಖ್ಯ ಉದ್ದೇಶ ಸಾಮಾಜಿಕ, ಆರ್ಥಿಕ ಮತ್ತು ಶೈಕ್ಷಣಿಕ ಸಮಾನತೆ ಸಾಧಿಸಿ ಸರ್ವರಿಗೂ ಸಮಪಾಲು, ಸಮಬಾಳು ನೀಡುವುದಾಗಿದೆ. ಸಂಪತ್ತು, ಅವಕಾಶ ಮತ್ತು ಪ್ರಾತಿನಿಧ್ಯ ಎಲ್ಲವೂ ಯಥಾಸ್ಥಿತಿಯಲ್ಲಿಯೇ ಇರಬೇಕು. ಬಡವರು ಬಡವರಾಗಿಯೇ ಉಳಿಯಬೇಕು. ಹಿಂದುಳಿದವರು ಹಿಂದೆಯೇ ಉಳಿಯಬೇಕು. ಮಹಿಳೆಯರು ಅವಕಾಶ ವಂಚಿತರಾಗಿಯೇ ಇರಬೇಕು. ವರ್ಣ ಮತ್ತು ವರ್ಗಗಳ ನಡುವಿನ ಅಸಮಾನತೆ ಮುಂದುವರಿಯಬೇಕು ಎನ್ನುವುದು ಮನುವಾದ. ಬಿಜೆಪಿ ನಾಯಕರ ಅಂತರಂಗದಲ್ಲಿರುವುದು ಇದೇ ಮನುವಾದಿ ಮನಸ್ಥಿತಿ. ರಾಜ್ಯ ಸರ್ಕಾರದ ಸಮೀಕ್ಷೆಯಿಂದ ಕೇವಲ ದಲಿತ, ಹಿಂದುಳಿದ ಜಾತಿ ಮತ್ತು ಅಲ್ಪಸಂಖ್ಯಾತ ಸಮುದಾಯಗಳ ಸ್ಥಿತಿಗತಿ ಮಾತ್ರವಲ್ಲ. ಮುಂದುವರಿದ ಜಾತಿಗಳ ಬಡವರು ಮತ್ತು ಅವಕಾಶ ವಂಚಿತರ ಸ್ಥಿತಿಗತಿಯೂ ಗೊತ್ತಾಗಲಿದೆ. ಈ ವಾಸ್ತವಸ್ಥಿತಿ ಅರಿವಾಗುವುದು ಬಿಜೆಪಿಯವರಿಗೆ ಬೇಡವಾಗಿದೆ. ಸಂಪತ್ತು, ಅವಕಾಶ ಮತ್ತು ಪ್ರಾತಿನಿಧ್ಯ ಪ್ರತಿಯೊಂದು ಜಾತಿ ಮತ್ತು ಧರ್ಮದ ಉಳ್ಳವರ ಕೈಯ್ಯಲ್ಲಿಯೇ ಇರಬೇಕು ಎನ್ನುವುದೇ ಅವರ ವಿರೋಧದ ಹಿಂದಿನ ದುರುದ್ದೇಶ. ಬಿಹಾರದಲ್ಲಿ ಇವರದ್ದೇ ಮೈತ್ರಿ ಸರ್ಕಾರ ಜಾತಿ ಆಧಾರಿತ ಸಾಮಾಜಿಕ, ಆರ್ಥಿಕ ಮತ್ತು ಶೈಕ್ಷಣಿಕ ಸಮೀಕ್ಷೆ ನಡೆಸಿದೆ. ಇದೇ ರೀತಿ ತೆಲಂಗಾಣದಲ್ಲಿಯೂ ನಡೆದಿದೆ. ಅಲ್ಲಿಯೂ ಬಿಜೆಪಿ ನಾಯಕರು ಬಾಯಿ ಮುಚ್ಚಿಕೊಂಡಿದ್ದಾರೆ.



ಇವೆಲ್ಲಕ್ಕಿಂತ ಮಿಗಿಲಾಗಿ ಈಗ ಕೇಂದ್ರದಲ್ಲಿನ ಪ್ರಧಾನ ಮಂತ್ರಿ ನರೇಂದ್ರ ಮೋದಿ ನೇತೃತ್ವದ ಎನ್‌ಡಿಎ ಸರ್ಕಾರವೇ ಜಾತಿಗಣತಿ ಮಾಡಲು ಮುಂದಾಗಿದೆ. ಕರ್ನಾಟಕದಲ್ಲಿ ಜಾತಿಗಳನ್ನು ಪರಿಗಣಿಸಿ ನಡೆಸುತ್ತಿರುವ ಸಾಮಾಜಿಕ, ಆರ್ಥಿಕ ಮತ್ತು ಶೈಕ್ಷಣಿಕ ಸಮೀಕ್ಷೆ ವಿರೋಧಿಸುತ್ತಿರುವ ಬಿಜೆಪಿ ನಾಯಕರು ಕೇಂದ್ರ ಸರ್ಕಾರದ ಜಾತಿ ಗಣತಿಯನ್ನೂ ವಿರೋಧಿಸುವಿರಾ, ಹಾಗಿದ್ದರೆ, ಗಟ್ಟಿದನಿಯಲ್ಲಿ ಈಗಲೇ ಹೇಳಿ. ಪ್ರಧಾನಿ ಎದುರು ತಲೆ ಎತ್ತಿ ಮಾತನಾಡುವ ದಮ್ಮು, ತಾಕತ್ತು ಇಲ್ಲದ ನಿಮಗೆ ಜಾತಿಗಣತಿ ವಿರೋಧಿಸುವ ಧೈರ್ಯವಿದೆಯೇ, ಮೂರ್ಖತನದ ಹೇಳಿಕೆಗಳ ಮೂಲಕ ರಾಜ್ಯದ ಪ್ರಜ್ಞಾವಂತ ಜನರೆದುರು ನಗೆಪಾಟಲಿಗೆ ಗುರಿಯಾಗುತ್ತಿದ್ದೀರಾ.

ಬಿಜೆಪಿ ನಾಯಕರ ಆತ್ಮವಂಚಕ ನಡವಳಿಕೆ ರಾಜ್ಯದ ಜನತೆ ಅರ್ಥಮಾಡಿಕೊಳ್ಳಬೇಕು. ರಾಜಕೀಯ ಪ್ರೇರಿತ ಅಕ್ಕತನದ ಹೇಳಿಕೆಗಳನ್ನು ಮನೆಯ ಕಸದ ಬುಟ್ಟಿಗೆ ಎಸೆದು, ಸಾಮಾಜಿಕ, ಆರ್ಥಿಕ ಮತ್ತು ಶೈಕ್ಷಣಿಕ ಸಮೀಕ್ಷೆಯಲ್ಲಿ ಪಾಲ್ಗೊಂಡು ಸಂಪೂರ್ಣ ಸಹಕಾರ ನೀಡಬೇಕು. ನಾವೆಲ್ಲರೂ ಸೇರಿ ಸಮ ಸಮಾಜ ನಿರ್ಮಾಣ ಮಾಡುವ ಮೂಲಕ ಕರ್ನಾಟಕವನ್ನು ಸರ್ವಜನಾಂಗದ ಶಾಂತಿಯ ತೋಟ ಮಾಡೋಣ ಎಂದು ಮನವಿ ಮಾಡಿದ್ದಾರೆ.

ಅ.3ರಂದು 'ಮೈಸೂರು ದಸರಾ ಎಷ್ಟೊಂದು ಸುಂದರ' ಸಂಗೀತ



ಮೈಸೂರು,ಸೆ.29(ಜಿಎ)–ಮೈಸೂರಿನ ಜನಚೈತನ್ಯ ಫೌಂಡೇಷನ್ ವತಿಯಿಂದ ಅ.3 ರಂದು ಸಂಜೆ 4.30ಕ್ಕೆ ಜೆಎಲ್‌ಬಿ ರಸ್ತೆಯ ನಾದಬ್ರಹ್ಮ ಸಂಗೀತ ಸಭಾಂಗಣದಲ್ಲಿ ದಸರಾ ಮಹೋತ್ಸವ ಪ್ರಯುಕ್ತ 'ಮೈಸೂರು ದಸರಾ ಎಷ್ಟೊಂದು ಸುಂದರ' ಶೀರ್ಷಿಕೆಯಡಿ ಲೈವ್ ಸಂಗೀತ ಕಾರ್ಯಕ್ರಮ ಆಯೋಜಿಸಲಾಗಿದೆ.

ಮೈಸೂರು ಜಿಲ್ಲಾ ಪತ್ರಕರ್ತರ ಭವನದಲ್ಲಿ ಸುದ್ದಿಗೋಷ್ಠಿಯಲ್ಲಿ ಫೌಂಡೇಷನ್ ಅಧ್ಯಕ್ಷ ಆರ್.ಲಕ್ಷ್ಮಣ್ ಈ ವಿಷಯ ತಿಳಿಸಿ, ಜನಪ್ರಿಯ ಹಳೆಯ ಕನ್ನಡ ಚಿತ್ರಗೀತೆ ಮತ್ತು ಭಾವಗೀತೆಗಳ ಕಾರ್ಯಕ್ರಮ. ಹಿರಿಯ ಸಮಾಜ ಸೇವಕ ರಘುರಾಮ್ ವಾಜಪೇಯಿ ಕಾರ್ಯಕ್ರಮ ಉದ್ಘಾಟಿಸುವರು. ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಜಂಟಿ ನಿರ್ದೇಶಕ ವಿ.ಎನ್.ಮಲ್ಲಿಕಾರ್ಜುನಸ್ವಾಮಿ, ಹಿರಿಯ ಪತ್ರಕರ್ತ ಅಂಶಿ ಪ್ರಸನ್ನ ಕುಮಾರ್, ಕನ್ನಡ–ಸಂಸ್ಕೃತಿ ಇಲಾಖೆ ಸಹಾಯಕ ನಿರ್ದೇಶಕ ಡಾ.ಎಂ.ಡಿ. ಸುದರ್ಶನ್ ಮತ್ತಿತರರು ಆಗಮಿಸಲಿದ್ದಾರೆ.

ಕಾರ್ಯಕ್ರಮದಲ್ಲಿ ಗಾಯಕರಾದ ಜಾಯ್ಸ್ ವೈಶಾಕ್, ವೈ.ಎಂ.ನಾಗೇಂದ್ರ, ಶಾಂತಕುಮಾರಿ, ನರಸಿಂಹಮೂರ್ತಿ, ಬಿ.ಎಸ್.ವಿಜಯ್ ಆನಂದ್ ಹಾಗೂ ಎಂ.ರೇಖಾ ಮೊದಲಾದವರು ಸುಮಾರು 32 ಗೀತೆಗಳನ್ನು ಪ್ರಸ್ತುತಪಡಿಸಲಿದ್ದಾರೆ. ಎಲ್ಲರಿಗೂ ಉಚಿತ ಪ್ರವೇಶವಿದೆ ಎಂದರು. ಸುದ್ದಿಗೋಷ್ಠಿಯಲ್ಲಿ ಜಾಯ್ಸ್ ವೈಶಾಕ್, ತಿಪ್ಪಯ್ಯ, ಎಂ. ರೇಖಾ ಉಪಸ್ಥಿತರಿದ್ದರು.

ಕಾಂಗ್ರೆಸ್ ಸರ್ಕಾರ 80 ಪರ್ಸೆಂಟ್ ಕಮಿಷನ್ ಸರ್ಕಾರ

ಸಿಎಂ ಸಿದ್ದರಾಮಯ್ಯ ರಾಜೀನಾಮೆಗೆ ವಿಪಕ್ಷ ನಾಯಕ ಅಶೋಕ್ ಆಗ್ರಹ

ಬೆಂಗಳೂರು,ಸೆ.29(ಕೆಎಂಶಿ)–ಕಾಂಗ್ರೆಸ್ ಸರ್ಕಾರ 80 ಪರ್ಸೆಂಟ್ ಕಮಿಷನ್ ಪಡೆಯುತ್ತಿರುವುದು ಸಾಬೀತಾಗಿದ್ದು, ಮುಖ್ಯಮಂತ್ರಿ ಸಿದ್ದರಾಮಯ್ಯ ಕೂಡಲೇ ರಾಜೀನಾಮೆ ನೀಡಬೇಕು ಎಂದು ವಿಧಾನಸಭೆಯ ಪ್ರತಿಪಕ್ಷ ನಾಯಕ ಆರ್.ಅಶೋಕ ಆಗ್ರಹಿಸಿದ್ದಾರೆ.

ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಸಿದ್ದರಾಮಯ್ಯ ಹಾಗೂ ಉಪಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್, ಬಿಜೆಪಿ ಆಡಳಿತದಲ್ಲಿ 40% ಕಮಿಷನ್ ನಡೆಯುತ್ತಿದೆ ಎಂಬ ಸುಳ್ಳು ಆರೋಪ ಮಾಡಿದ್ದರು, ಈಗ ಗುತ್ತಿಗೆದಾರರ ಸಂಘದವರು, ಕಾಂಗ್ರೆಸ್ ಸರ್ಕಾರ ದುಪ್ಪಟ್ಟು ಕಮಿಷನ್ ಪಡೆಯುತ್ತಿದೆ ಎಂಬುದಾಗಿ ಸಿಎಂಗೆ ಪತ್ರ ಬರೆದಿದ್ದಾರೆ. ಅಂದರೆ, ಇದು 80 ಪರ್ಸೆಂಟ್ ಸರ್ಕಾರ ಎಂದು ಸಾಬೀತಾಗಿದೆ ಎಂದರು.

ಸರ್ಕಾರಕ್ಕೆ ಮಾನ–ಮರ್ಯಾದೆ ಇದ್ದರೆ ಎಲ್ಲರೂ ರಾಜೀನಾಮೆ ನೀಡಬೇಕು. ಸಿದ್ದರಾಮಯ್ಯ ಕೂಡಲೇ ರಾಜೀನಾಮೆ ಕೊಡಬೇಕು. ಸಚಿವರು ಲಂಚ ಪಡೆದಿಲ್ಲ ಎಂದಾದರೆ ಸ್ಪಷ್ಟನೆ ನೀಡಲಿ. ಇಲ್ಲವೆಂದಾದರೆ ಎಲ್ಲರೂ ಲಂಚ ಪಡೆದಿದ್ದಾರೆ ಎಂಬುದಾಗಿ ತಿಳಿಯಬೇಕಾಗುತ್ತದೆ.

ಭ್ರಷ್ಟಾಚಾರ ಬಯಲಾಗುವುದೆಂಬ ಕಾರಣಕ್ಕೆ ನ್ಯಾ.ನಾಗಮೋಹನದಾಸ್ ಸಮಿತಿಯನ್ನು ಸರ್ಕಾರ ರದ್ದು ಮಾಡಿದೆ. ಬಿಜೆಪಿ ಅವಧಿಯಲ್ಲಿ ಪೇ–ಸಿಎಂ ಎಂಬ ಪೋಸ್ಟರ್ ಅಂಟಿಸಿದ್ದರು. ಇದಕ್ಕೆ ಈಗ ರಾಹುಲ್ ಗಾಂಧಿ ಉತ್ತರ ನೀಡಬೇಕು ಎಂದರು.

ಪರಿಹಾರ ನೀಡಲು ಮೀನಾಮೇಷ: ಉತ್ತರ ಕರ್ನಾಟಕದ ಜಿಲ್ಲೆಗಳಲ್ಲಿ ಪ್ರವಾಹ ಬಂದು ಸಾವು–ನೋವು ಉಂಟಾಗಿದೆ. ಕಲಬುರಗಿ ಹಾಗೂ ಬೀದರ್‌ನಲ್ಲಿ ಹೆಚ್ಚು ಹಾನಿ ಉಂಟಾಗಿದೆ. ಈವರೆಗೆ ಯಾವುದೇ ಸಚಿವರು ಕ್ರಮ ವಹಿಸಿಲ್ಲ. ಬಿಜೆಪಿ ಅವಧಿಯಲ್ಲಿ ಡಬಲ್ ಪರಿಹಾರ ನೀಡಲಾಗಿತ್ತು. ಸರ್ಕಾರದ ಬಳಿ ಹಣವಿದ್ದರೆ ಸಮರೋಪಾದಿಯಲ್ಲಿ ಕೆಲಸ ಮಾಡುತ್ತಿದ್ದರು. ಹಣವಿಲ್ಲದೆ ಸಚಿವರು ಹಾಗೂ ಮುಖ್ಯಮಂತ್ರಿ ಮುಖ ತಪ್ಪಿಸಿ ಓಡಾಡುತ್ತಿದ್ದಾರೆ. ಸರ್ಕಾರದ ಸಂಪೂರ್ಣ ಗಮನ ಜಾತಿ ಸಮೀಕ್ಷೆ ಕಡೆಗಿದೆ. ಮನೆ ಹಾಗೂ ಬೆಳೆ ಹಾನಿಗೆ ಎಷ್ಟು ಪರಿಹಾರ ನೀಡಲಾಗುವುದು ಎಂಬುದನ್ನು ಸರ್ಕಾರ ಸ್ಪಷ್ಟವಾಗಿ ತಿಳಿಸಬೇಕು ಎಂದರು.


ಆರ್.ಅಶೋಕ

ಕೇಂದ್ರ ಸರ್ಕಾರ ತನ್ನ ಪಾಲಿನ ಪರಿಹಾರದ ಹಣ ನೀಡುತ್ತದೆ. ರಾಜ್ಯ ಸರ್ಕಾರದ ತಕ್ಷಣ 3,000 ಕೋಟಿ ರೂ. ಪರಿಹಾರ ಘೋಷಿಸಿ ವಿತರಣೆ ಮಾಡಬೇಕು. ಬಿಜೆಪಿ ಅವಧಿಯಲ್ಲಿ 30 ದಿನಕ್ಕಾಗುವಷ್ಟು ದಿನಸಿ ನೀಡಲಾಗಿತ್ತು. ಈ ಸರ್ಕಾರ ಅರ್ಧ ಕೆ.ಜಿ. ಅಕ್ಕಿಯನ್ನೂ ಕೊಟ್ಟಿಲ್ಲ. ಬಿಜೆಪಿ ವಿವಿಧ ಜಿಲ್ಲೆಗಳಲ್ಲಿ ಪ್ರವಾಸ ಮಾಡುತ್ತಿದೆ. ನಾನೂ ಪ್ರವಾಸ ಮಾಡಿ ಸರ್ಕಾರದ ಕಿವಿ ಹಿಂಡುವ ಕೆಲಸ ಮಾಡುತ್ತೇನೆ ಎಂದರು.

ಬಿಡದಿಯಲ್ಲಿ ಅಭಿವೃದ್ಧಿಗೆ ಪಡೆದ ಜಮೀನನ್ನು ಎಚ್.ಡಿ.ಕುಮಾರಸ್ವಾಮಿ ಕೈ ಬಿಟ್ಟಿದ್ದರು. ನಾವು ಸಹ ಆ ಯೋಜನೆ ಕೈ ಬಿಟ್ಟಿದ್ದೆವು. ಈಗ ರಿಯಲ್ ಎಸ್ಟೇಟ್ ಮೂಲಕ ದುಡ್ಡು ಹೊಡೆಯಲು ಡಿ.ಕೆ.ಶಿವಕುಮಾರ್ ಯೋಜನೆಯನ್ನು ಮತ್ತೆ ತಂದಿದ್ದಾರೆ. ಆನೇಕಲ್, ಯಲಹಂಕ ಮೊದಲಾದ ಭಾಗಗಳಲ್ಲಿ ನಿವೇಶನ ಮಾಡಿದ ನಂತರ ಬಿಡದಿಗೆ ಏಕೆ ಹೋಗುತ್ತಿದ್ದಾರೆ. ಈಗಾಗಲೇ ಅನೇಕ ನಿವೇಶನಗಳು ಖಾಲಿ ಇವೆ. ಬಿಡದಿಯಲ್ಲಿ ರೈತರ ಜಮೀನುಗಳಿವೆ. ಫಲವತ್ತಾದ ಭೂಮಿಯಲ್ಲಿ ರಿಯಲ್ ಎಸ್ಟೇಟ್ ಮಾಡಬಾರದು.

ಬೇಕಾದ ಜಾತಿ ಜಾಸ್ತಿ ತೋರುತ್ತಿದ್ದಾರೆ: ಜಾತಿ ಸಮೀಕ್ಷೆಯಲ್ಲಿ ಸಂಬಂಧವಿಲ್ಲದ ಪ್ರಶ್ನೆಗಳನ್ನು ಕೇಳುತ್ತಿದ್ದಾರೆ. ಸಿದ್ದರಾಮಯ್ಯ ತಮಗೆ ಬೇಕಾದ ಜಾತಿಗಳ ಸಂಖ್ಯೆಯನ್ನು ಹೆಚ್ಚಾಗಿ ತೋರಿಸಲು ಪ್ರಯತ್ನ ಮಾಡುತ್ತಿದ್ದಾರೆ. ಸಮೀಕ್ಷೆಗೆ ಪೂರ್ವ ತಯಾರಿ ಮಾಡಿಲ್ಲ. ಕೇವಲ ಹದಿನೈದು ದಿನಗಳಲ್ಲಿ ಮುಗಿಸಿ ಎಂದು ಅಧಿಕಾರಿಗಳ ಮೇಲೆ ಒತ್ತಡ ಹೇರಿದ್ದಾರೆ. ಸಾಕಷ್ಟು ಸಮಯ ಇಟ್ಟುಕೊಂಡು ಸಮೀಕ್ಷೆ ಮಾಡಬೇಕು. ಸೋನಿಯಾ ಗಾಂಧಿ, ರಾಹುಲ್ ಗಾಂಧಿ ಮೆಚ್ಚಿಸಲು ಮಾಡುತ್ತಿರುವ ಸಮೀಕ್ಷೆ ಇದಾಗಿದೆ ಎಂದರು.

ಹಬ್ಬದ ಸಮಯದಲ್ಲಿ ಬಸ್ ಪ್ರಯಾಣ ದರ ಹೆಚ್ಚಳ ಮೂಲಕ ಸರ್ಕಾರ ಹಿಂದೂಗಳಿಗೆ ಬರೆ ಎಳೆದಿದೆ. ಹಿಂದೂಗಳನ್ನು ಟಾರ್ಗೆಟ್ ಮಾಡುವ ಸರ್ಕಾರ, ಧರ್ಮಸ್ಥಳ, ಚಾಮುಂಡಿಬೆಟ್ಟವನ್ನು ಈಗಾಗಲೇ ಟಾರ್ಗೆಟ್ ಮಾಡಲಾಗಿದೆ. ಸಿದ್ದರಾಮಯ್ಯನವರು ಮತಾಂತರದ ರಾಯಭಾರಿ ಎಂದು ವಿಪಕ್ಷ ನಾಯಕ ಆರ್.ಅಶೋಕ್ ಹೇಳಿದರು.

ಗ್ರಾಹಕರಿಗಾಗಿ ಜಿಎಸ್‌ಟಿ ದರ ಇಳಿಕೆ ಲಾಭ ನೀಡಿಕೆ

ಮೈಸೂರು: ಭಾರತ ಸರ್ಕಾರವು ಘೋಷಿಸಿರುವ ಗೂಡ್ಸ್ ಅಂಡ್ ಸರ್ವಿಸಸ್ ಟ್ಯಾಕ್ಸ್ (ಜಿಎಸ್‌ಟಿ) ದರದಲ್ಲಿನ ತಿದ್ದುಪಡಿಯನ್ನು ನೆಸ್ಲೆ ಇಂಡಿಯಾ ಸ್ವಾಗತಿಸುತ್ತದೆ. ಸೆ.22ರಿಂದ ಅದರ ಪ್ರಯೋಜನಗಳನ್ನು ನೇರವಾಗಿ ಗ್ರಾಹಕರಿಗೆ ವರ್ಗಾಯಿಸಲಿದೆ ಎಂದು ನೆಸ್ಲೆ ಇಂಡಿಯಾದ ಚೇರ್ಮನ್ ಮತ್ತು ವ್ಯವಸ್ಥಾಪಕ ನಿರ್ದೇಶಕ ಮನಿಷ್ ತಿವಾರಿ ತಿಳಿಸಿದ್ದಾರೆ. ಜಿಎಸ್‌ಟಿ ದರ ಇಳಿಕೆಯು ಭಾರತದ ಗ್ರಾಹಕರಿಗೆ ಒಂದು ಧನಾತ್ಮಕ ಹೆಜ್ಜೆ. ಏಕೆಂದರೆ ಅದು ಬಳಕೆಯನ್ನು ಪ್ರೋತ್ಸಾಹಿಸಿ ಒಟ್ಟಾರೆ ಆರ್ಥಿಕ ಬೆಳವಣಿಗೆಗೆ ಕೊಡುಗೆ ಸಲ್ಲಿಸಲಿದೆ. ಕಳೆದ 113ಕ್ಕಿಂತ ಹೆಚ್ಚಿನ ವರ್ಷಗಳಿಂದ ನೆಸ್ಲೆ ಭಾರತದ ಅವಿಭಾಜ್ಯ ಅಂಗ ಸಾಧ್ಯವಾದ ಎಲ್ಲಾ ವಿಧಗಳಲ್ಲೂ ಗ್ರಾಹಕರಿಗೆ ಸೇವೆ ಸಲ್ಲಿಸುವ ಏಕೈಕ ಉದ್ದೇಶಕ್ಕೆ ನಾವು ಬದ್ಧರಾಗಿದ್ದೇವೆ ಎಂದರು.

ವೆಲ್ಲಾಳ ಸಮುದಾಯ ಧರ್ಮ–ಹಿಂದೂ; ಜಾತಿ 'ಮೊದಲಿಯಾರ್' ಇಲ್ಲ 'ಅಗಮುಡಿ' ನಮೂದಿಸಲು ಮನವಿ

ಮೈಸೂರು: ಮೈಸೂರು ವೆಲ್ಲಾಳ ಅಸೋಸಿಯೇಷನ್, ವೆಲ್ಲಾಳ ಸಮುದಾಯದವರಿಗೆ ಜಾತಿಗಣತಿಯಲ್ಲಿ ಧರ್ಮವನ್ನು 'ಹಿಂದು' ಎಂದು ಮತ್ತು ಜಾತಿಯನ್ನು 'ಮೊದಲಿಯಾರ್' ಇಲ್ಲ 'ಅಗಮುಡಿ' ಎಂದು ನಮೂದಿಸುವಂತೆ ಮನವಿ ಮಾಡಿದೆ. ಈ ಹಿಂದೆ ಮೊದಲಿಯಾರ್ ಎಂದು ಕೊಟ್ಟಿದ್ದರೆ 'ಮೊದಲಿಯಾರ್' ಎಂದು, ಇಲ್ಲ 'ಅಗಮುಡಿ' ಎಂದು ಕೊಟ್ಟಿದ್ದರೆ 'ಅಗಮುಡಿ' ಎಂದು ನಮೂದಿಸುವಂತೆ ಸಮಿತಿಯು ಮನವಿ ಮಾಡಿದೆ.

ಅಭಿನಂದನೆ...


ಮೈಸೂರು ಜಿಲ್ಲಾ ಕನ್ನಡ ಜಾಗೃತಿ ಸಮಿತಿ ನೂತನ ಸದಸ್ಯ ಕಡಕೊಳ ಕುಮಾರಸ್ವಾಮಿ ಅವರನ್ನು ಮಾಜಿ ಕಾರ್ಪೊರೇಟರ್ ಲೋಕೇಶ್ ಪಿಯಾ ಅಭಿನಂದಿಸಿದರು. ಈ ವೇಳೆ ಸಂಘ–ಸಂಸ್ಥೆಗಳ ಮುಖಂಡರು, ಕನ್ನಡಪರ ಹೋರಾಟಗಾರರು ಇದ್ದರು.

ಕುರುಬ ಸಮುದಾಯವನ್ನ ಎಸ್‌ಟಿಗೆ ಸೇರಿಸಲು ಬುಡಕಟ್ಟು ಸಂಶೋಧನಾ ಸಂಸ್ಥೆ ಶಿಫಾರಸು

ಬೆಂಗಳೂರು, ಸೆ.29(ಕೆಎಂಶಿ)– ಕುರುಬ ಸಮುದಾಯವನ್ನು ಪರಿಶಿಷ್ಟ ಪಂಗಡ (ಎಸ್‌ಟಿ) ಪಟ್ಟಿಗೆ ಸೇರಿಸಬೇಕೆಂದು ರಾಜ್ಯ ಬುಡಕಟ್ಟು ಸಂಶೋಧನಾ ಸಂಸ್ಥೆ ಸರ್ಕಾರಕ್ಕೆ ಶಿಫಾರಸು ಮಾಡಿದೆ. ಈ ಸಮುದಾಯ ಸಾಮಾಜಿಕ, ಶೈಕ್ಷಣಿಕವಾಗಿ ಹಿಂದುಳಿದಿರುವುದು ನಮ್ಮ ಸಂಶೋಧನೆಯಿಂದ ವ್ಯಕ್ತವಾಗಿದೆ. ಕೇಂದ್ರ ಸರ್ಕಾರದ ಲೋಕೋರು ಸಮಿತಿಯ ಐದು ಮಾನದಂಡಗಳು ಹಾಗೂ ಬುಡಕಟ್ಟು ಲಕ್ಷಣಗಳನ್ನು ಹೊಂದಿದೆ. ಆದ್ದರಿಂದ ಈ ಸಮುದಾಯವನ್ನು ಪರಿಶಿಷ್ಟ ಪಂಗಡ ಪಟ್ಟಿಗೆ ಸೇರಿಸಲು ಎಲ್ಲಾ ಅರ್ಹತೆ ಹೊಂದಿದೆ ಎಂಬುದಾಗಿ ಶಿಫಾರಸು ಮಾಡಿರುವ ಸಂಶೋಧನಾ ಸಂಸ್ಥೆ, ರಾಜ್ಯದಲ್ಲಿ ಕುರುಬ, ಕುರುಬನ್, ದನಗರ್ ಹೆಸರಿನಲ್ಲಿ ಗುರುತಿಸಿಕೊಂಡಿದೆ. ಕುರುಬ ಸಮುದಾಯ ಕುಲಕಸುಬು ಆಧರಿಸಿ ಜೀವನ ರೂಪಿಸಿಕೊಂಡಿದ್ದಾರೆ, ತಮ್ಮದೇ ಆದ ಸಂಸ್ಕೃತಿ, ಕಲೆ, ನೃತ್ಯ, ನ್ಯಾಯಪಂಚಾಯತ್‌ನ ರೂಢಿ–ಸಂಪ್ರದಾಯಗಳನ್ನು ಆಚರಿಸಿಕೊಂಡು ಬಂದಿದೆ. ರಾಜ್ಯದ 25 ಜಿಲ್ಲೆಗಳಲ್ಲಿ ಇವರು ವಾಸ ಮಾಡುತ್ತಿದ್ದು, ನಾವು ನಡೆಸಿದ ಸಂಶೋಧನೆಯಲ್ಲಿ ಎಲ್ಲಾ ಭಾಗದಲ್ಲೂ ಇವರ ಒಂದೇ ರೀತಿಯ ನಡಾವಳಿ ಕಂಡುಬಂದಿದೆ. ಸಂಶೋಧನಾ ಸಂಸ್ಥೆ ವರದಿ ಸ್ವೀಕರಿಸಿದ ಬಳಿಕ ರಾಜ್ಯ ಸಂಪುಟ ಸಭೆಯಲ್ಲಿ ಚರ್ಚೆ ನಡೆದು, ನಂತರ ಈ ಸಮುದಾಯವನ್ನು ಎಸ್‌ಟಿಗೆ ಸೇರಿಸುವಂತೆ ಕೇಂದ್ರಕ್ಕೆ ಶಿಫಾರಸು ಮಾಡಲಿದೆ. ರಾಜ್ಯ ಸರ್ಕಾರದ ಶಿಫಾರಸ್ಸನ್ನು ಕೇಂದ್ರ ಸರ್ಕಾರ ಅವಲೋಕಿಸಿದ ನಂತರ ಕುರುಬ ಸಮುದಾಯವನ್ನು ಎಸ್‌ಟಿಗೆ ಸೇರಿಸಬೇಕೇ, ಬೇಡವೇ ಎಂಬ ಬಗ್ಗೆ ನಿರ್ಧಾರ ಕೈಗೊಳ್ಳಲಿದೆ.

ಕರೂರು ಕಾಲ್ತುಳಿತಕ್ಕೆ ಬಲಿಯಾದವರಿಗೆ ಶ್ರದ್ಧಾಂಜಲಿ


ಮೈಸೂರು ಕನ್ನಡ ವೇದಿಕೆ ವತಿಯಿಂದ ಮೈಸೂರಿನ ಕೆ.ಆರ್.ವೃತ್ತದಲ್ಲಿ ಮೇಣದ ಬತ್ತಿ ಹಿಡಿದು ತಮಿಳುನಾಡಿನ ಕರೂರಿನಲ್ಲಿ ಕಾಲ್ತುಳಿತದಲ್ಲಿ ಸಾವನ್ನಪ್ಪಿದವರಿಗಾಗಿ ಶ್ರದ್ಧಾಂಜಲಿ ಅರ್ಪಿಸಲಾಯಿತು. ವೇದಿಕೆ ಅಧ್ಯಕ್ಷ ಎಸ್.ಬಾಲಕೃಷ್ಣ, ಮಹದೇವಸ್ವಾಮಿ, ಬೋಗಾದಿ ಸಿದ್ದೇಗೌಡ, ಎಲ್‌ಐಸಿ ಸಿದ್ದಪ್ಪ, ಕಾವೇರಮ್ಮ, ಚಾಮರಾಜು, ಹರೀಶ, ಬಸವರಾಜು ಮತ್ತಿತರರು ಉಪಸ್ಥಿತರಿದ್ದರು.


ಯುವ ಸಮೂಹ ಪುಸ್ತಕಗಳಿಗೆ ಪ್ರಾಮುಖ್ಯತೆ ನೀಡುತ್ತಿಲ್ಲ

ಸಾಹಿತಿಗಳೊಂದಿಗೆ ಸೆಲ್ಫಿ ಕಾರ್ಯಕ್ರಮದಲ್ಲಿ ಹಿರಿಯ ಸಾಹಿತಿ ಪ್ರೊ.ಎಂ.ಕೃಷ್ಣೇಗೌಡ

ಮೈಸೂರು,ಸೆ.29(ಎಸ್‌ಪಿಎನ್)– ಹಿಂದಿನ ಕಾಲದಿಂದಲೂ ಪುಸ್ತಕ ಓದುಗರ ಸಂಖ್ಯೆ ವಿರಳ. ಅದೇ ಪ್ರವೃತ್ತಿ ಈಗಲೂ ಮುಂದುವರೆದಿದೆ ಎಂದು ಹಿರಿಯ ಸಾಹಿತಿ ಪ್ರೊ.ಎಂ.ಕೃಷ್ಣೇಗೌಡ ಅಭಿಪ್ರಾಯಪಟ್ಟರು.

ಮೈಸೂರು ಹಳೆ ಡಿಸಿ ಕಚೇರಿ ಹಿಂಭಾಗದ ಸ್ಕೌಟ್ಸ್ ಮತ್ತು ಗೈಡ್ಸ್ ಮೈದಾನದಲ್ಲಿ ಕನ್ನಡ ಮತ್ತು ಸಂಸ್ಕೃತಿ ಇಲಾಖೆ, ಮೈಸೂರು ದಸರಾ ಮಹೋತ್ಸವ ಸಮಿತಿ ಹಾಗೂ ಬೆಂಗಳೂರು ಕನ್ನಡ ಪುಸ್ತಕ ಪ್ರಾಧಿಕಾರದ ಸಹಯೋಗದೊಂದಿಗೆ ಆಯೋಜಿಸಿರುವ ಕನ್ನಡ ಪುಸ್ತಕಗಳ ರಿಯಾಯ್ತಿ ಮಾರಾಟ ಮೇಳ–2025ರಲ್ಲಿ 'ಸಾಹಿತಿಗಳೊಂದಿಗೆ ಸೆಲ್ಫಿ' ಶೀರ್ಷಿಕೆಯಡಿ ಹಮ್ಮಿಕೊಂಡಿದ್ದ ಕಾರ್ಯಕ್ರಮದಲ್ಲಿ ಮಾತನಾಡಿದರು.

ಬಗೆಬಗೆಯ ತಿಂಡಿ–ತಿನಿಸುಗಳನ್ನು ಸವಿಯಲು ಪ್ರಾಮುಖ್ಯತೆ ನೀಡಿದಷ್ಟು ಪುಸ್ತಕಗಳನ್ನು ಖರೀದಿಸಿ ಓದಲು ಯುವ ಸಮೂಹ ನೀಡುತ್ತಿಲ್ಲ. ಹಾಗಾಗಿ ಈ ಕ್ಷೇತ್ರ ಎಂದಿಗೂ ಅಲ್ಪಸಂಖ್ಯಾತರ ವಿಭಾಗ ಎಂದೇ ಪರಿಗಣಿಸಬೇಕು. ದಸರಾ ಸಂದರ್ಭದಲ್ಲಿ ವಿವಿಧ ದಸರಾ ಸಮಿತಿ ಮೂಲಕ ಮೇಳಗಳನ್ನು ಆಯೋಜಿಸುತ್ತದೆ. ಅದರಲ್ಲೂ ಆಹಾರ ಮೇಳವೂ ಒಂದು. ಈ ಬಾರಿ ಆಹಾರ ಮೇಳದಲ್ಲಿ ನಿಂತು ಕೊಳ್ಳಲು ಜಾಗವಿಲ್ಲದಂತೆ ಹೋಗುತ್ತಾರೆ. ಆದರೆ, ಕಲೆ, ಸಾಹಿತ್ಯ ಹಾಗೂ ನಾಟಕಗಳಿಗೆ ಹೋಗುವುದು ಕಡಿಮೆ ಸಂಖ್ಯೆ ಜನ ಎಂದರು.



ಕನ್ನಡ ಪುಸ್ತಕಗಳ ರಿಯಾಯ್ತಿ ಮಾರಾಟ ಮೇಳ–2025ರಲ್ಲಿ 'ಸಾಹಿತಿಗಳೊಂದಿಗೆ ಸೆಲ್ಫಿ' ಶೀರ್ಷಿಕೆಯಡಿ ಪ್ರೊ.ಎಂ.ಕೃಷ್ಣೇಗೌಡರು ಪುಸ್ತಕಗಳನ್ನು ಪರಿಶೀಲಿಸಿದರು.

ಇದಕ್ಕೂ ಮೊದಲು ಪ್ರೊ.ಎಂ.ಕೃಷ್ಣೇಗೌಡರು ಯೋಗನರಸಿಂಹ ಅವರು ರಚಿಸಿರುವ ರಾಮಾಯಣದ 'ಜಾನಕೀ ಪ್ರಾಣ ಸಖೀ ಅಗಲಿದೆಯಾ ಕಮಲಮುಖಿ' ಪದ್ಯವನ್ನು ಹಾಡಿ ಕಾರ್ಯಕ್ರಮಕ್ಕೆ ಚಾಲನೆ ನೀಡಿದರಲ್ಲದೆ, ಚಿಂತನ ಚಿತ್ತಾರ, ಗಾಯತ್ರಿ ಬುಕ್‌ಹೌಸ್, ಮೈಸೂರು ವಿವಿ ಪ್ರಸಾರಾಂಗ ಮಳಿಗೆ, ಸಂವಹನ, ವೀರಲೋಕ, ಸಂಸ್ಕೃತಿ ಬುಕ್ ಹೌಸ್, ಕರಾಮುವಿವಿ ಮಳಿಗೆ, ಹಂಪಿ ವಿವಿ ಪ್ರಸಾರಂಗ ಮಳಿಗೆ ಸೇರಿದಂತೆ ಇತರೆ ಮಳಿಗೆಗಳಿಗೆ ಭೇಟಿ ನೀಡಿ, ಗ್ರಾಹಕರೊಂದಿಗೆ ಸೆಲ್ಫಿಗೆ ಕ್ಲಿಕ್ಕಿಸಿಕೊಂಡರು.

ಈ ವೇಳೆ ಮೈಸೂರು ವೃಕ್ಷ ಟ್ರಸ್ಟ್‌ನ ಕಲಾವಿದರು 'ದೇವಿ ಭುವನ ಮನ ಮೋಹಿನಿ', 'ಶ್ರೀ ಕಲ್ಯಾಣ ಗುಣಾಭಿರಾಮಂ', 'ಶ್ರೀ ಮಾತಾ ತುಳಸಿ', 'ಮಮ ಪ್ರಾಣ ಕಾಂತೆಗೆ', 'ಈ ದುಗುಡ ವೇತಕೋ', 'ಪಿತ ದಶರಥ ತಾನು', 'ಪೊರೆ ಭಾಸ್ಕರ', 'ಹೇ ವಿಧಾತೆ', 'ನೀರೇ', 'ಸುಮೇಶು ರೂಪ', 'ಚಿತ್ರವಿದು', 'ಲಂಕಾದಿ ಪಾಲನೆ', 'ವಿಜಯ ಧ್ವಜವ ಮೆರೆಸಿದ', 'ಬಾರೆ ಹುಡುಗಿ ತಾರೆಗಡಿಗಿ', 'ಗೋಪಾಲ ಮನ ಮೋಹನ', 'ಮೊರ ಸುಂದರಿ' ಸೇರಿದಂತೆ ಪೌರಾಣಿಕ ಗೀತೆಗಳನ್ನು ಹಾಡಿ ಪುಸ್ತಕ ಮೇಳಕ್ಕೆ ಮೆರಗು ತಂದರು.

ಈ ವೇಳೆ ಮೈಸೂರು ದಸರಾ ಪುಸ್ತಕ ಮೇಳದ ಉಪಸಮಿತಿ ಸದಸ್ಯ ಎಂ.ಚಂದ್ರಶೇಖರ್, ಡಾ.ಎಂ.ಮಹೇಶ್ ಚಿಕ್ಕಲ್ಲೂರು, ಸುಚಿತ್ರಾ ಹೆಗಡೆ, ಮೈಸೂರು ವಿವಿ ಪ್ರಸಾರಾಂಗ ನಿರ್ದೇಶಕ ಪ್ರೊ.ನಂಜಯ್ಯ ಹೊಂಗನೂರು, ಹಿರಿಯ ರಂಗಕರ್ಮಿ ರಾಜಶೇಖರ ಕದಂಬ, ಮೈನಾ.ಲೋಕೇಶ್, ಪ್ರಕಾಶಕ ಸಂಸ್ಕೃತಿ ಸುಬ್ರಹ್ಮಣ್ಯ, ನಿಂಗರಾಜು ಚಿತ್ತಣ್ಣವರ್ ಇತರರಿದ್ದರು.

'ಮೈಸೂರಿನ ವರ್ಣಚಿತ್ರ ಕಲೆಗಳು' ಮಾಸಿಕ ಸರಣಿ ವಿಶೇಷ ಉಪನ್ಯಾಸ ಇಂದು

ಮೈಸೂರು,ಸೆ.29–ಪುರಾತತ್ವ, ಸಂಗ್ರಹಾಲಯಗಳು ಮತ್ತು ಪರಂಪರೆ ಇಲಾಖೆ ವತಿಯಿಂದ ಸೆ.30ರಂದು ಬೆಳಗ್ಗೆ 11 ಗಂಟೆಗೆ ಆಯುಕ್ತರ ಕಚೇರಿ, ಪುರಾತತ್ವ, ಸಂಗ್ರಹಾಲಯಗಳು ಮತ್ತು ಪರಂಪರೆ ಇಲಾಖೆ, ಕರ್ನಾಟಕ ದಸರಾ ವಸ್ತುಪ್ರದರ್ಶನ ಪ್ರಾಧಿಕಾರದ ಆವರಣದಲ್ಲಿ 'ಮೈಸೂರಿನ ವರ್ಣಚಿತ್ರ ಕಲೆಗಳು' ಕುರಿತು ಮಾಸಿಕ ಸರಣಿ ವಿಶೇಷ ಉಪನ್ಯಾಸ ಕಾರ್ಯಕ್ರಮವನ್ನು ಹಮ್ಮಿಕೊಳ್ಳಲಾಗಿದೆ.

ಸಾಂಪ್ರದಾಯಿಕ ವರ್ಣ ಚಿತ್ರ ತಜ್ಞರಾದ ಸಹನಾ ಅವರು ಉಪನ್ಯಾಸ ನೀಡಲಿದ್ದು, ಕಾರ್ಯಕ್ರಮದಲ್ಲಿ ಆಸಕ್ತ ವಿದ್ಯಾರ್ಥಿಗಳು, ಇತಿಹಾಸ ಆಸಕ್ತರು, ಸಂಶೋಧಕರು ಹಾಗೂ ಸಾರ್ವಜನಿಕರು ಭಾಗವಹಿಸಬಹುದಾಗಿದೆ.

ಹೆಚ್ಚಿನ ಮಾಹಿತಿಗಾಗಿ ಕಚೇರಿ ಸ್ಥಿರ ದೂರವಾಣಿ ಸಂಖ್ಯೆ 0821–2424671 ಅನ್ನು ಕಚೇರಿ (ಬೆಳಗ್ಗೆ 10.30 ರಿಂದ ಸಂಜೆ 5.30 ಗಂಟೆ) ವೇಳೆಯಲ್ಲಿ ಸಂಪರ್ಕಿಸಬಹುದಾಗಿದೆ. ಎಂದು ಪುರಾತತ್ವ, ಸಂಗ್ರಹಾಲಯಗಳು ಮತ್ತು ಪರಂಪರೆ ಇಲಾಖೆಯ ಉಪನಿರ್ದೇಶಕರು ಪತ್ರಿಕಾ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಅ.2, ಇಸ್ಕಾನ್‌ನಲ್ಲಿ ವಿಜಯದಶಮಿ ಸಂಭ್ರಮ

ಮೈಸೂರು. ಸೆ. 29–ಮೈಸೂರಿನ ಜಯನಗರದಲ್ಲಿರುವ ಇಸ್ಕಾನ್ ದೇವಾಲಯದಲ್ಲಿ ಅ.2ರಂದು ವಿಜಯದಶಮಿಯ ಪ್ರಯುಕ್ತ ವಿಶೇಷ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಲಾಗಿದೆ. ಅಂದು ಸಂಜೆ 5.30ರಿಂದ ದೇವಸ್ಥಾನದ ಶ್ರೀ ಧಾಮ ಹಾಲ್‌ನಲ್ಲಿ ಶ್ರೀ ರಾಮ ಅಷ್ಟೋತ್ತರ ಪೂಜೆ, ಪಲ್ಲಕ್ಕಿ ಉತ್ಸವ, ಹರಿನಾಮ ಸಂಕೀರ್ತನೆ, ಹಬ್ಬದ ವಿಶೇಷತೆಯ ಕುರಿತು ಉಪನ್ಯಾಸ ಹಾಗೂ ಕೊನೆಯಲ್ಲಿ ರಾವಣ ಮತ್ತು ಕುಂಭಕರ್ಣರ 45 ಅಡಿಗಳ ಪ್ರತಿಕೃತಿಯ ಪರ ಶ್ರೀ ರಾಮ ವಿಜಯವನ್ನು ಪ್ರದರ್ಶಿಸಲಾಗುವುದು. ಹೆಚ್ಚಿನ ಮಾಹಿತಿಗಾಗಿ ದೂ: 8147701807ಗೆ ಸಂಪರ್ಕಿಸಬಹುದು.

ದೇಶ – ವಿದೇಶ

'ಗಾರ್ಬಾ' ನೃತ್ಯ ಮಾಡುತ್ತಿದ್ದ ಮಹಿಳೆ ಕುಸಿದು ಬಿದ್ದು ಸಾವು

ಖಾರ್ಗೋನ್: ಮಧ್ಯಪ್ರದೇಶದ ಖಾರ್ಗೋನ್ ಜಿಲ್ಲೆಯಲ್ಲಿ 'ಗಾರ್ಬಾ' ನೃತ್ಯ ಕಾರ್ಯಕ್ರಮದಲ್ಲಿ 19 ವರ್ಷದ ನವ ವಿವಾಹಿತೆಯೊಬ್ಬರು ತನ್ನ ಪತಿಯೊಂದಿಗೆ ನೃತ್ಯ ಮಾಡುತ್ತಿದ್ದಾಗ ಕುಸಿದು ಬಿದ್ದು ಸಾವಿಗೀಡಾಗಿರುವ ಘಟನೆ ಬಿಕಾನ್ ಗ್ರಾಮದ ಸಂತ ಸಿಂಗಾಜಿ ದೇವಸ್ಥಾನದಲ್ಲಿ ಸಂಭವಿಸಿದೆ.



ಮಹಿಳೆ ತನ್ನ ಪತಿಯೊಂದಿಗೆ ದುರ್ಗಾ ವಿಗ್ರಹದ ಮುಂದೆ ವೇದಿಕೆಯಲ್ಲಿ ಬಾಲಿವುಡ್ ಹಾಡಿಗೆ ನೃತ್ಯ ಮಾಡುತ್ತಿರುವುದನ್ನು ವಿಡಿಯೋದಲ್ಲಿ ಕಾಣಬಹುದು. ಕೆಲ ಕ್ಷಣಗಳ ನಂತರ, ಆಕೆ ನೆಲಕ್ಕೆ ಕುಸಿದು ಬಿದ್ದಿದ್ದಾರೆ. ಆರಂಭದಲ್ಲಿ ಪ್ರೇಕ್ಷಕರು ಇದನ್ನು ನೃತ್ಯದ ಭಾಗವೆಂದು ಭಾವಿಸಿ ನಗಲಾರಂಭಿಸಿದ್ದರು. ಬಳಿಕ, ಪತಿ ಆಕೆಯನ್ನು ಎಬ್ಬಿಸಲು ಪ್ರಯತ್ನಿಸಿದ್ದಾರೆ. ಆದರೆ, ಅವರು ಏಳದಿದ್ದಾಗ ಆಸ್ಪತ್ರೆಗೆ ಕರೆದೊಯ್ಯಲಾಗಿದೆ. ಪ್ರಾಣ ಹೋಗಿ ಬಹಳ ಸಮಯವಾಗಿದೆ ಎಂದು ವೈದ್ಯರು ಧೃಡಪಡಿಸಿದ್ದಾರೆ. ಪರಿಚಯಸ್ಥರ ಪ್ರಕಾರ, ಮೃತ ಮಹಿಳೆಯನ್ನು ಸೋನಮ್ ಎಂದು ಗುರುತಿಸಲಾಗಿದೆ. ಸೋನಮ್ ಈ ವರ್ಷದ ಮೇ ತಿಂಗಳಲ್ಲಿ ಕೃಷ್ಣಪಾಲ್ ಅವರನ್ನು ವಿವಾಹವಾಗಿದ್ದರು.

ಪ್ರಾರ್ಥನೆ ಮಾಡುತ್ತಿದ್ದವರ ಮೇಲೆ ಗುಂಡಿನ ದಾಳಿ; ಐವರು ಸಾವು

ವಾಷಿಂಗ್ಟನ್: ಅಮೆರಿಕದ ಮಿಚಿಗನ್‌ನ ಗ್ರ್ಯಾಂಡ್ ಬ್ಲಾಂಕ್‌ನಲ್ಲಿನ ಚರ್ಚ್ ಮೇಲೆ 40 ವರ್ಷದ ವ್ಯಕ್ತಿಯೊಬ್ಬ ಮನಬಂದಂತೆ ಗುಂಡಿನ ದಾಳಿ ನಡೆಸಿದ್ದಾನೆ. ಘಟನೆಯಲ್ಲಿ ಐವರು ಸಾವನ್ನಪ್ಪಿದ್ದು, ಹಲವರು ಗಾಯಗೊಂಡಿದ್ದಾರೆ. ಮಿಚಿಗನ್‌ನ ದಿ ಚರ್ಚ್ ಆಫ್ ಜೀಸಸ್ ಕ್ರೈಸ್ಟ್ ಆಫ್ ಲೇಟರ್–ಡೇ ಸೇಂಟ್ಸ್ ಚರ್ಚ್‌ಗೆ ಕಾರಿನಲ್ಲಿ ಬಂದು ಡಿಕ್ಕಿ ಹೊಡೆದ ಶೂಟರ್ ಆ ಚರ್ಚ್‌ನಲ್ಲಿ ಪ್ರಾರ್ಥನೆ ಮಾಡುತ್ತಿದ್ದವರ ಮೇಲೆ ಗುಂಡಿನ ದಾಳಿ ನಡೆಸಿದ್ದಾನೆ. ಈ ವೇಳೆ ಆ ಶೂಟರ್‌ನನ್ನು ಪೊಲೀಸರು ಗುಂಡಿ ಹಾರಿಸಿ ಕೊಂದಿದ್ದಾರೆ. ಘಟನೆಯಲ್ಲಿ ಮಕ್ಕಳು ಸೇರಿದಂತೆ 8 ಜನರಿಗೆ ಗಾಯವಾಗಿದೆ, ಐವರು ಮೃತಪಟ್ಟಿದ್ದಾರೆ. ಸಾವಿನ ಸಂಖ್ಯೆ ಇನ್ನಷ್ಟು ಹೆಚ್ಚುವ ಸಾಧ್ಯತೆ ಇದೆ ಎಂದು ಅಧಿಕಾರಿಗಳು ಮಾಹಿತಿ ನೀಡಿದ್ದಾರೆ. ಗುಂಡಿನ ದಾಳಿ ನಡೆಸಿದ ಶೂಟರ್ ಬುರ್ಟೋನ್ ಮೂಲದ 40 ವರ್ಷದ ಥಾಮಸ್ ಜಾಕೋಬ್ ಸ್ಯಾನ್‌ಫೋರ್ಡ್ ಎಂದು ಗುರುತಿಸಲಾಗಿದ್ದು, ಆತ ಅಸಾಲ್ಟ್ ರೈಫಲ್ ಬಳಸಿದ್ದಾನೆ. ಪೊಲೀಸರು ಆತನನ್ನು ಗುಂಡಿಕ್ಕಿ ಹತ್ಯೆ ಮಾಡಿದ್ದಾರೆ. ಗುಂಡು ಹಾರಿಸಿದ ವ್ಯಕ್ತಿ ಚರ್ಚ್ ಅನ್ನು ಗುರಿಯಾಗಿಸಿಕೊಂಡು ಕಟ್ಟಡಕ್ಕೆ ಬೆಂಕಿ ಹಚ್ಚಿದ್ದಾನೆ.



100 ಮಹಿಳೆಯರ ವಂಚಿಸಿದ್ದ ನೈಜೀರಿಯಾ ಪ್ರಜೆ ಬಂಧನ

ನವದೆಹಲಿ: ಬ್ರಿಟನ್ ಮೂಲದ ಕೊರಿಯನ್ ಉದ್ಯಮಿ ಎಂದು ಹೇಳಿಕೊಂಡು ಭಾಷಾ ವಿನಿಮಯ ಅಪ್ಲಿಕೇಶನ್ ಮೂಲಕ ದೇಶಾದ್ಯಂತ 100ಕ್ಕೂ ಹೆಚ್ಚು ಮಹಿಳೆಯರನ್ನು ವಂಚಿಸಿದ ಆರೋಪದ ಮೇಲೆ ಪಶ್ಚಿಮ ದೆಹಲಿಯ ತಿಲಕ್‌ನಗರದಲ್ಲಿ 29 ವರ್ಷದ ಸ್ಟೀಫನ್, ಅಲಿಯಾಸ್ ಕೆ.ಸೀ. ಡೊಮಿನಿಕ್ ಅವರನ್ನು ಬಂಧಿಸಲಾಗಿದೆ. ಡೊಮಿನಿಕ್ ಕಾರ್ಯಾಚರಣಾ ವಿಧಾನವನ್ನು ವಿವರಿಸಿದ ಪೊಲೀಸರು, ಒಂಟಿ ಮಹಿಳೆಯರನ್ನು ಗುರಿಯಾಗಿಸಿಕೊಂಡು ಅವರ ವಿಶ್ವಾಸ ಗಳಿಸಲು, ಸ್ಥಳೀಯ ಭಾಷಿಕರೊಂದಿಗೆ ಚಾಟ್ ಮಾಡುವ ಮೂಲಕ ಭಾಷೆಗಳನ್ನು ಕಲಿಯಲು ಬಳಸುವ ಅಪ್ಲಿಕೇಶನ್ ಅನ್ನು ಬಳಸುತ್ತಿದ್ದನು ಎಂದು ಪೊಲೀಸರು ತಿಳಿಸಿದ್ದಾರೆ. ಏರ್‌ಪೋರ್ಟ್‌ನಲ್ಲಿ ವಲಸೆ ವಿಭಾಗದಲ್ಲಿ ಸಿಲುಕಿಕೊಂಡಿದ್ದೇನೆ ಎಂದು ಮಹಿಳೆಯರನ್ನು ನಂಬಿಸುತ್ತಿದ್ದ. ಬಳಿಕ, ಆತನ ಸಹಚರರು ಫೋನ್ ಮಾಡಿ ಅಧಿಕಾರಿಗಳ ಸೋಗಿನಲ್ಲಿ ಮಹಿಳೆಯರಿಂದ ಹಣಕ್ಕೆ ಬೇಡಿಕೆ ಇಟ್ಟು ಡಿಜಿಟಲ್ ರೂಪದಲ್ಲಿ ವರ್ಗಾಯಿಸಿಕೊಳ್ಳುತ್ತಿದ್ದರು. ನಾನು ಕೊರಿಯಾ ಮೂಲದ ಜುವೆಲ್ಲರಿ ಉದ್ಯಮಿ ಡಕ್ ಯಂಗ್ ಎಂದು ಪರಿಚಯಿಸಿ ಕೊಂಡಿದ್ದ ಡೊಮಿನಿಕ್, ಬ್ರಿಟನ್‌ನಲ್ಲಿ ನೆಲೆಸಿರುವುದಾಗಿ ಹೇಳಿದ್ದ.



ಬಿಷ್ಣೋಯ್ ಗ್ಯಾಂಗ್ ಅನ್ನು ಭಯೋತ್ಪಾದಕ ಸಂಘಟನೆ ಎಂದು ಘೋಷಿಸಿದ ಕೆನಡಾ

ಕೆನಡಾ: ಲಾರೆನ್ಸ್ ಬಿಷ್ಣೋಯ್ ಗ್ಯಾಂಗ್ ವಿರುದ್ಧ ಕಠಿಣ ಕ್ರಮ ಕೈಗೊಂಡಿದ್ದು ಬಿಷ್ಣೋಯ್ ಗ್ಯಾಂಗ್ ಅನ್ನು ಭಯೋತ್ಪಾದಕ ಸಂಘಟನೆ ಎಂದು ಕೆನಡಾದ ಸಚಿವ ಗ್ಯಾರಿ ಆನಂದ ಸಂಗರಿ ಘೋಷಿಸಿದ್ದಾರೆ. ಕೆನಡಾದಲ್ಲಿ ಒಂದು ನಿರ್ದಿಷ್ಟ ಸಮುದಾಯವನ್ನು ಗುರಿಯಾಗಿಸಿಕೊಂಡು ಭಯ ಮತ್ತು ಬೆದರಿಕೆಯ ವಾತಾವರಣವನ್ನು ಸೃಷ್ಟಿಸಿದ್ದಾರೆ ಎಂದು ಬಿಷ್ಣೋಯ್ ಗ್ಯಾಂಗ್ ಮೇಲೆ ಆರೋಪ ಹೊರಿಸಲಾಗಿದೆ. ಬಿಷ್ಣೋಯ್ ಗ್ಯಾಂಗ್ ವಿರುದ್ಧದ ಈ ಕ್ರಮವನ್ನು ಕೆನಡಾದ ಕ್ರಿಮಿನಲ್ ಕೋಡ್ ಅಡಿಯಲ್ಲಿ ತೆಗೆದುಕೊಳ್ಳಲಾಗಿದೆ. ಈಗ ಕೆನಡಾದಲ್ಲಿ ಬಿಷ್ಣೋಯ್ ಗ್ಯಾಂಗ್ ಒಡೆತನದ ಯಾವುದೇ ಆಸ್ತಿ, ವಾಹನ ಅಥವಾ ಹಣವನ್ನು ಸ್ಥಗಿತಗೊಳಿಸಬಹುದು ಅಥವಾ ಮುಟ್ಟುಗೋಲು ಹಾಕಿಕೊಳ್ಳಬಹುದು. ಈ ಪದನಾಮವು ಬಿಷ್ಣೋಯ್ ಗ್ಯಾಂಗ್ ವಿರುದ್ಧ ಭಯೋತ್ಪಾದಕ ಅಪರಾಧಗಳನ್ನು ವಿಚಾರಣೆಗೊಳಪಡಿಸಲು ಕೆನಡಾದ ಕಾನೂನು ಜಾರಿ ಸಂಸ್ಥೆಗಳಿಗೆ ಹೆಚ್ಚಿನ ಅಧಿಕಾರವನ್ನು ನೀಡುತ್ತದೆ. ಬಿಷ್ಣೋಯ್ ಗ್ಯಾಂಗ್ ಅನ್ನು ಭಯೋತ್ಪಾದಕ ಸಂಘಟನೆ ಎಂದು ಪಟ್ಟಿ ಮಾಡುವುದರಿಂದ ಕೆನಡಾದ ಭದ್ರತೆ, ಗುಪ್ತಚರ ಮತ್ತು ಕಾನೂನು ಜಾರಿ ಸಂಸ್ಥೆಗಳು ತಮ್ಮ ಅಪರಾಧಗಳನ್ನು ಎದುರಿಸಲು ಮತ್ತು ಸಮುದಾಯಗಳನ್ನು ಸುರಕ್ಷಿತವಾಗಿಸಲು ಸಹಾಯ ಮಾಡುತ್ತದೆ ಎಂದು ಕೆನಡಾ ಸರ್ಕಾರ ಹೇಳಿದೆ.

ಹೈದರಾಬಾದ್‌ನಲ್ಲಿ 5 ರೂ.ಗೆ ಉಪಾಹಾರ ನೀಡುವ ಇಂದಿರಮ್ಮ ಕ್ಯಾಂಟೀನ್ ಆರಂಭ

ಹೈದರಾಬಾದ್: 5 ರೂ.ಗೆ ಉಪಾಹಾರ ನೀಡುವ ನೂತನ ಆಧುನೀಕೃತ ಇಂದಿರಮ್ಮ ಕ್ಯಾಂಟೀನ್ ಅನ್ನು ಹೈದರಾಬಾದ್ ಉಸ್ತುವಾರಿ ಸಚಿವ ಪೊನ್ನಂ ಪ್ರಭಾಕರ್ ಮತ್ತು ಮೇಯರ್ ಗದ್ವಾಲ್ ವಿಜಯಲಕ್ಷ್ಮಿ ಉದ್ಘಾಟಿಸಿದರು. ಮುಖ್ಯಮಂತ್ರಿ ರೇವಂತ್ ರೆಡ್ಡಿ ಮಾರ್ಗದರ್ಶನದಲ್ಲಿ ಎಲ್ಲರಿಗೂ ಕೈಗೆಟಕುವ ದರದಲ್ಲಿ ತಿಂಡಿ–ಊಟ ನೀಡುವ ಉದ್ದೇಶದಿಂದ ಇಂದಿರಮ್ಮ ಕ್ಯಾಂಟೀನ್ ಪ್ರಾರಂಭಿಸಲಾಗಿದೆ ಎಂದು ಸಚಿವ ಪ್ರಭಾಕರ್ ಹೇಳಿದರು.



ಈ ಕ್ಯಾಂಟೀನ್‌ಗಳು ಗ್ರಾಹಕರಿಗೆ 5 ರೂ.ಗೆ ಉಪಾಹಾರ ಮತ್ತು ಊಟವನ್ನು ನೀಡಲಿವೆ ಎಂದು ಗ್ರೇಟರ್ ಹೈದರಾಬಾದ್ ಮುನ್ಸಿಪಲ್ ಕಾರ್ಪೊರೇಷನ್ (ಜಿಎಚ್‌ಎಂಸಿ) ಹೇಳಿದೆ. ಪ್ರತಿ ಉಪಾಹಾರಕ್ಕೆ 14 ರೂ. ಮತ್ತು ಊಟಕ್ಕೆ 24.83 ರೂ. ಸಬ್ಸಿಡಿಯನ್ನು ಜಿಎಚ್‌ಎಂಸಿ ನೀಡುತ್ತಿದ್ದು, ಇದರಿಂದಾಗಿ ಫಲಾನುಭವಿಗಳು ಪ್ರತಿ ತಿಂಗಳು 3,000 ರೂ. ಉಳಿಸಬಹುದು ಎಂದು ಅದು ಹೇಳಿದೆ. ಪ್ರಸ್ತುತ ನಗರದಾದ್ಯಂತ ಈ ರೀತಿಯ 150 ಕ್ಯಾಂಟೀನ್‌ಗಳಿದ್ದು, ಸುಮಾರು 30,000 ಫಲಾನುಭವಿಗಳಿಗೆ ಸೇವೆ ನೀಡುತ್ತಿವೆ.

ಕಾವೇರಿ ಆರತಿ ಉತ್ತರ–ದಕ್ಷಿಣ ಭಾರತ ಪರಂಪರೆಯ ಸಮ್ಮಿಲನ

ಸುತ್ತೂರು ಶ್ರೀಗಳ ಮೆಚ್ಚುಗೆ

ಕೃಷ್ಣರಾಜಸಾಗರ, ಸೆ.29– ಉತ್ತರ, ದಕ್ಷಿಣ ಭಾರತದ ಪರಂಪರೆಯ ಸಮ್ಮಿಲನವಾಗಿರುವ ಕಾವೇರಿ ಆರತಿಯನ್ನು ಮೊದಲ ಬಾರಿಗೆ ಬಹಳ ವಿಶೇಷವಾಗಿ ಅರ್ಥಪೂರ್ಣವಾಗಿ ಆಯೋಜಿಸಲಾಗಿದೆ. ಕಾವೇರಿ ಆರತಿ ಎಲ್ಲರನ್ನೂ ಒಳಗೊಂಡಿದ್ದು ಪವಿತ್ರ ಭಾವನೆ ಎಲ್ಲರಲ್ಲೂ ಬಂದು ಜನರ ಮನಸ್ಸಿಗೆ ಮುದ ನೀಡಲಿ ಎಂದು ಸುತ್ತೂರು ವೀರಸಿಂಹಾಸನ ಮಹಾಸಂಸ್ಥಾನ ಮಠಾಧ್ಯಕ್ಷ ಶ್ರೀ ಶಿವರಾತ್ರಿ ದೇಶಿಕೇಂದ್ರ ಸ್ವಾಮೀಜಿ ಹೇಳಿದರು.

ಇಲ್ಲಿನ ಕೃಷ್ಣರಾಜಸಾಗರ ಅಣೆಕಟ್ಟೆ ಆವರಣದಲ್ಲಿ ನಡೆಯುತ್ತಿರುವ ಕಾವೇರಿ ಆರತಿ ಕಾರ್ಯಕ್ರಮದಲ್ಲಿ ಭಾಗವಹಿಸಿ ಮಾತನಾಡಿದ ಅವರು, ಉಪಮುಖ್ಯಮಂತ್ರಿಗಳು ತಮ್ಮ ಕನಸಿನ ಯೋಜನೆಯಾದ ಕಾವೇರಿ ಆರತಿ ಕಾರ್ಯಕ್ರಮವನ್ನು ಆಯೋಜಿಸಿದ್ದಾರೆ. ಬರದ ನಾಡನ್ನು ಹಸಿರು ಮಾಡಿದ ಕೆಆರ್‌ಎಸ್‌ನ ಪವಿತ್ರ ಸ್ಥಳದಲ್ಲಿ ಕಾವೇರಿ ಆರತಿ ಮಾಡಲಾಗುತ್ತಿದೆ. ಈ ಸಂದರ್ಭದಲ್ಲಿ ನಾಲ್ವಡಿ ಕೃಷ್ಣರಾಜ ಒಡೆಯರ್ ಅವರನ್ನು ನಾವೆಲ್ಲರೂ ನೆನಪಿಸಿಕೊಳ್ಳಬೇಕು ಎಂದರು.

ಪ್ರಕೃತಿಯನ್ನು ಪೂಜಿಸುವುದು ನಮ್ಮ ಸಂಸ್ಕೃತಿಯಲ್ಲೇ ಬಂದಿದೆ. ಹರಪ್ಪಾ ಮತ್ತು ಮೊಹೆಂಜದಾರೋ ಕಾಲದಿಂದಲೂ ಇದನ್ನು ಕಾಣಬಹುದು. ಆಧುನಿಕ ಯುಗವಾನದಲ್ಲೂ ಇದು ಮುಂದುವರೆಯುತ್ತಾ ಬಂದಿದೆ. ಉತ್ತರದ ಗಂಗೆಯಂತೆ, ಅಮೆರಿಕದ ಗ್ರ್ಯಾಂಡ್ ಕೆನಲ್ ನದಿಯಂತೆ ಕಾವೇರಿ ವರ್ಷ ಪೂರ್ತಿ ತುಂಬಿ ಹರಿಯಲಿ. ಕಾವೇರಿ ಆರತಿ ಮಾಡುವಾಗ ನದಿಯನ್ನು ಅಶುಚಿಗೊಳಿಸುವುದಿಲ್ಲ ಎಂಬ ಸಂಕಲ್ಪ ಮಾಡಬೇಕು. ನದಿಯ ಪಾವಿತ್ರ್ಯತೆ ಕಾಪಾಡಬೇಕು. ಪ್ರಕೃತಿಯನ್ನು ನಾಶ ಮಾಡಬಾರದು. ಪವಿತ್ರ ಭಾವನೆ ಎಲ್ಲರಲ್ಲೂ ಇರಲಿ ಎಂದು ಹೇಳಿದರು.




ಕೆಆರ್‌ಎಸ್‌ನಲ್ಲಿ ಸೋಮವಾರ ನಡೆದ ಕಾವೇರಿ ಆರತಿಯ ರಮಣೀಯ ದೃಶ್ಯ. ಮತ್ತೊಂದು ಚಿತ್ರದಲ್ಲಿ ವಿವಿಧ ಮಠಾಧೀಶರೊಂದಿಗೆ ಸುತ್ತೂರು ಶ್ರೀಗಳು.

ಶಾಸಕರಾದ ರವಿಕುಮಾರ್ ಗಣಿಗ, ದಿನೇಶ್ ಗೂಳಿಗೌಡ, ಎ.ಬಿ.ರಮೇಶ್ ಬಂಡಿಸಿದ್ದೇಗೌಡ, ಮಾಜಿ ಶಾಸಕಿ ವಿಜಯಲಕ್ಷ್ಮಮ್ಮ ಬಂಡಿಸಿದ್ದೇಗೌಡ, ಜಿಲ್ಲಾಧಿಕಾರಿ ಡಾ.ಕುಮಾರ, ಎಸ್ಪಿ ಮಲ್ಲಿಕಾರ್ಜುನ ಬಾಲದಂಡಿ, ಜಿ.ಪಂ. ಸಿಇಓ ಕೆ.ಆರ್. ನಂದಿನಿ ಹಾಗೂ ಕಾವೇರಿ ನೀರಾವರಿ ನಿಗಮದ ಮಹೇಶ್ ಮತ್ತು ಅಧಿಕಾರಿಗಳು ಉಪಸ್ಥಿತರಿದ್ದರು.

30ಕ್ಕೂ ಹೆಚ್ಚು ಸ್ವಾಮೀಜಿಗಳು ಭಾಗಿ: ಕಾವೇರಿ ಆರತಿ–4ನೇ ದಿನವಾದ ಇಂದು ಸುತ್ತೂರು ವೀರಸಿಂಹಾಸನ ಮಹಾಸಂಸ್ಥಾನ ಪೀಠಾಧ್ಯಕ್ಷ ಶ್ರೀ.ಶಿವರಾತ್ರಿ ದೇಶಿಕೇಂದ್ರ ಮಹಾಸ್ವಾಮೀಜಿ ಅವರ ಜೊತೆ ಗೂಡಿ 30ಕ್ಕೂ ಹೆಚ್ಚು ಸ್ವಾಮೀಜಿಗಳು ಬಸ್‌ನಲ್ಲಿ ಆಗಮಿಸಿ ಕಾವೇರಿ ಆರತಿ ಕಾರ್ಯಕ್ರಮದಲ್ಲಿ ಭಾಗವಹಿಸಿದರು. ಸ್ವಾಮೀಜಿ ಅವ ರನ್ನು ಗೊರವರ ಕುಣಿತ, ಕಂಸಾಳೆ, ಕೊಂಬು ಕಹಳೆ, ಮುಂತಾದ ಜನಪದ ಕಲಾತಂಡಗಳೊಂದಿಗೆ ಆತ್ಮೀಯವಾಗಿ ಮೆರವಣಿಗೆ ಮೂಲಕ ಸ್ವಾಗತಿಸಿದ್ದು ವಿಶೇಷವಾಗಿತ್ತು.

ಕರ್ನಾಟಕ ಸಂಸ್ಕೃತಿಯ ಅನಾವರಣ: ಕೆಆರ್‌ಎಸ್‌ನ ಬೃಂದಾವನದಲ್ಲಿ ಕಳೆದ ನಾಲ್ಕು ದಿನಗಳಿಂದ ನಡೆಯುತ್ತಿರುವ "ಕಾವೇರಿ ಆರತಿ" ಕರ್ನಾಟಕದ ಸಂಸ್ಕೃತಿಯ ಅನಾವರಣದ ವೇದಿಕೆಯಾಗಿ ಮಾರ್ಪಟ್ಟಿದೆ.

ಜಾನಪದ ಇತಿಹಾಸ ಹೊಂದಿರುವ ಮಂಡ್ಯ ಜಿಲ್ಲೆಯ ಸೊಗಡನ್ನು ರಾಜ್ಯದ ಜನತೆಗೆ ಉಣಬಡಿಸುವ ಮುಖಾಂತರ ಕಾವೇರಿ ಆರತಿ ರಾಜ್ಯದ ಮನೆಮಾತಾಗಲಾರಂಭಿಸಿದೆ. ನಾಲ್ಕು ದಿನಗಳಲ್ಲಿ ಲಕ್ಷಕ್ಕೂ ಅಧಿಕ ಮಂದಿ ಕಾವೇರಿ ಆರತಿಯನ್ನು ಕಣ್ತುಂಬಿಕೊಳ್ಳುವುದರ ಜೊತೆಗೆ ಕೆಆರ್‌ಎಸ್‌ನ ವಿದ್ಯುತ್ ದೀಪಾಲಂಕಾರಕ್ಕೆ ಪ್ರವಾಸಿಗರು ಮನಸೋತಿದ್ದಾರೆ. ಜಲಕ್ರೀಡೆ, ಸಂಗೀತ ಕಾರಂಜಿಯ ಜೊತೆಗೆ ಚಿಣ್ಣರ ಲೋಕವನ್ನೇ ಸೃಷ್ಟಿಸಿರುವ ಬೃಂದಾವನದಲ್ಲಿ ಸಾಂಸ್ಕೃತಿಕ ಕಾರ್ಯಕ್ರಮಗಳು ಮನಸೂರಗೊಂಡವು. ವೀರಭದ್ರನ ಕುಣಿತ, ವೀರಗಾಸೆ ಕುಣಿತ, ಪುರವಂತಿಕೆ ಕುಣಿತ ಕಾವೇರಿ ಆರತಿಯ ಸೊಬಗು ಹೆಚ್ಚಿಸಿವೆ.

ಟಿಎಪಿಸಿಎಂಎಸ್ ಚುನಾವಣೆಯಲ್ಲಿ ಜೆಡಿಎಸ್–ಬಿಜೆಪಿ ಬೆಂಬಲಿತರ ಭರ್ಜರಿ ಗೆಲುವು



ನೂತನ ನಿರ್ದೇಶಕರನ್ನು ಶಾಸಕ ಎಚ್.ಟಿ.ಮಂಜು ನೇತೃತ್ವದಲ್ಲಿ ಸನ್ಮಾನಿಸಲಾಯಿತು.

ಕೆ.ಆರ್.ಪೇಟೆ, ಸೆ.29– ತಾಲೂಕು ಟಿಎಪಿಸಿಎಂಎಸ್‌ನ 14 ಮಂದಿ ನಿರ್ದೇಶಕರ ಆಯ್ಕೆಗೆ ಭಾನುವಾರ ನಡೆದ ಚುನಾವಣೆಯಲ್ಲಿ ಜೆಡಿಎಸ್–ಬಿಜೆಪಿ ಮೈತ್ರಿ ಕೂಟವು 11 ಸ್ಥಾನಗಳಲ್ಲಿ ಭರ್ಜರಿ ಜಯ ಸಾಧಿಸಿದೆ. ಕಾಂಗ್ರೆಸ್ ಕೇವಲ 3 ಸ್ಥಾನಕ್ಕೆ ತೃಪ್ತಿ ಪಟ್ಟುಕೊಂಡಿದೆ.

ಪ್ರಾಥಮಿಕ ಕೃಷಿ ಪತ್ತಿನ ಪ್ರತಿನಿಧಿಗಳ ಮೂಲಕ ಆಯ್ಕೆಯಾಗಬೇಕಾದ ಎ.ವರ್ಗದ 6 ಸ್ಥಾನದ ಪೈಕಿ ಜೆಡಿಎಸ್ ಬೆಂಬಲಿಗರಾದ ಟಿ.ಬಲದೇವ್–16, ಹೆಚ್.ಟಿ. ಲೋಕೇಶ್–16, ಬಿ.ಎಂ.ಕಿರಣ್–25 ಕಾಂಗ್ರೆಸ್ ಬೆಂಬಲಿತ ಎಂ.ಪಿ.ಲೋಕೇಶ್–16, ಎ.ವೈ.ವಿಜಯಕುಮಾರ್–16, ಕಿಕ್ಕೇರಿ ಕಾಯಿ ಸುರೇಶ್–17 ಮತಗಳನ್ನು ಪಡೆದು ಜಯ ಸಾಧಿಸಿದ್ದಾರೆ.

ಟಿಎಪಿಸಿಎಂಎಸ್ ರೈತ ಷೇರುದಾರರಿಂದ ಆಯ್ಕೆಯಾಗಬೇಕಾದ ಬಿ.ವರ್ಗದ 8 ಸ್ಥಾನಗಳಲ್ಲಿಯೂ ಜೆಡಿಎಸ್ ಬೆಂಬಲಿತ ಅಭ್ಯರ್ಥಿಗಳು ಭರ್ಜರಿ ಜಯಸಾಧಿಸಿದ್ದಾರೆ. ಕಾಂಗ್ರೆಸ್ ಶೂನ್ಯ ಸಂಪಾದನೆ ಮಾಡಿದೆ. ಜೆಡಿಎಸ್–ಬಿಜೆಪಿ ಬೆಂಬಲಿತ ಅಭ್ಯರ್ಥಿಗಳಾದ ಸಾಮಾನ್ಯ ವರ್ಗದ ಕಿಕ್ಕೇರಿ ಕೆ.ಬಿ.ಮಧು(2532), ಶೀಳನೆರೆ ಎಸ್.ಎಲ್.ಮೋಹನ್(2438), ಬಿಸಿಎಂ.ಬಿ ವರ್ಗದ ಮಲ್ಲೇನಹಳ್ಳಿ ಎಂ.ಮೋಹನ್ (2400), ಬಿಸಿಎಂ.ಎ ವರ್ಗದ ದಿಲೀಪ್ ಕುಮಾರ್(2136), ಸಾಮಾನ್ಯ ಮಹಿಳಾ ವರ್ಗದ ಅನುವಿನಕಟ್ಟೆ ಕೆರೆಕೋಡಿ ಜ್ಯೋತಿದೇವರಾಜು(2465), ಬಂಡಿಹೊಳೆ ಬಿ.ಆರ್.ಲತಾಮಣಿ ಮಂಜುನಾಥ್ (2187), ಪರಿಶಿಷ್ಟ ಜಾತಿ ವರ್ಗದ ರಂಗನಾಥಪುರ ನಾಗರಾಜು(1937), ಪರಿಶಿಷ್ಟ ಪಂಗಡ ವರ್ಗದ ಬೊಮ್ಮೇನಹಳ್ಳಿ ಮಂಜುನಾಥ್ (1934) ಮತಗಳನ್ನು ಪಡೆದು ಬಿ ವರ್ಗದಿಂದ ಭರ್ಜರಿ ಜಯ ಸಾಧಿಸಿದ್ದಾರೆ.

ಜೆಡಿಎಸ್ ಸಂಭ್ರಮಾಚರಣೆ: ಟಿಎಪಿಸಿಎಂಎಸ್ ಚುನಾವಣೆಯಲ್ಲಿ 11 ಸ್ಥಾನಗಳಲ್ಲಿ ಜೆಡಿಎಸ್ ಅಭ್ಯರ್ಥಿಗಳು ಜಯ ಸಾಧಿಸುತ್ತಿದ್ದಂತೆಯೇ ಜೆಡಿಎಸ್ ಕಾರ್ಯಕರ್ತರು ಫಲಿತಾಂಶ ಪ್ರಕಟವಾದ ಭಾನುವಾರ ತಡರಾತ್ರಿಯೇ ಶಾಸಕ ಎಚ್.ಟಿ. ಮಂಜು ನೇತೃತ್ವದಲ್ಲಿ ಕೆಪಿಎಸ್ ಶಾಲಾ ಹೊರ ಆವರಣದಲ್ಲಿ ಪಟಾಕಿ ಸಿಡಿಸಿ, ಜೆಡಿಎಸ್ ಪರ, ಮಾಜಿ ಪ್ರಧಾನಿ ದೇವೇಗೌಡರ ಪರ, ಕೇಂದ್ರ ಸಚಿವ ಕುಮಾರಣ್ಣನ ಪರ, ಶಾಸಕರ ಪರ, ಜೈಕಾರ ಕೂಗುತ್ತಾ ಸಂಭ್ರಮಾಚರಣೆ ಮಾಡಿದರು. ಶಾಸಕರನ್ನು ಹಾಗೂ ವಿಜೇತ ಅಭ್ಯರ್ಥಿಗಳನ್ನು ಕಾರ್ಯಕರ್ತರು ಹೆಗಲ ಮೇಲೆ ಹೊತ್ತು ಕುಣಿದು ಹರ್ಷೋದ್ಗಾರ ವ್ಯಕ್ತಪಡಿಸಿದರು.

ಚುನಾವಣಾಧಿಕಾರಿಯಾಗಿ ತಹಸೀಲ್ದಾರ್ ಡಾ.ಎಸ್.ಯು.ಅಶೋಕ್, ಕೆ.ಎಸ್.ಹರೀಶ್, ಸಂಸ್ಥೆಯ ಕಾರ್ಯದರ್ಶಿ ಎಸ್.ಬೋರೇಗೌಡ, ರವಿಕುಮಾರ್ ಕಾರ್ಯನಿರ್ವಹಿಸಿದರು.

ಅಪರಿಚಿತ ವಾಹನ ಡಿಕ್ಕಿ ಹೊಡೆದು ನವಿಲು ಸಾವು



ಕೆ.ಆರ್.ಪೇಟೆ, ಸೆ.29– ಅಪರಿಚಿತ ವಾಹನ ಡಿಕ್ಕಿ ಹೊಡೆದ ಪರಿಣಾಮ ರಾಷ್ಟ್ರಪಕ್ಷಿ ನವಿಲು ಸಾವನ್ನಪ್ಪಿರುವ ಘಟನೆ ತಾಲೂಕಿನ ಸಾಧುಗೋನಹಳ್ಳಿ ಬಳಿ ನಡೆದಿದೆ.

ಸಾಧುಗೋನಹಳ್ಳಿ ಸಮೀಪವಿರುವ ಅರಣ್ಯ ಪ್ರದೇಶದಲ್ಲಿ ಒಂದು ಬದಿಯಿಂದ ಮತ್ತೊಂದು ಬದಿಗೆ ರಸ್ತೆ ದಾಟುವಾಗ ವೇಗವಾಗಿ ಬಂದಿರುವ ಅಪರಿಚಿತ ವಾಹನ ನವಿಲಿಗೆ ಡಿಕ್ಕಿ ಹೊಡೆದಿದೆ. ಪರಿಣಾಮ ತೀವ್ರ ಗಾಯಗೊಂಡ ನಮ್ಮ ರಾಷ್ಟ್ರ ಪಕ್ಷಿಯಾಗಿರುವ ನವಿಲು ಸ್ಥಳದಲ್ಲಿಯೇ ಸಾವನ್ನಪ್ಪಿರುತ್ತದೆ.

ಘಟನಾ ಸ್ಥಳಕ್ಕೆ ತಾಲೂಕು ವಲಯ ಅರಣ್ಯ ಸಂರಕ್ಷಣಾಧಿಕಾರಿ ಡಾ.ಅನಿತಾ, ತಾಲೂಕು ಪಶುವೈದ್ಯ ಇಲಾಖೆಯ ಸಹಾಯಕ ನಿರ್ದೇಶಕ ಡಾ.ಹೆಚ್.ಎಸ್. ದೇವರಾಜು ಭೇಟಿ ನೀಡಿ, ನವಿಲಿನ ಕಳೇಬರವನ್ನು ಅರಣ್ಯ ಇಲಾಖೆಯ ಕಚೇರಿಗೆ ತಂದು ಮರಣೋತ್ತರ ಪರೀಕ್ಷೆ ನಂತರ ನಿಯಮದಂತೆ ಹೂತು ಹಾಕಿದರು.

ಅಧಿಕಾರಿಗಳ ಈ ಮಾನವೀಯ ಕ್ರಮಕ್ಕೆ ತಾಲೂಕಿನ ವಿವಿಧ ಸಂಘ ಸಂಸ್ಥೆಗಳು ಮೆಚ್ಚುಗೆ ವ್ಯಕ್ತಪಡಿಸಿವೆ.

ಹಲಗೂರಲ್ಲಿ ಬೀದಿ ನಾಯಿಗಳ ದಾಳಿ: 18 ಮಂದಿಗೆ ಗಾಯ

ಹಲಗೂರು: ಪಟ್ಟಣದ ಮುಸ್ಲಿಂ ಬ್ಲಾಕ್ ಸೇರಿದಂತೆ ಹಲವೆಡೆ ಶುಕ್ರವಾರ ಸಂಜೆ ಮತ್ತು ಶನಿವಾರ ಬೆಳಿಗ್ಗೆ ಬೀದಿ ನಾಯಿ ದಾಳಿಯಿಂದ 18 ಮಂದಿ ಗಾಯಗೊಂಡಿರುವ ಘಟನೆ ಸಾರ್ವಜನಿಕರಲ್ಲಿ ಆತಂಕ ಮೂಡಿಸಿದೆ.

ಹಲಗೂರಿನ ಸುತ್ತಮುತ್ತಲಿನ ಪ್ರದೇಶಗಳಲ್ಲಿ ನಾಯಿ ಕಡಿತಕ್ಕೆ ಒಳಗಾಗಿರುವ ಬಹುತೇಕ ಗಾಯಾಳುಗಳಲ್ಲಿ ಮಕ್ಕಳು, ಯುವಕರು ಮತ್ತು ವೃದ್ಧರೂ ಸೇರಿದ್ದು, ಇವರಿಗೆ ಹಲಗೂರು ಪ್ರಾಥಮಿಕ ಆರೋಗ್ಯ ಕೇಂದ್ರದಲ್ಲಿ ಪ್ರಾಥಮಿಕ ಚಿಕಿತ್ಸೆ ನೀಡಿದ ಬಳಿಕ ಮಳವಳ್ಳಿ ತಾಲೂಕು ಆಸ್ಪತ್ರೆಗೆ ದಾಖಲಿಸಲಾಗಿದೆ.

ಗಾಯಾಳುಗಳ ವಿವರ: ಗಾಯಾಳುಗಳಲ್ಲಿ ಮಕ್ಕಳಾದ ಅದಿತ್ ಕುಮಾರ್, ಸ್ವೀಟಿ ಕುಮಾರಿ, ಮೊಹಮದ್ ನಾಸಿರ್, ಶಾಫ್, ಯಾಸೀನ್, ಅಯಿಷಾ ಭಾನು, ಸಿಮ್ರಾನ್, ಹನೀಫ್, ಯುವಕರಾದ ಮುರುಗನ್, ಗಣೇಶ್, ಮಂಜು, ಮುಮಿದ್ ಅಲಂ, ಅಮರ್, ಪುಟ್ಟಸ್ವಾಮಿ, ದಳವಾಯಿ ಕೋಡಿಹಳ್ಳಿ ಪುಟ್ಟಸ್ವಾಮಿ, ಕೊಳ್ಳೇಗಾಲ ಮಂಜು ಹಾಗೂ ಮಂಡ್ಯ ಮೂಲದ ನಾಗೇಶ್ ಸೇರಿದ್ದಾರೆ.

ದಾಳಿ ಹೇಗೆ ನಡೆಯಿತು?: ಮಾಹಿತಿಯ ಪ್ರಕಾರ, ಶುಕ್ರವಾರ ಸಂಜೆ ಮಕ್ಕಳು ಆಟವಾಡುತ್ತಿದ್ದ ವೇಳೆ ಬೀದಿ ನಾಯಿಗಳ ಹಿಂಡು ಏಕಾಏಕಿ ದಾಳಿ ನಡೆಸಿತು. ಪರಿಣಾಮವಾಗಿ ಹಲವು ಮಕ್ಕಳು ಗಾಯಗೊಂಡರು. ಇದೇ ವೇಳೆ ಮನೆ ನಿರ್ಮಾಣಕ್ಕಾಗಿ ಬಂದಿದ್ದ ಕೂಲಿ ಕಾರ್ಮಿಕರ ಮೇಲೂ ದಾಳಿ ನಡೆದಿದೆ. ಶನಿವಾರ ಬೆಳಿಗ್ಗೆಯೂ ಸಹ ದಾಳಿ ಮುಂದುವರಿದಿದ್ದು, ವೃದ್ಧರ ಮೇಲೂ ನಾಯಿಗಳು ಹಲ್ಲೆ ನಡೆಸಿದ ಘಟನೆ ದಾಖಲಾಗಿದೆ.

ಶ್ರೀ ಸಣ್ಣಕ್ಕಿರಾಯಸ್ವಾಮಿ ಬಸವಪ್ಪ ಸ್ಮಾರಕಕ್ಕೆ ಭೂಮಿಪೂಜೆ



ಶ್ರೀ ಸಣ್ಣಕ್ಕಿರಾಯಸ್ವಾಮಿ ಬಸವಪ್ಪ ಸ್ಮಾರಕ ನಿರ್ಮಾಣಕ್ಕೆ ಕೆಂಗೇರಿ ವಿಶ್ವ ಒಕ್ಕಲಿಗರ ಮಠದ ಪೀಠಾಧ್ಯಕ್ಷ ನಿಶ್ಚಲಾನಂದನಾಥ ಸ್ವಾಮೀಜಿ ಗುದ್ದಲಿ ಪೂಜೆ ನೆರವೇರಿಸಿದರು.

ಭಾರತೀನಗರ, ಸೆ.29–ಇಲ್ಲಿಗೆ ಸಮೀಪದ ದೊಡ್ಡರಸಿನಕೆರೆ ಶ್ರೀಸಣ್ಣಕ್ಕಿರಾಯ ಸ್ವಾಮಿ ಬಸವಪ್ಪ ನಿಧನಗೊಂಡ ಹಿನ್ನೆಲೆಯಲ್ಲಿ ಶ್ರೀ ಸಣ್ಣಕ್ಕಿರಾಯಸ್ವಾಮಿ ಅಭಿವೃದ್ಧಿ ಸೇವಾ ಸಮಿತಿ ಟ್ರಸ್ಟ್ ದೇವಾಲಯದ ಆವರಣ ದಲ್ಲಿ ಹಮ್ಮಿಕೊಂಡಿದ್ದ ಸ್ಮಾರಕ ನಿರ್ಮಾಣಕ್ಕೆ ಕೆಂಗೇರಿ ವಿಶ್ವ ಒಕ್ಕಲಿಗರ ಮಠದ ಪೀಠಾಧ್ಯಕ್ಷ ಶ್ರೀ ನಿಶ್ಚಲಾನಂದ ನಾಥಸ್ವಾಮೀಜಿ ಗುದ್ದಲಿ ಪೂಜೆ ನೆರವೇರಿಸಿದರು.

ಬಳಿಕ ಶ್ರೀ ನಿಶ್ಚಲಾನಂದನಾಥಸ್ವಾಮೀಜಿ ಅವರು ಮಾತನಾಡಿ, ಜನಗಳಲ್ಲಿ ಧಾರ್ಮಿಕ ಭಾವನೆ ಮೂಡಬೇಕು. ಪ್ರಸ್ತುತ ದಿನದಲ್ಲಿ ಯುವಕರಲ್ಲಿ ದೈವಭಕ್ತಿ ಕಡಿಮೆಯಾಗುತ್ತಿದೆ. ಹಿರಿಯರು ಗ್ರಾಮಗಳಲ್ಲಿ ದೇವಸ್ಥಾನವನ್ನು ನಿರ್ಮಾಣ ಮಾಡಿದ್ದಾರೆ. ಶ್ರೀ ಸಣ್ಣಕ್ಕಿರಾಯ ಸ್ವಾಮಿ ಶಕ್ತಿ, ಮಹಿಮೆ ಬಹಳ ದೊಡ್ಡದಾಗಿದೆ ಎಂದರು. ಶ್ರೀ ಸಣ್ಣಕ್ಕಿರಾಯಸ್ವಾಮಿ ಅಭಿವೃದ್ಧಿ ಸೇವಾ ಸಮಿತಿ ಟ್ರಸ್ಟ್ ಅಧ್ಯಕ್ಷ ಜಯಪ್ರಕಾಶ್‌ಗೌಡ, ಟ್ರಸ್ಟ್ ಉಪಾಧ್ಯಕ್ಷ ಹೊನ್ನೇಗೌಡ, ಪ್ರಧಾನ ಕಾರ್ಯದರ್ಶಿ ಕಾಳೇಗೌಡ, ದೊಡ್ಡೇಗೌಡ, ಅಭಿಜಿತ್, ರವಿಕುಮಾರ್, ಗೌಡಯ್ಯನದೊಡ್ಡಿ ಚಿಕ್ಕಮರೀಗೌಡ, ಅರ್ಕೇಶ್, ನಾಗೇಗೌಡ ಸೇರಿದಂತೆ ಹಲವರಿದ್ದರು.

ಒಂದನೇ ಪುಟದಿಂದ

ಕುಡಿಯುವ ನೀರು ಕಲ್ಪಿಸಲು ಸರ್ಕಾರ ನಿರ್ಧಾರ

ವಿದ್ಯುತ್ ಮತ್ತು ನೀರಿನ ಸಂಪರ್ಕ ನೀಡುವ ಕುರಿತು ತೀರ್ಮಾನ ಕೈಗೊಳ್ಳುತ್ತೇವೆ ಎಂದರು. ಉತ್ತರ ಪ್ರದೇಶದವರೊಬ್ಬರು ಸಲ್ಲಿಸಿದ ಸಾರ್ವಜನಿಕ ಹಿತಾಸಕ್ತಿ ಅರ್ಜಿ ಮೇಲೆ ತೀರ್ಪು ನೀಡಲಾಗಿದ್ದು, ಸುಪ್ರೀಂಕೋರ್ಟ್ ತೀರ್ಪು ಎಲ್ಲ ರಾಜ್ಯಗಳಿಗೂ ಅನ್ವಯವಾಗಲಿದೆ. ಕಾನೂನಿನ ಅರಿವಿಲ್ಲದೆ ಸಾಲ ಮಾಡಿ ಮನೆ ಕಟ್ಟಿದ್ದಾರೆ. ಅಂತಹವರ ಮನೆಗಳನ್ನು ನೆಲಸಮ ಮಾಡಲು ಸಾಧ್ಯವಾಗದು. ಕಾನೂನು ಚೌಕಟ್ಟಿನಲ್ಲಿ ಒಂದು ಬಾರಿಗೆ ವಿನಾಯಿತಿ ನೀಡಲು ಸರ್ಕಾರ ಮುಂದಾಗಿದೆ ಎಂದರು.

ಭೂಸ್ವಾಧೀನ ವ್ಯವಸ್ಥೆ

ಹಾಗೆಯೇ ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರ, ಬೆಂಗಳೂರು ಮಹಾನಗರ ಪ್ರದೇಶ ಅಭಿವೃದ್ಧಿ ಪ್ರಾಧಿಕಾರ, ಭಾರತೀಯ ರಾಷ್ಟ್ರೀಯ ಹೆದ್ದಾರಿ ಪ್ರಾಧಿಕಾರ ಮತ್ತು ಕರ್ನಾಟಕ ರಾಜ್ಯ ಹೆದ್ದಾರಿ ಸುಧಾರಣಾ ಯೋಜನೆ ಸೇರಿವೆ. ಇದು ಮೆಟ್ರೋ, ಕೆ–ರೈಡ್, ಕರ್ನಾಟಕ ವಸತಿ ಮಂಡಳಿ ಮತ್ತು ಕರ್ನಾಟಕ ಕೈಗಾರಿಕಾ ಪ್ರದೇಶ ಅಭಿವೃದ್ಧಿ ಮಂಡಳಿಯನ್ನು ಸಹ ಒಳಗೊಳ್ಳುತ್ತದೆ. ಯುಎಲ್‌ಎಂಎಸ್ ಉದ್ಘಾಟಿಸಿ ಮಾತನಾಡಿದ ಕಂದಾಯ ಸಚಿವ ಕೃಷ್ಣ ಬೈರೇಗೌಡ, ಈ ಮಾಡ್ಯೂಲ್ ಭೂಮಾಲೀಕರು ಮತ್ತು ಬಾಧಿತ ಕುಟುಂಬಗಳಿಗೆ ಸ್ವಾಧೀನ ಪ್ರಕ್ರಿಯೆಯಲ್ಲಿ ಸಂಪೂರ್ಣ ಪಾರದರ್ಶಕತೆಯನ್ನು ಖಚಿತಪಡಿಸುತ್ತದೆ ಎಂದರು. ವಿವಿಧ ತಂತ್ರಜ್ಞಾನಗಳ ಏಕೀಕರಣದೊಂದಿಗೆ ಮತ್ತಷ್ಟು ಮಾಡ್ಯೂಲ್‌ಗಳನ್ನು ಹಂತ ಹಂತವಾಗಿ ಪ್ರಾರಂಭಿಸಲಾಗುತ್ತದೆ ಎಂದು ಸಚಿವರು ತಿಳಿಸಿದರು.

ಬೆಂಗಳೂರು–ಮೈಸೂರು ಬಸ್ ದರ ಏರಿಕೆ

ಸಾರಿಗೆ ಇಲಾಖೆ ಮೈಸೂರು ಮಾರ್ಗದ ಕೆಎಸ್‌ಆರ್‌ಟಿಸಿ ಬಸ್ ದರವನ್ನ ಏರಿಕೆ ಮಾಡಿದೆ. ಎಲ್ಲಾ ಕೆಎಸ್‌ಆರ್‌ಟಿಸಿ ಬಸ್ ದರ ಬರೋಬ್ಬರಿ 20 ರೂಪಾಯಿ ಏರಿಕೆ ಮಾಡಿದೆ. ಇನ್ನೂ ಸಾಮಾನ್ಯ ಕೆಎಸ್‌ಆರ್‌ಟಿಸಿ ಬಸ್, ವೇಗ ದೂತ, ತಡೆರಹಿತ, ರಾಜಹಂಸ, ಐರಾವತ ಸೇರಿದಂತೆ ಎಲ್ಲಾ ಬಸ್‌ಗಳ ದರ ಏರಿಕೆ ಆಗಿದೆ. ದಸರಾ ಮುಗಿಯುವವರೆಗೂ ದರ ಏರಿಕೆ ಯಥಾಸ್ಥಿತಿಯಲ್ಲಿ ಮುಂದುವರೆಯಲಿದೆ.

ಬಸ್ ಟಿಕೆಟ್ ದರ ವಿವರ

170 ರೂ ಇದ್ದ ಕರ್ನಾಟಕ ಸಾರಿಗೆ ವೇಗದೂತ ದರ ಈಗ 190 ರೂ.ಗೆ ಏರಿಕೆ
ರಾಜಹಂಸ–270ರಿಂದ 290 ರೂ.
ಐರಾವತ–430ರಿಂದ 450 ರೂ.
ತಡೆರಹಿತ ಸಾರಿಗೆ–210ರಿಂದ 240 ರೂ.
ಐರಾವತ ಕ್ಲಬ್ ಕ್ಲಾಸ್–440ರಿಂದ 460 ರೂ.

ಒಕ್ಕಲಿಗರ ಸಂಘ ಒತ್ತಾಯ

ಜನಸಂಖ್ಯೆಯ ಸಮೀಕ್ಷೆ ಮಾಡಲು ಸಾಧ್ಯವಿಲ್ಲ. ಜನರಲ್ಲಿ ಗೊಂದಲ ಉಂಟು ಮಾಡಿ ತಪ್ಪು ಅಂಕಿ–ಅಂಶಗಳನ್ನು ಸಂಗ್ರಹಿಸುವ ಬದಲು ಸಮರ್ಪಕ ಮಾಹಿತಿ ಪಡೆಯಲು ಸಮೀಕ್ಷೆ ಕಾಲಾವಕಾಶ ವಿಸ್ತರಿಸಿ ಎಂದು ಆಗ್ರಹಿಸಿದರು. ಅಗತ್ಯ ಕಂಡುಬಂದಲ್ಲಿ ಮಾತ್ರ ನಿಮ್ಮ ಅಂಕಿ–ಅಂಶಗಳನ್ನು ನೀಡಿ, ನ್ಯಾಯಾಲಯದ ಆದೇಶ ದಂತೆ ದಾಖಲೆಗಳನ್ನು ಒತ್ತಾಯಪೂರ್ವಕವಾಗಿ ಪಡೆಯಲಾಗದು. ಕಡ್ಡಾಯವಾಗಿ ಸಮೀಕ್ಷೆಯಲ್ಲಿ ಪಾಲ್ಗೊಳ್ಳುವಂತೆ ವೀರಶೈವ ಮತ್ತು ಒಕ್ಕಲಿಗ ಸಮುದಾಯದಕ್ಕೆ ಕರೆ ನೀಡಿದ ಸಂಘಟನೆಗಳು, ತಮ್ಮ ತಮ್ಮ ಧರ್ಮ, ಜಾತಿ ಹಾಗೂ ಉಪಜಾತಿ ಬಗ್ಗೆ ಮಾಹಿತಿ ನೀಡಿ. ಮಾಹಿತಿ ನೀಡದಿದ್ದರೆ ಸಮುದಾಯದ ಖಚಿತ ಜನಸಂಖ್ಯೆ ಬಗ್ಗೆ ತಿಳಿಯುವುದಿಲ್ಲ. ಆದ್ದರಿಂದ ನಿಮ್ಮ ಭಾಗವಹಿಸುವಿಕೆ ಸೂಕ್ತ ಎಂಬುದು ನಮ್ಮ ಅನಿಸಿಕೆ. ರಾಜ್ಯ ಹೈಕೋರ್ಟ್‌ನ ಷರತ್ತುಬದ್ಧ ಮಧ್ಯಂತರ ಆದೇಶದಂತೆ ಗಣತಿಯ ದತ್ತಾಂಶವನ್ನು ಸರ್ಕಾರ ಸೇರಿದಂತೆ ಯಾರಿಗೂ ಬಹಿರಂಗಪಡಿಸಬಾರದು. ಇದರ ಗೌಪ್ಯತೆಯನ್ನು ಹಿಂದುಳಿದ ವರ್ಗಗಳ ಆಯೋಗ ರಕ್ಷಿಸಬೇಕು. ಜನತೆ ಸ್ವಪ್ರೇರಣೆಯಿಂದ ನೀಡಿದರಷ್ಟೇ ಮಾಹಿತಿ ಸಂಗ್ರಹಿಸಬೇಕು. ಜೊತೆಗೆ ಸಾರ್ವಜನಿಕರಲ್ಲಿ ಅಗತ್ಯ ಅರಿವು ಮೂಡಿಸುವಂತೆಯೂ ನ್ಯಾಯಾಲಯ ಆದೇಶಿಸಿದೆ. ಮಾಹಿತಿ ನೀಡಲೇಬೇಕೆಂದು ಸಮೀಕ್ಷೆದಾರರು ಜನರ ಮೇಲೆ ಒತ್ತಡ ಹಾಕು ವಂತಿಲ್ಲ ಎಂಬ ನ್ಯಾಯಾಲಯದ ಆದೇಶದ ಹಿನ್ನೆಲೆಯಲ್ಲಿ ಜಾತಿ ಮತ್ತು ಉಪಜಾತಿಗಳನ್ನು ಬರೆಸಿದ ನಂತರ ಉಳಿದ ವಿಚಾರಗಳನ್ನು ನೀಡುವುದು ನಿಮ್ಮಗಳ ವಿವೇಚನೆಗೆ ಬಿಟ್ಟಿದ್ದು ಎಂದರು.

ಕಾಂಗ್ರೆಸ್ ಸರ್ಕಾರದಲ್ಲಿ ದುಪ್ಪಟ್ಟು ಕಮಿಷನ್!

ಹಲವು ಆರೋಪಗಳನ್ನು ಸಂಘ ಮಾಡಿದೆ. ಸಂಬಂಧಪಟ್ಟ ಸಚಿವರು ಹಾಗೂ ಕಾರ್ಯದರ್ಶಿಗಳೊಂದಿಗೆ ಸಭೆ ನಡೆಸಿದರೂ ಯಾವುದೇ ಉಪಯೋಗ ಆಗಿಲ್ಲ. ಇಲಾಖೆಗಳು ಹಿರಿತನ ಮತ್ತು ಪಾರದರ್ಶಕತೆಯ ಕಾನೂನುಗಳನ್ನು ನಿರ್ಲಕ್ಷಿಸಿ, ತಮ್ಮದೇ ಆದ ಸೂತ್ರವನ್ನು ರೂಪಿಸುತ್ತಿವೆ. ವಿಶೇಷ ಗುತ್ತಿಗೆಗಳ (ಎಒಸಿ) ಅಡಿಯಲ್ಲಿ ಮೂರು ತಿಂಗಳಿಗೊಮ್ಮೆ ಬಾಕಿ ಉಳಿದಿರುವ ಬಾಕಿ ಬಿಲ್‌ಗಳಲ್ಲಿ ಕೇವಲ ಶೇ.15ರಿಂದ 20ರಷ್ಟನ್ನು ಮಾತ್ರ ಬಿಡುಗಡೆ ಮಾಡಲಾಗುತ್ತಿದೆ ಎಂದು ಪತ್ರದಲ್ಲಿ ಆರೋಪಿಸಲಾಗಿದೆ.

ಜಂಬೂಸವಾರಿ ತಾಲೀಮು

ಏಳು ಫಿರಂಗಿ ಬಳಸಿ, ತಲಾ ಮೂರು ಸುತ್ತಿನಂತೆ ಒಂದೇ ನಿಮಿಷದಲ್ಲಿ 21 ಬಾರಿ ಕುಶಾಲತೋಪು ಸಿಡಿಸಲಾಯಿತು.

ನಂತರ ಅಂಬಾರಿ ಹೊತ್ತ ಆನೆ ಕುಮ್ಕಿ ಆನೆಗಳೊಂದಿಗೆ ಜಂಬೂಸವಾರಿ ಮೆರವಣಿಗೆ ಸಾಗುವ ಮಾರ್ಗದಲ್ಲಿ ಕೋಟೆ ಆಂಜನೇಯಸ್ವಾಮಿ ದೇವಾಲಯದ ದ್ವಾರದವರೆಗೂ ಸಾಗಿತು. ಈ ವೇಳೆ ಅಶ್ವ ಪಡೆ, ಪೊಲೀಸ್ ಬ್ಯಾಂಡ್ ವಾದನದ ತಂಡ, ಪಥಸಂಚಲನದ ಪೊಲೀಸ್ ತಂಡ ಸಹ ಹೆಜ್ಜೆ ಹಾಕಿದವು. ಮೊದಲ ಜಂಬೂ ಸವಾರಿ ತಾಲೀಮು ಯಶಸ್ವಿಯಾಗಿಯೂ, ಕರಾರುವಕ್ಕಾಗಿಯೂ ನಡೆಯಿತು. ಮಂಗಳವಾರ ಅಂತಿಮ ಹಂತದ ತಾಲೀಮು ನಡೆಸಿ, ಲೈನ್ ಅಪ್ ಮಾಡಲಾಗುತ್ತದೆ. ಈ ವೇಳೆ ಅರಮನೆ ಭದ್ರತಾ ವಿಭಾಗದ ಎಸಿಪಿ ಹೆಚ್.ಎಂ.ಚಂದ್ರಶೇಖರ್, ಆರ್‌ಎಫ್‌ಗಳಾದ ನದೀಮ್, ಸಂತೋಷ್ ಹೂಗಾರ್, ಪಶುವೈದ್ಯ ಡಾ.ಆದರ್ಶ್, ಸಹಾಯಕರಾದ ರಂಗರಾಜು, ಅಕ್ರಂ ಸೇರಿದಂತೆ ಇನ್ನಿತರರು ಉಪಸ್ಥಿತರಿದ್ದರು.

ಉಚಿತ ತಪಾಸಣೆ, ಚಿಕಿತ್ಸಾ ಶಿಬಿರ

ಮೈಸೂರು: ಸರ್ಕಾರಿ ಆಯುರ್ವೇದ ವೈದ್ಯಕೀಯ ಮಹಾವಿದ್ಯಾಲಯ ಮತ್ತು ಆಸ್ಪತ್ರೆ, ನ್ಯೂ ಸಯ್ಯಾಜಿರಾವ್ ರಸ್ತೆ, ವಿಶ್ವೇಶ್ವರಯ್ಯ ವೃತ್ತ, ಮೈಸೂರು ಇಲ್ಲಿನ ಪಂಚಕರ್ಮ ಹೊರರೋಗಿ ವಿಭಾಗದ ರೂಂ ನಂ.14ರಲ್ಲಿ ಅ.31ರವರೆಗೆ ತಜ್ಞ ವೈದ್ಯರಿಂದ ಈ ಕೆಳಕಂಡ ಖಾಯಿಲೆಗಳಿಗೆ ಉಚಿತ ತಪಾಸಣೆ ಮತ್ತು ವಿಶೇಷ ಚಿಕಿತ್ಸಾ ಶಿಬಿರವನ್ನು ಬೆಳಗ್ಗೆ 9ರಿಂದ ಮಧ್ಯಾಹ್ನ 1ರವರೆಗೆ ನಡೆಸಲಾಗುವುದು ಹಾಗೂ ಈ ಶಿಬಿರವನ್ನು ಉಚಿತ ಆಯುರ್ವೇದ ಚಿಕಿತ್ಸೆಯನ್ನು ನೀಡಲಾಗುವುದು.

ಅಲ್ಪ ವೀರ್ಯಾಣು (ಪುರುಷ ಬಂಜೆತನ) ಕಾಯಿಲೆಗೆ ಚಿಕಿತ್ಸೆ ನೀಡುವ ವೈದ್ಯರು ಡಾ. ಶ್ರವಣ್ ಕುಮಾರ್ ಮದ್ದಿ ಇವರ ದೂ.ಸಂ: 8073963348, ಭುಜ ಸಂದಿ ನೋವು ಕಾಯಿಲೆಗೆ ಚಿಕಿತ್ಸೆ ನೀಡುವ ವೈದ್ಯರು ಡಾ. ರಿಷಬ್ ಇವರ ದೂ.ಸಂ: 8076891463, ಮೂತ್ರಕೋಶದ ಕಲ್ಲು ಕಾಯಿಲೆಗೆ ಚಿಕಿತ್ಸೆ ನೀಡುವ ವೈದ್ಯರು ಡಾ. ಶಾರದ ಎಂ ಇವರ ದೂ.ಸಂ: 7996048943, ರಕ್ತನಾಳಗಳ ಉಬ್ಬುವಿಕೆ ಕಾಯಿಲೆಗೆ ಚಿಕಿತ್ಸೆ ನೀಡುವ ವೈದ್ಯರು ಡಾ. ಮೇಘಶ್ರೀ ಜೆ.ಎಸ್ ಇವರ ದೂ.ಸಂ: 9148247571, ಕಿಟಿಬ ಚರ್ಮರೋಗ ಕಾಯಿಲೆಗೆ ಚಿಕಿತ್ಸೆ ನೀಡುವ ಡಾ.ಸೌಮ್ಯ ಇವರ ಮೊ: 9663256892 ಸಂಪರ್ಕಿಸಿ.

ಭಾರತ ಆಹಾರ ಸಂಸ್ಕರಣೆಯಲ್ಲಿ ಮೊದಲ ಸ್ಥಾನಕ್ಕೆ ಬರುವ ಕಾರ್ಯ 10 ವರ್ಷದೊಳಗೆ ಆಗಬೇಕಿದೆ

ಸಿಎಸ್‌ಐಆರ್ ಸಂಸ್ಥಾಪನಾ ದಿನಾಚರಣೆಯಲ್ಲಿ ಎಎಸ್‌ಟಿಐಎಫ್ ಅಧ್ಯಕ್ಷ ಡಾ. ಡಬ್ಲ್ಯೂ.ಸೆಲ್ವಮೂರ್ತಿ ಪ್ರತಿಪಾದನೆ



ಎಎಸ್‌ಟಿಐಎಫ್ ಅಧ್ಯಕ್ಷ ಡಾ.ಡಬ್ಲ್ಯೂ. ಸೆಲ್ವಮೂರ್ತಿ ಮಾತನಾಡಿದರು.

ಮೈಸೂರು,ಸೆ.29(ವಿವಿಹೆಚ್)– ಪ್ರಸಕ್ತ ಭಾರತವು ಆಹಾರ ಸಂಸ್ಕರಣೆಯಲ್ಲಿ ಜಗತ್ತಿಗೇ 6ನೇ ಸ್ಥಾನದಲ್ಲಿದೆ. ಅದು ಸಾಕಾಗುವುದಿಲ್ಲ. ನಾವು ನಂ.1 ಆಗುವತ್ತ ಕಾರ್ಯಪ್ರವೃತ್ತರಾಗಬೇಕು ಎಂದು ಎಎಸ್‌ಟಿಐಎಫ್ ಅಧ್ಯಕ್ಷ ಡಾ. ಡಬ್ಲ್ಯೂ.ಸೆಲ್ವಮೂರ್ತಿ ತಿಳಿಸಿದರು.

ಮೈಸೂರಿನ ಸಿಎಸ್‌ಐಆರ್–ಕೇಂದ್ರೀಯ ಆಹಾರ ತಂತ್ರಜ್ಞಾನ ಸಂಶೋಧನಾಲಯದ ವತಿಯಿಂದ ಸೋಮವಾರ ಸಿಎಫ್‌ಟಿಆರ್‌ಐನ ಐಎಫ್‌ಟಿಟಿಸಿ ಸಭಾಂಗಣದಲ್ಲಿ ಆಯೋಜಿಸಲಾಗಿದ್ದ 84ನೇ ಸಿಎಸ್‌ಐಆರ್ ಸಂಸ್ಥಾಪನಾ ದಿನಾಚರಣೆ ಕಾರ್ಯಕ್ರಮದಲ್ಲಿ ಮಾತನಾಡಿದರು.

ದೇಶದ ಉದ್ಯಮಗಳಿಗೆ ಕೇಂದ್ರೀಯ ಆಹಾರ ತಂತ್ರಜ್ಞಾನ ಸಂಶೋಧನಾಲಯ (ಸಿಎಫ್‌ಟಿಆರ್‌ಐ)ಸೇರಿದಂತೆ ಕೇಂದ್ರೀಯ ವೈಜ್ಞಾನಿಕ ಮತ್ತು ಕೈಗಾರಿಕಾ ಸಂಶೋಧನಾ ಮಂಡಳಿ (ಸಿಎಸ್‌ಐಆರ್) ಅಡಿ ಬರುವ ಕೇಂದ್ರೀಯ ಸಂಸ್ಥೆಗಳು ಮಾದರಿಯಾಗಿವೆ. ಸಂಶೋಧನೆ, ಆವಿಷ್ಕಾರದ ಮೂಲಕ ದೇಶವನ್ನು ಕಟ್ಟಿವೆ ಎಂದರು.

ಕಳೆದ 76 ವರ್ಷದಲ್ಲಿ ಸಿಎಫ್‌ಟಿಆರ್‌ಐನ ಆಹಾರ ಸಂಶೋಧನೆಯು ಸಾಮಾನ್ಯ ನಾಗರಿಕನಿಗೂ ತಲುಪಿದೆ. ವಿಕಸಿತ ಭಾರತಕ್ಕೆ ಆಹಾರ ಮತ್ತು ಪೌಷ್ಠಿಕಾಂಶ ಭದ್ರತೆಯ ಪಾತ್ರ ಕುರಿತಾದ ವಿಷಯ ಮಂಡನೆ ಮಾಡಿದ ಅವರು, ಮುಂದಿನ 5 ವರ್ಷ ಇಲ್ಲ 10 ವರ್ಷಗಳ ಒಳಗಾಗಿ ಆಹಾರ ಸಂಸ್ಕರಣೆಯಲ್ಲಿ 6ನೇ ಸ್ಥಾನದಿಂದ ಮೊದಲ ಸ್ಥಾನಕ್ಕೆ ಹೇಗೆ ಬರಬೇಕು ಎಂಬುದನ್ನು ಅಂಕಿ ಅಂಶಗಳು, ನೀಲನಕ್ಷೆಗಳನ್ನು ತಯಾರಿಸಿ ಪರಿಷ್ಕರಿಸಬೇಕು ಎಂದರು.

ವಿಕಸಿತ ಭಾರತದ ಗುರಿ ಮುಟ್ಟಲು ಅಮಿಟಿ, ಸಿಎಸ್‌ಐಆರ್ ಹಾಗೂ ಸಿಎಫ್‌ಟಿಆರ್‌ಐ ಜೊತೆಯಾಗುವ ಮೂಲಕ ವೈಯಕ್ತಿಕವಾಗಿ, ಸಂಘಟನೆ ಮತ್ತು ಸಂಸ್ಥೆಯ ಸುಧಾರಣೆಯಾಗಿ ಮೊದಲು ನಾವು ನಮ್ಮನ್ನು ಸುಧಾರಿಸಿಕೊಳ್ಳಬೇಕು. ನಂತರ ಸಿಎಸ್‌ಐಆರ್–ಸಿಎಫ್‌ಟಿಆರ್‌ಯ ವಿಜ್ಞಾನಿಗಳು ಒಟ್ಟಾಗಿ ಕುಳಿತು ಸುದೀರ್ಘವಾಗಿ ಚರ್ಚಿಸಿ ಮುನ್ನುಗ್ಗಬೇಕು ಎಂದು ಹೇಳಿದರು.

ನಮ್ಮ ದೇಶದಿಂದ ಜಪಾನ್, ಯುರೋಪ್ ಹಾಗೂ ಅಮೆರಿಕಾ ಸೇರಿದಂತೆ ಹೊರದೇಶಗಳಿಗೆ ಶೇ.23 ರಷ್ಟು ಆಹಾರ ರಫ್ತಾಗುತ್ತಿದೆ. ಆಹಾರ, ರಫ್ತು ಸೇವೆಗಳಲ್ಲಿ ಅತೀ ಪ್ರಮುಖ ಅಂಗವಾಗಿದೆ. ಇದರೊಂದಿಗೆ ಪ್ರಪಂಚದಾದ್ಯಂತ ಇತರೆ ದೇಶಗಳಿಗೆ ಆಹಾರ ರಫ್ತು ಮಾಡುವ ಮೂಲಕ ನಮ್ಮ ದೇಶದ ಆರ್ಥಿಕ ಅಭಿವೃದ್ಧಿಗೆ ಹೇಗೆ ಸಹಕರಿಸಬೇಕು ಎಂಬುದರ ಬಗ್ಗೆ ಸಲಹೆ ನೀಡಿದರು.

ವಿಕಸಿತ ಭಾರತಕ್ಕಾಗಿ, ನಮ್ಮ ಮುಂದಿನ ಪೀಳಿಗೆಗಳ ಭವಿಷ್ಯಕ್ಕಾಗಿ ನೈಸರ್ಗಿಕ ಸಂಪನ್ಮೂಲಗಳನ್ನು ಸಂರಕ್ಷಿಸುವ ಅಗತ್ಯವಿದೆ ಎಂದೂ ಇದೇ ವೇಳೆ ತಿಳಿಸಿದರು.

ಕಾರ್ಯಕ್ರಮದಲ್ಲಿ ಸಿಎಸ್‌ಐಆರ್–ಸಿಎಫ್‌ಟಿಆರ್‌ಐ ನಿರ್ದೇಶಕ ಡಾ.ಗಿರಿಧರ್ ಪರ್ವತಮ್, ಸಿಎಫ್‌ಟಿಆರ್‌ಐ ನಿರ್ದೇಶಕ ಪ್ರೊ.ಗಿರಿಧರ್ ಪರ್ವತಂ, ವಿಜ್ಞಾನಿಗಳಾದ ಕೆ.ರವಿಕುಮಾರ್, ಮ್ಯಾಶೆ, ಅಶುತೋಷ್ ಇನಾಂದಾರ್, ಕೆ.ಜ್ಯೋತಿ ಇದ್ದರು.

ದಸರಾ 'ಆಹಾರ ಮೇಳ' 3 ದಿನ ವಿಸ್ತರಣೆ

ಅ.2ಕ್ಕೆ ಅಂತ್ಯವಾಗಬೇಕಿತ್ತು; ಅ.5ರವರೆಗೆ ಇರಲಿದೆ



ಆಹಾರ ಮೇಳದಲ್ಲಿ ತಮಗಿಷ್ಟದ ಖಾದ್ಯ ಸವಿಯುತ್ತಿರುವ ಜನರು.

ಮೈಸೂರು,ಸೆ.29(ವಿವಿಹೆಚ್)– ದಸರಾ ಮುಗಿದರೂ ಮೈಸೂರಿಗೆ ಬರುವ ಪ್ರವಾಸಿಗರ ಸಂಖ್ಯೆಯೇನೂ ಕಡಿಮೆಯಾಗುವುದಿಲ್ಲ. ಹೀಗಾಗಿ ಪ್ರವಾಸಿಗರನ್ನು ಸೆಳೆಯುವ ಉದ್ದೇಶದಿಂದ ಈ ಬಾರಿಯ ಆಹಾರ ಮೇಳವನ್ನು ಮೂರು ದಿನಗಳ ಕಾಲ ವಿಸ್ತರಿಸಲಾಗಿದೆ.

ಮೈಸೂರು ದಸರಾದ ಪ್ರಮುಖ ಆಕರ್ಷಣೆಯಾದ ದಸರಾ ದೀಪಾಲಂಕಾರ ಕಣ್ತುಂಬಿಕೊಳ್ಳಲು ರಾತ್ರಿ ವೇಳೆ ಮೈಸೂರಿಗೆ ಪ್ರವಾಸಿಗರ ದಂಡೇ ಆಗಮಿಸಲಿದೆ. ಪ್ರವಾಸಿಗರ ಆಗಮನ ಮುಂದುವರೆಯುವುದರಿಂದ, ಜಿಲ್ಲಾಡಳಿತವು ಆಹಾರ ಮೇಳದ ಅವಧಿಯನ್ನು ಅ.5ರವರೆಗೆ ವಿಸ್ತರಿಸಿದೆ. ಈ ಹಿನ್ನೆಲೆಯಲ್ಲಿ ಮೈಸೂರಿಗೆ ಬರುವ ಪ್ರವಾಸಿಗರನ್ನು ದೃಷ್ಟಿಯಲ್ಲಿರಿಸಿಕೊಂಡು ಜಿಲ್ಲಾಡಳಿತ ಆಹಾರ ಮೇಳದ ಅವಧಿಯನ್ನು ವಿಸ್ತರಿಸಿದೆ. ಪ್ರತಿ ವರ್ಷ ಜಂಬೂಸವಾರಿ ದಿನದಂದೇ ಅಂತ್ಯಗೊಳ್ಳುತ್ತಿದ್ದ ಆಹಾರ ಮೇಳದ ಅವಧಿಯನ್ನು ಈ ಬಾರಿ ವಿಸ್ತರಿಸಲಾಗುತ್ತಿದೆ. ವಾರಾಂತ್ಯದ ಭಾನುವಾರದವರೆಗೂ ಮೈಸೂರಿಗೆ ಬರುವ ಪ್ರವಾಸಿಗರು ಆಹಾರ ಮೇಳದಲ್ಲಿ ತಮಗಿಷ್ಟವಾದ ಆಹಾರ ಸವಿಯಬಹುದು.

ಆ ಮೂಲಕ ದಸರಾ ದೀಪಾಲಂಕಾರ ವೀಕ್ಷಿಸಿ ತಮಗಿಷ್ಟದ ಖಾದ್ಯವನ್ನು ಸವಿಯಲು ಆಹಾರ ಮೇಳ ತೆರೆದಿರಲಿದೆ.

ಈ ಸಂಬಂಧ 'ಮೈಸೂರು ಮಿತ್ರ'ನಿಗೆ ಮಾಹಿತಿ ನೀಡಿದ ಆಹಾರ ಮೇಳ ಉಪವಿಶೇಷಾಧಿಕಾರಿ ಹಾಗೂ ಆಹಾರ ಮತ್ತು ನಾಗರೀಕ ಸರಬರಾಜು ಇಲಾಖೆ ಜಂಟಿ ನಿರ್ದೇಶಕ ಮಂಟೇಸ್ವಾಮಿ, ಈ ಬಾರಿ ನಿರೀಕ್ಷೆಗೂ ಮೀರಿದ ಪ್ರತಿಕ್ರಿಯೆ ಆಹಾರ ಮೇಳಕ್ಕೆ ಸಿಕ್ಕಿದೆ. ಜನರ ಸ್ಪಂದನೆ ನಮ್ಮ ಜವಾಬ್ದಾರಿಯನ್ನು ಇಮ್ಮಡಿಗೊಳಿಸಿದೆ. ಸದ್ಯಕ್ಕೆ ಅ.5 ವರೆಗೆ ಆಹಾರ ಮೇಳ ಇರಲಿದ್ದು, ಮತ್ತೆ ಅವಧಿ ವಿಸ್ತರಣೆ ಕುರಿತಂತೆ ಉನ್ನತ ಮಟ್ಟದಲ್ಲಿ ಚರ್ಚಿಸಿ ತೀರ್ಮಾನಿಸಲಾಗುತ್ತದೆ ಎಂದು ತಿಳಿಸಿದರು.

ಅಮೆರಿಕ ಹೊರಗೆ ತಯಾರಾಗುವ ಸಿನಿಮಾಗಳಿಗೆ ಶೇ.100 ಸುಂಕ ವಿಧಿಸಿದ ಟ್ರಂಪ್!

ನ್ಯೂಯಾರ್ಕ್: ಅಮೆರಿಕದ ಹೊರಗೆ ತಯಾರಾಗುವ ಎಲ್ಲಾ ಚಿತ್ರಗಳ ಮೇಲೆ ಶೇ100ರಷ್ಟು ಸುಂಕ ವಿಧಿಸುವುದಾಗಿ ಅಮೆರಿಕ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಘೋಷಿಸಿದ್ದಾರೆ. ಟ್ರಂಪ್ ಅವರ ಈ ನಡೆಯು ಭಾರತೀಯ ಚಿತ್ರರಂಗದ ಮೇಲೆ ಪರಿಣಾಮ ಬೀರುವ ಸಾಧ್ಯತೆ ಇದೆ. 'ದೀರ್ಘಕಾಲದ ಈ ಸಮಸ್ಯೆಗೆ ಪರಿಹಾರ ಕಂಡುಕೊಳ್ಳುವ ಉದ್ದೇಶದಿಂದ, ಅಮೆರಿಕದ ಹೊರಗೆ ತಯಾರಾಗುವ ಯಾವುದೇ ಅಥವಾ ಎಲ್ಲ ಚಿತ್ರಗಳ ಮೇಲೆ ನಾನು ಶೇ.100ರಷ್ಟು ಸುಂಕ ವಿಧಿಸುತ್ತಿದ್ದೇನೆ' ಎಂದು ತಮ್ಮ ಒಡೆತನದ ಸಾಮಾಜಿಕ ಜಾಲತಾಣ 'ಟ್ರುತ್ ಸೋಷಿಯಲ್'ನಲ್ಲಿ ಪೋಸ್ಟ್ ಮಾಡಿದ್ದಾರೆ. ಭಾರತೀಯ ಚಿತ್ರರಂಗವು ಹಲವು ಭಾಷೆಗಳಲ್ಲಿ ಸಿನಿಮಾ ನಿರ್ಮಾಣ ಮಾಡುತ್ತಿದ್ದು, ಈ ಚಿತ್ರಗಳು ಅಮೆರಿಕದಲ್ಲಿರುವ ಭಾರತೀಯರಲ್ಲಿ ಜನಪ್ರಿಯವಾಗಿವೆ.

ಮೈಸೂರು ದಸರಾ ಮಹೋತ್ಸವ-2025

ನೆರೆದ ಸಹಸ್ರಾರು ಜನರ ನಿಬ್ಬೆರಗಾಗಿಸಿದ ಡ್ರೋನ್‌ಗಳಿಂದ ಮೂಡಿದ ಹತ್ತು ಹಲವು ಆಕರ್ಷಕ ಕಲಾಕೃತಿಗಳು

●ಮಾಯಾಲೋಕವಾಗಿ ಪರಿಣಮಿಸಿದ ಬನ್ನಿಮಂಟಪ ಕವಾಯತು ಮೈದಾನ ●ಇದರ ಜೊತೆಗೆ ಸಂಗೀತ ಸಂಭ್ರಮ ●ಬೆಳಕಲಿ ಬಿಂಬಿತ ಪಂಚ ಗ್ಯಾರಂಟಿ



ಮೈಸೂರು,ಸೆ.29– ಮುಗಿಲೆತ್ತರದಲ್ಲಿ ಸಾವಿರಾರು ಡ್ರೋನ್‌ಗಳಿಂದ ಸೃಷ್ಟಿಯಾದ ವೈವಿಧ್ಯಮಯ ಚಿತ್ತಾರ, ಸಾವಿರಾರು ಜನರನ್ನು ಬೆರಗುಗೊಳಿಸಿತು.

ನಾಡಹಬ್ಬ ಮೈಸೂರು ದಸರಾ ಮಹೋತ್ಸವದ ಅಂಗವಾಗಿ ಚಾಮುಂಡೇಶ್ವರಿ ವಿದ್ಯುತ್ ಸರಬರಾಜು ನಿಗಮ ನಿಯಮಿತ(ಸೆಸ್ಕ್) ವತಿಯಿಂದ ಬನ್ನಿಮಂಟಪ ಪಂಜಿನ ಕವಾಯತು ಮೈದಾನದಲ್ಲಿ ಸೋಮವಾರ ನಡೆದ ಎರಡನೇ ಪ್ರಾಯೋಗಿಕ ಡ್ರೋನ್ ಶೋ, ದಸರಾ ಸಂಭ್ರಮದ ಮೆರಗು ಹೆಚ್ಚಿಸಿತು. ಕಿಕ್ಕಿರಿದು ತುಂಬಿದ್ದ ಮೈದಾನದಲ್ಲಿ ಬಣ್ಣ ಬಣ್ಣದ ಸುಮಾರು 3 ಸಾವಿರ ಡ್ರೋನ್‌ಗಳು ಆಕಾಶಬುಟ್ಟಿಗಳಂತೆ ಬಾನಂಗಳದತ್ತ ಹಾರಿ, ವಿವಿಧ ಕಲಾಕೃತಿಗಳನ್ನು ಸೃಷ್ಟಿಸಿದವು.

ಮುದ ನೀಡಿದ ಸಂಗೀತ ಸಂಜೆ


ಡ್ರೋನ್ ಪ್ರದರ್ಶನಕ್ಕೂ ಮುನ್ನ ನೆರೆದಿದ್ದ ಜನಸ್ತೋಮ ಸಂಗೀತ ಲೋಕದಲ್ಲಿ ವಿಹರಿಸಿತು. ಗಾಯಕಿ ದಿವ್ಯ ರಾಮಚಂದ್ರ 'ಐಗಿರಿ ನಂದಿನಿ...' ಗೀತೆಯೊಂದಿಗೆ ತಾಯಿ ಚಾಮುಂಡೇಶ್ವರಿಯನ್ನು ಸ್ಮರಿಸಿಕೊಂಡು ಸಂಗೀತ ಸಂಜೆಯನ್ನು ಶುಭಾರಂಭಗೊಳಿಸಿದರು. 'ಗಿಲ್ಲಕ್ಕೋ ಶಿವ ಗಿಲ್ಲಕ್ಕೋ...', 'ಪಸಂದಾಗವ್ನೆ ಇವ್ನು ಪಸಂದಾಗವ್ನೆ...' ಹಾಡುಗಳ ಮೂಲಕ ರಂಜಿಸಿದರು. ಮೈಸೂರಿನ ಶ್ರೀಹರ್ಷ 'ಬೊಂಬೆ ಹೇಳುತೈತೆ...' ಸೇರಿದಂತೆ ಹಲವು ಗೀತೆಗಳನ್ನು ಉಣಬಡಿಸಿದರು. 'ಅಪ್ಪ ಐ ಲವ್ ಯೂ...' ಹಾಡಿನೊಂದಿಗೆ ವೇದಿಕೆಗೆ ಬಂದ ಖ್ಯಾತ ಗಾಯಕಿ ಅನುರಾಧ ಭಟ್ 'ಕಣ್ಣು ಹೊಡೆಯಾಕಾ...' ಎಂದು ಹಾಡಿ ನೆರೆದಿದ್ದವರ ಕುಣಿಸಿದರು. ಗಾಯಕ ಜಸ್ಕರಣ್ ಸಿಂಗ್ 'ದ್ವಾಪರ ದಾಟುತ...', 'ನಿನ್ನ ಜೊತೆ ನನ್ನ ಕಥೆ...' ಹಾಡಿಗೆ ದನಿಗೂಡಿಸಿದರು.



ನೆರೆದಿದ್ದವರೆಲ್ಲಾ ತಂತ್ರಜ್ಞಾನದ ಮಾಯಾಲೋಕದಲ್ಲಿ ವಿಹರಿಸಿ, ರೋಮಾಂಚನಗೊಂಡರು.

ಏಕಕಾಲದಲ್ಲಿ ಆಗಸದತ್ತ ಹಾರಿದ ಡ್ರೋನ್‌ಗಳು ಬಣ್ಣಬಣ್ಣದ ದೀಪಗಳಿಂದ ಕಂಗೊಳಿಸಿದವು. ನೋಡ ನೋಡುತ್ತಿದ್ದಂತೆ ಸೌರಮಂಡಲ, ವಿಶ್ವಭೂಪಟ, ದೇಶದ ಹೆಮ್ಮೆಯ ಸೈನಿಕ, ನವಿಲು, ರಾಷ್ಟ್ರೀಯ ಪ್ರಾಣಿ ಹುಲಿ, ಡಾಲ್ಫಿನ್, ಈಗಲ್, ಸರ್ಪದ ಮೇಲೆ ಶ್ರೀಕೃಷ್ಣನ ನೃತ್ಯಭಂಗಿ, ಕಾವೇರಿ ಮಾತೆ, ಹೀಗೆ ವಿವಿಧ ಕಲಾಕೃತಿಗಳನ್ನು ಸೃಷ್ಟಿಸಿ, ನಿಬ್ಬೆರಗಾಗಿಸಿದವು. ಕರ್ನಾಟಕ ಭೂಪಟದೊಂದಿಗೆ ಮುಖ್ಯಮಂತ್ರಿ ಸಿದ್ದರಾಮಯ್ಯ ಹಾಗೂ ಉಪಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಅವರ ಭಾವಚಿತ್ರವನ್ನೂ ಡ್ರೋನ್‌ಗಳು ಪಡಿಮೂಡಿಸಿದವು. ರಾಜ್ಯ ಸರ್ಕಾರದ ಪಂಚ ಗ್ಯಾರಂಟಿ ಯೋಜನೆಗಳನ್ನೊಳಗೊಂಡ ಕರ್ನಾಟಕ ಭೂಪಟ, ಅಂಬಾರಿ ಆನೆ, ನಾಡದೇವತೆ ಚಾಮುಂಡೇಶ್ವರಿ ಕಲಾಕೃತಿಗಳು ಅತ್ಯದ್ಭುತವಾಗಿ ಮೂಡಿಬಂದವು.





ಡ್ರೋನ್ ಪ್ರದರ್ಶನಕ್ಕೆ ಸಚಿವ ಕೆ.ವೆಂಕಟೇಶ್, ಸೆಸ್ಕ್ ಅಧ್ಯಕ್ಷರೂ ಆದ ಶಾಸಕ ರಮೇಶ್ ಬಂಡಿಸಿದ್ದೇಗೌಡ, ಕೆ.ಆರ್.ನಗರ ಶಾಸಕ ಡಿ.ರವಿಶಂಕರ್, ಜಿಲ್ಲಾಧಿಕಾರಿ ಜಿ.ಲಕ್ಷ್ಮಿಕಾಂತ ರೆಡ್ಡಿ, ದಸರಾ ದೀಪಾಲಂಕಾರ ಸಮಿತಿ ಅಧ್ಯಕ್ಷ(ಅಧಿಕಾರೇತರ) ರಾಘವೇಂದ್ರ, ನಗರ ಪೊಲೀಸ್ ಆಯುಕ್ತೆ ಸೀಮಾ ಲಾಟ್ಕರ್, ಸೆಸ್ಕ್ ವ್ಯವಸ್ಥಾಪಕ ನಿರ್ದೇಶಕ ಕೆ.ಎಂ.ಮುನಿಗೋಪಾಲ್‌ರಾಜು, ತಾಂತ್ರಿಕ ನಿರ್ದೇಶಕ ಡಿ.ಜೆ.ದಿವಾಕರ್, ಅಧೀಕ್ಷಕ ಇಂಜಿನಿಯರ್ ಸುನೀಲ್ ಸೇರಿದಂತೆ ಸಾವಿರಾರು ಮಂದಿ ಸಾಕ್ಷಿಯಾಗಿದ್ದರು.

ಭಾನುವಾರ ನಡೆದ ಈ ಬಾರಿಯ ಮೊದಲ ಪ್ರಾಯೋಗಿಕ ಡ್ರೋನ್ ಪ್ರದರ್ಶನದಲ್ಲೂ ಮೈದಾನ ಕಿಕ್ಕಿರಿದಿತ್ತು. ಇನ್ನು ಅ.1 ಮತ್ತು 2ರಂದು ಪಂಜಿನ ಕವಾಯತು ಸಂದರ್ಭದಲ್ಲಿ ಡ್ರೋನ್ ಶೋ ಇರಲಿದ್ದು, ಪಾಸ್ ಉಳ್ಳವರು ಕಣ್ತುಂಬಿಕೊಳ್ಳಬಹುದು.

ಅರಮನೆ ವೇದಿಕೆಯಲ್ಲಿ ಜಾನಪದ ಗಾನ ರಸಧಾರೆ; ಹರಿದ ಭಕ್ತಿಗೀತೆ ಸುಧೆ

8 ದಿನಗಳ ಸಾಂಸ್ಕೃತಿಕ ಸಂಭ್ರಮಕ್ಕೆ ಅದ್ಧೂರಿ ತೆರೆ

ಮೈಸೂರು,ಸೆ.29(ಪಿಎಂ)– 'ನಮ್ಮುಕೆ ಪ್ಯಾರ್‌ಗೆ ಆಗ್ಬಿಟ್ಟೈತೆ...' ತಮ್ಮದೇ ಕಂಠಸಿರಿಯಲ್ಲಿ ಮೂಡಿಬಂದಿರುವ 'ಗೋವಿಂದಾಯ ನಮಃ' ಸಿನಿಮಾದ ಈ ಗೀತೆಯನ್ನು ಕನ್ನಡ ಚಿತ್ರರಂಗದ ಖ್ಯಾತ ಹಿನ್ನಲೆ ಗಾಯಕಿ ಇಂದು ನಾಗರಾಜ್ ಸಾದರಪಡಿಸಿ ನೆರೆದವರ ಮೋಡಿ ಮಾಡಿದರು.

ಇದಲ್ಲದೆ, ಜಾನಪದ ಗಾಯನ ಹಾಗೂ ಭಕ್ತಿ ಸಂಗೀತದ ವೈಭವದೊಂದಿಗೆ ದಸರಾ ಪ್ರಯುಕ್ತ ಅರಮನೆ ವೇದಿಕೆಯಲ್ಲಿ 8 ದಿನಗಳ ಕಾಲ ನಡೆದ ಸಾಂಸ್ಕೃತಿಕ ಸಂಭ್ರಮಕ್ಕೆ ಸೋಮವಾರ ಅದ್ಧೂರಿ ತೆರೆ ಬಿದ್ದಿತು. ಸಾಂಸ್ಕೃತಿಕ ಉಪ ಸಮಿತಿ ವತಿಯಿಂದ ಇಲ್ಲಿ ಹಮ್ಮಿಕೊಂಡಿದ್ದ ಸಾಂಸ್ಕೃತಿಕ ಕಾರ್ಯಕ್ರಮಗಳ ಅಂಗವಾಗಿ ಕೊನೆ ದಿನವೂ ಸಂಗೀತ, ಹಾಡು–ನೃತ್ಯದಲ್ಲಿ ಅಪಾರ ಸಂಖ್ಯೆಯಲ್ಲಿ ನೆರೆದಿದ್ದ ಪ್ರೇಕ್ಷಕರು ಮಿಂದೆದ್ದರು.

ಮೈಸೂರಿನ ಸಹೋದರಿಯರಾದ ಇಂದೂ ನಾಗರಾಜ್ ಮತ್ತು ಲಕ್ಷ್ಮೀ ನಾಗರಾಜ್ ಜೋಡಿ ವೇದಿಕೆಗೆ ಆಗಮಿಸುತ್ತಿದ್ದಂತೆ ಪ್ರೇಕ್ಷಕರ ಶಿಳ್ಳೆ–ಹರ್ಷೋದ್ಗಾರದ ಸಂಭ್ರಮ ಕಳೆಗಟ್ಟಿತು. 'ನಿಮ್ಮೂರಿನ ಸಹೋದರಿಯರು ನಾವಿಬ್ಬರು' ಎಂದು ಈ ಜೋಡಿ ಗಾಯನ ಆರಂಭಿಸಿ, ಭಕ್ತಿ ಗೀತೆಗಳನ್ನು ಸುಶ್ರಾವ್ಯವಾಗಿ ಸಾದರಪಡಿಸಿ, ಸಭಿಕರಲ್ಲಿ ಭಕ್ತಿಭಾವ ಮೂಡಿಸಿತು. ಗಣಪತಿ ಸ್ತುತಿಯಾದ 'ವಾತಾಪಿ ಗಣಪತಿಂ ಭಜೇಹಂ...' ಪ್ರಸ್ತುತಪಡಿಸಿ ಸಹೋದರಿಯರು, ವಿನಾಯಕನ ಆರಾಧನೆಯಲ್ಲಿ ಶ್ರೋತೃಗಳು ಮೈಮರೆಯುವಂತೆ ಮಾಡಿದರು.

'ಶ್ರೀಕೃಷ್ಣದೇವರಾಯ' ಸಿನಿಮಾದ 'ಶ್ರೀ ಚಾಮುಂಡೇಶ್ವರಿ ಅಮ್ಮ...' ಗೀತೆ ಮೂಲಕ ಭಕ್ತಿಯ ಅಲೆಯಲ್ಲಿ ಸಭಿಕರು ತೇಲುವಂತೆ ಮಾಡಿದರು. 'ಮಾಲತಿ ಮಾಧವ' ಚಿತ್ರದ 'ಬೃಂದಾವನದಲು ಹಾಡುವನ್ಯಾರೇ...' ಗೀತೆ ಸೇರಿದಂತೆ ಅನೇಕ ಭಕ್ತಿಗೀತೆಗಳನ್ನು ಪ್ರಸ್ತುತಪಡಿಸಿ ಭಕ್ತಿಯ ಪರಾಕಾಷ್ಠೆ ಮೆರೆದು ಸಭಿಕರು ಭಕ್ತಿಭಾವದಲ್ಲಿ ತಲೆದೂಗುವಂತೆ ಮಾಡಿದರು. ಅಂತಿಮವಾಗಿ ಇಂದು ನಾಗರಾಜ್, 'ನಮ್ಮುಕೆ ಪ್ಯಾರ್‌ಗೆ ಆಗ್ಬಿಟ್ಟೈತೆ...' ಗೀತೆ ಮೂಲಕ ಪುಳಕವಿಟ್ಟು ಶಿಳ್ಳೆ–ಚಪ್ಪಾಳೆ ಪಡೆದರು.



ಹಿರಿಯ ಜಾನಪದ ಕಲಾವಿದ ಮೈಸೂರು ಗುರುರಾಜ್ ಮತ್ತು ತಂಡದಿಂದ ಜಾನಪದ ಗಾಯನ ಸಾದರಪಡಿಸಲಾಯಿತು.

ಇದಕ್ಕೂ ಮುನ್ನ ನಡೆದ ಜಾನಪದ ಗಾಯನದಲ್ಲಿ ಡಾ.ಮೈಸೂರು ಗುರುರಾಜ್ ಮತ್ತು ತಂಡ, ಜಾನಪದ ಕಲಾಲೋಕ ಅನಾವರಣಗೊಳಿಸಿತು. ಈ ತಂಡದ ಜಾನಪದ ಗಾಯನದ ರಸದೌತಣಕ್ಕೆ ಪ್ರೇಕ್ಷಕರು ಮನಸೋತರು. 'ಶರಣು ಶರಣು ಅಯ್ಯ ಗಣನಾಯಕ...' 'ಮಹಾತಾಯಿ ಚಾಮುಂಡಿಯಮ್ಮ... ಗೀತೆಗಳೊಂದಿಗೆ ಭಕ್ತಿಸುಧೆ ಹರಿಸಿತು. ಗುರುರಾಜ್ ಅವರು, ಚಾಮುಂಡಿ ಹಾಗೂ ನಂಜುಂಡೇಶ್ವರನ ಪ್ರೇಮ ಪ್ರಸಂಗದ ಜಾನಪದ ಗೀತೆ ಹಾಡಿದರಲ್ಲದೆ, ಇವರ 'ಕೋಲುಮಂಡೆ ಜಂಗಮ ದೇವರು...', 'ಬೆಟ್ಟ ನುಡಿದಾವೋ... ಮಾದೇವಾ...' ಗೀತೆಗಳಿಗೆ ಭಕ್ತಿ ಮೆರೆದು ಪ್ರೇಕ್ಷಕರಿಂದ ಶಿಳ್ಳೆ ಚಪ್ಪಾಳೆಯ ಸಂಭ್ರಮ ಮೂಡಿತು.

ಗುರುರಾಜ್ ಅವರು ಮಹದೇಶ್ವರರ ಕುರಿತ ಗೀತೆಗಳನ್ನು ಸಾದರಪಡಿಸುತ್ತಿದ್ದರೆ ಅದೇ ವೇಳೆಗೆ ವೇದಿಕೆಯಲ್ಲಿ ಕಂಸಾಳೆ ನೃತ್ಯವೂ ಮೂಡಿತು. ಇದಕ್ಕೆ ಮನಸೋತ ಪ್ರೇಕ್ಷಕರು 'ಉಘೇ ಮಾದಪ್ಪ' ಹರ್ಷೋದ್ಗಾರದೊಂದಿಗೆ ಸಂಭ್ರಮಿಸಿದರು.

ಅಲ್ಲದೆ, ಮಂಟೇಸ್ವಾಮಿಯವರು ಕಾಲಜ್ಞಾನ ಕುರಿತು ಹೇಳಿದ 'ಸಾರಿ ಹೇಳುವೆ ಕೇಳಿ ಶರಣರೇ ಕಾಲದ ಮಹಿಮೆಯನು... ಕಲಿಗಾಲದ ಮಹಿಮೆಯನು...' ಗೀತೆಯನ್ನು ಅದ್ಭುತವಾಗಿ ಸಾದರಪಡಿಸಿ ಶ್ರೋತೃಗಳಿಂದ ಚಪ್ಪಾಳೆ ಗಿಟ್ಟಿಸಿದರು. ಈ ಹಾಡಿನೊಂದಿಗೆ ಮಂಟೇಸ್ವಾಮಿಯವರು ಸೇರಿದಂತೆ ಅವರ ಶಿಷ್ಯವೃಂದ ವೇಷಧಾರಿಗಳು ವೇದಿಕೆಯಲ್ಲಿ ಹಾಡಿಗೆ ತಕ್ಕಂತೆ ಅಭಿನಯಿಸುವ ವಿಶಿಷ್ಟ ಶೈಲಿಯ ಪ್ರಯೋಗಕ್ಕೆ ಪ್ರೇಕ್ಷಕರು ಮನಸೋತರು.

ಅದೇ ರೀತಿ ಮೈಸೂರು ಇಸ್ಕಾನ್ ಅಧ್ಯಕ್ಷ ಸ್ತೋಕ ಕೃಷ್ಣಸ್ವಾಮಿ ಅವರ ನೇತೃತ್ವದಲ್ಲಿ ನಡೆದ 'ಹರಿನಾಮ ಸಂಕೀರ್ತನೆ' ಕಾರ್ಯಕ್ರಮವೂ ಸಭಿಕರನ್ನು ಭಕ್ತಿಭಾವದ ಅಲೆಯಲ್ಲಿ ತೇಲಿಸಿತು. 'ಹರೇ ಕೃಷ್ಣ ಹರೇ ರಾಮ' ಭಜನೆಗೆ ಭಕ್ತರು ಎದ್ದುನಿಂತು ತಾಳ ತಟ್ಟಿ, ಲಘು ನೃತ್ಯದೊಂದಿಗೆ ಭಕ್ತಿಯ ಪರವಶರಾದರು.

'ಭಕ್ತಿಸಂಗೀತ' ಶೀರ್ಷಿಕೆಯಡಿ ನಡೆದ ಮತ್ತೊಂದು ಕಾರ್ಯಕ್ರಮದಲ್ಲಿ ಬಿದರಿ ಸಾಂಸ್ಕೃತಿಕ ವೇದಿಕೆಯ ರೇಖಾ ಸೌದಿ ಮತ್ತು ತಂಡ ಭಕ್ತಿಗೀತೆಗಳನ್ನು ಸುಶ್ರಾವ್ಯವಾಗಿ ಪ್ರಸ್ತುತಪಡಿಸಿತು. 'ಸರಿಗಮ ಪದನಿ... ಸಾವಿರದ ಶರಣು...' ಸೇರಿದಂತೆ ಮೊದಲಾದ ಭಕ್ತಿಗೀತೆಗಳೊಂದಿಗೆ ಶ್ರೋತೃಗಳಲ್ಲಿ ಭಕ್ತಿಯ ಪರಾಕಾಷ್ಠೆ ಮೂಡುವಂತೆ ಮಾಡಿದರು. ದೆಹಲಿ ಕರ್ನಾಟಕ ಸಂಘ'ದಿಂದ ಆರಂಭದಲ್ಲಿ ನಡೆದ ನೃತ್ಯ ರೂಪಕವು ಕನ್ನಡಾಭಿಮಾನ ಮರೆಯಿತು. ಅಲ್ಲದೆ, ಗಾನಸಿರಿ ವೃಂದದಿಂದ ನಡೆದ ಸುಗಮ ಸಂಗೀತ ಮತ್ತೆ ಸಂಗೀತ ರಸಧಾರೆ ಹರಿಸಿದರೆ, ಅಂತಿಮವಾಗಿ ನಡೆದ ಜುಗಲ್ ಬಂಧಿ ನೃತ್ಯರೂಪಕ ದೃಶ್ಯಕಾವ್ಯ ಅನಾವರಣಗೊಳಿಸಿತು. ಆ ಮೂಲಕ ಈ ಬಾರಿ ದಸರಾದ ಅರಮನೆ ವೇದಿಕೆಯ ಸಾಂಸ್ಕೃತಿಕ ಕಾರ್ಯಕ್ರಮಗಳಿಗೆ ತೆರೆ ಬಿದ್ದಿತು.



ಸಾಂಸ್ಕೃತಿಕ ನಗರಿ ಮೈಸೂರಲ್ಲಿ ದಸರಾ ಉತ್ಸವದ ನಡುವೆಯೇ ಆಯುಧ ಪೂಜೆ ತಯಾರಿ

●ಪೂಜಾ ವಸ್ತುಗಳ ಖರೀದಿಗಿಳಿದ ಜನತೆ ●ಹೂವು, ಕುಂಬಳ, ನಿಂಬೆ ಹಣ್ಣು ದರಗಳಲ್ಲಿ ಏರಿಕೆ ಲಕ್ಷಣ

ಮೈಸೂರು, ಸೆ.29(ಎಂಕೆ)– ನಾಡಹಬ್ಬ ದಸರಾ ಮಹೋತ್ಸವದ ಸಂಭ್ರಮದ ಜೊತೆಗೆ 'ಆಯುಧ ಪೂಜೆ'ಗೂ ಸಾಂಸ್ಕೃತಿಕ ನಗರಿ ಸಜ್ಜಾಗುತ್ತಿದೆ...

ಪ್ರತೀ ವರ್ಷ ನವರಾತ್ರಿಯ 9ನೇ ದಿನ ಜರುಗುತ್ತಿದ್ದ ಆಯುಧ' ಪೂಜೆ, ಈ ವರ್ಷ 10ನೇ ದಿನ ಆಚರಣೆಯಾಗಲಿದ್ದು ಸಿದ್ಧತೆಗಳು ಜೋರಾಗಿ ನಡೆಯುತ್ತಿವೆ. ವಿಶೇಷವಾಗಿ ಚಾಮುಂಡಿಬೆಟ್ಟ, ಅರಮನೆ ಅಂಗಳದಲ್ಲಿ ನಡೆಯುವ ಭಕ್ತಿ–ಭಾವದ ಆಯುಧ ಪೂಜಾ ಕೈಂಕರ್ಯದ ತಯಾರಿ ಜೊತೆಗೆ ಮೈಸೂರಿನ ಮನೆ ಮನೆಗಳಲ್ಲಿಯೂ ತಮ್ಮ ವಾಹನಗಳಿಗೆ, ಆಯುಧಗಳಿಗೆ ಪೂಜೆ ಸಲ್ಲಿಸಲು ಭರದ ಸಿದ್ಧತೆ ಮಾಡಿಕೊಳ್ಳಲಾಗುತ್ತಿದೆ.

ಆಯುಧ ಪೂಜೆಗೆ ಎರಡು ದಿನ ಬಾಕಿ ಇರುವಂತೆಯೇ ಹಬ್ಬಕ್ಕೆ ಅಗತ್ಯವಿರುವ ಹೂವು, ಹಣ್ಣು, ಬೂದುಕುಂಬಳ ಕಾಯಿ, ಕಾರ–ಮಂಡಕ್ಕಿ, ನಿಂಬೆಹಣ್ಣು, ತಳಿರು–ತೋರಣ, ಸಿಹಿ ತಿನಿಸುಗಳು, ಪೂಜಾ ಸಾಮಗ್ರಿಗಳು ಸಹಿತ ವಾಹನಗಳಿಗೆ ಶೃಂಗಾರ ಮಾಡುವ ಅಗತ್ಯ ವಸ್ತುಗಳ ವ್ಯಾಪಾರ ಬಿರುಸುಕೊಂಡಿದ್ದು, ದೇವರಾಜ ಮಾರುಕಟ್ಟೆ, ಅಗ್ರಹಾರ ಮಾರ್ಕೆಟ್, ಎಂ.ಜಿ.ರಸ್ತೆ ಮಾರುಕಟ್ಟೆ, ಧನ್ವಂತರಿ ರಸ್ತೆ, ಜೆ.ಕೆ. ಮೈದಾನದ ಶೇಷಾದ್ರಿ ಅಯ್ಯರ್ ರಸ್ತೆ, ಸಯ್ಯಾಜಿರಾವ್ ರಸ್ತೆಯಲ್ಲಿ ಲೋಡ್‌ಗಟ್ಟಲೆ ಬೂದುಕುಂಬಳ ಕಾಯಿ, ಹೂಗಳ ರಾಶಿ ಇಟ್ಟುಕೊಂಡು ಮಾರಾಟ ಮಾಡಲಾಗುತ್ತಿದೆ.

ಜೆ.ಕೆ.ಮೈದಾನದ ಎದುರಿನ ಶೇಷಾದ್ರಿ ಅಯ್ಯರ್ ರಸ್ತೆ, ಧನ್ವಂತರಿ ರಸ್ತೆ ಬದಿಯಲ್ಲಿ ವಿವಿಧ ಬಗೆಯ ಸೇವಂತಿಗೆ, ಚೆಂಡು ಹೂ, ಬೂದುಕುಂಬಳ ಕಾಯಿ ಹಾಗೂ ಪೂಜಾ ಸಾಮಗ್ರಿಗಳನ್ನು ಮಾರಾಟ ಮಾಡಲು ವ್ಯಾಪಾರಸ್ಥರು ಟೆಂಟ್ ಹಾಕಿದ್ದು, ಲೋಡ್‌ಗಟ್ಟಲೆ ಬೂದುಕುಂಬಳ ಕಾಯಿ, ಬಾಳೆಕಂದುಗಳನ್ನು ತಂದಿರಿಸಿಕೊಂಡಿದ್ದಾರೆ.

ಕೆ.ಆರ್.ನಗರ, ಸಾಲಿಗ್ರಾಮ, ಇಲವಾಲ, ಚಾಮರಾಜನಗರ ಸೇರಿದಂತೆ ಸುತ್ತಮುತ್ತಲಿನ ಗ್ರಾಮಗಳು, ತಾಲೂಕುಗಳಿಂದಲೂ ವ್ಯಾಪಾರಸ್ಥರು ಆಗಮಿಸಿದ್ದು, ಭರ್ಜರಿ ವ್ಯಾಪಾರಕ್ಕೆ ತಯಾರಿ ಮಾಡಿಕೊಂಡಿದ್ದಾರೆ. ಕೆಲವರು ಕುಟುಂಬ ಸಮೇತ ಬಂದಿದ್ದು, ರಸ್ತೆ ಬದಿಯಲ್ಲೇ ಬೀಡುಬಿಟ್ಟಿದ್ದಾರೆ.

ಗಾತ್ರಕ್ಕೆ ತಕ್ಕಂತೆ ಬೆಲೆ: ಬೂದುಕುಂಬಳ ಕಾಯಿಗೆ ಕೆಜಿಗೆ 30–40 ರೂ.ಇದ್ದು, ಆಯುಧ ಪೂಜೆ ಹಿನ್ನಲೆ ಗಾತ್ರಕ್ಕೆ ತಕ್ಕಂತೆ ಮಾರಾಟ ಮಾಡಲಾಗುತ್ತಿದೆ. ಹಾಗೆಯೇ ಮಿಡಿಯಂ ಗಾತ್ರದ ನಿಂಬೆಹಣ್ಣು ಒಂದಕ್ಕೆ 5 ರೂ. ಇದ್ದು, 10 ರೂ.ಗೆ 2 ರಿಂದ 3 ಸಣ್ಣ ಗಾತ್ರದ ನಿಂಬೆ ಹಣ್ಣುಗಳನ್ನು ಮಾರಾಟ ಮಾಡುತ್ತೇವೆ ಎಂದು ವ್ಯಾಪಾರಿ ಬಸಪ್ಪ 'ಮೈಸೂರು ಮಿತ್ರ'ನಿಗೆ ತಿಳಿಸಿದರೆ, ತಮಿಳುನಾಡಿನಿಂದ ಎರಡು ಲೋಡ್ ಬೂದು ಕುಂಬಳ ಕಾಯಿ ತಂದಿದ್ದೇವೆ. ಗಾತ್ರಕ್ಕೆ ತಕ್ಕಂತೆ ಮಾರಾಟ ಮಾಡುತ್ತಿದ್ದೇವೆ ಎಂದು ಚಾಮರಾಜನಗರದ ಶಿವು ಮಾಹಿತಿ ನೀಡಿದರು.



ಸಯ್ಯಾಜಿರಾವ್ ರಸ್ತೆ ಬದಿಯಲ್ಲಿ ಹೂ ವ್ಯಾಪಾರ ಜೋರು

ಹೂ ಖರೀದಿ ಜೋರು: ಅಲಂಕಾರ ಮತ್ತು ಪೂಜೆಗೆ ಬಳಸುವ ಹೂಗಳ ಖರೀದಿಯೂ ಜೋರಾಗಿದ್ದು, ಹಳದಿ ಸೇವಂತಿ ಹೂವು ಒಂದು ಮಾರಿಗೆ 60–80 ರೂ.ಗಳಾಗಿದ್ದು, ಕೆಂಪು ಚೆಂಡು ಹೂ ಮಾರಿಗೆ 40–50 ರೂ. ಹಾಗೂ ಹಳದಿ ಚೆಂಡು ಹೂ 60–70 ರೂ.ಗೆ ಮಾರಾಟ ಮಾಡಲಾಗುತ್ತಿದೆ. ಹಾಗೆಯೇ ಮಲ್ಲಿಗೆ ಕೆಜಿಗೆ 800 ರೂ., ಸುಗಂಧರಾಜ 200 ರೂ., ಕಾಕಡ 400–500 ರೂ., ಕನಕಾಂಬರ 700–800 ರೂ., ಸಣ್ಣ ಮರಲೇ 600–700 ರೂ. ಇದೆ ಎಂದು ದೇವರಾಜ ಮಾರುಕಟ್ಟೆಯ ಗಾಯತ್ರಿ ಫ್ಲವರ್ ಸ್ಟಾಲ್ ಮಂಜುನಾಥ್ ತಿಳಿಸಿದರು.

ಇನ್ನುಳಿದಂತೆ ಪಚ್ಚಬಾಳೆ ಕೆಜಿಗೆ 40–50 ರೂ., ಏಲಕ್ಕಿ ಬಾಳೆ ಹಣ್ಣು 80–100 ರೂ., ಇದ್ದು, ಬಾಳೆ ಕಂದು ಜೋಡಿಗೆ 30–50 ರೂ. ಹಾಗೂ ಮಾವಿನ ಸೊಪ್ಪು ಕಟ್ಟಿಗೆ 10–15 ರೂ.ಗಳಿಗೆ ಮಾರಾಟ ಮಾಡಲಾಗುತ್ತಿದೆ.

ವಿನಾಶದತ್ತ ಕೊಂಡೊಯ್ಯುವ ಸಾಮಾಜಿಕ ಜಾಲತಾಣಗಳು...!

ಕಾವಾದಲ್ಲಿ ವಿಶೇಷ ಪರಿಕಲ್ಪನೆಯ ಎಚ್ಚರಿಕಾ ಸಂದೇಶ

ಮೈಸೂರು, ಸೆ.29(ಎಂಕೆ)– ಲೈಕ್ಸ್... ಕಾಮೆಂಟ್ಸ್... ಸ್ಕ್ರೋಲಿಂಗ್... ಫೈನಲೀ ಫಿನಿಷ್... ಇದೇ ನೋಡಿ ಸಾಮಾಜಿಕ ಜಾಲತಾಣದ ಎಫೆಕ್ಟ್...!

ಮೈಸೂರಿನ ಸಿದ್ಧಾರ್ಥನಗರದಲ್ಲಿರುವ ಕಾವಾ(ಚಾಮರಾಜೇಂದ್ರ ಸರ್ಕಾರಿ ದೃಶ್ಯಕಲಾ ಕಾಲೇಜು) ಕಾಲೇಜು ಆವರಣದಲ್ಲಿ ನಾಡಹಬ್ಬ ಮೈಸೂರು ದಸರಾ ಮಹೋತ್ಸವದ ಅಂಗವಾಗಿ ಲಲಿತಕಲೆ ಮತ್ತು ಕರಕುಶಲ ಕಲೆ ಉಪ ಸಮಿತಿ ವತಿಯಿಂದ ಕಲಾ ಪ್ರದರ್ಶನದ ಜೊತೆ ಜೊತೆಗೆ ಸಾಮಾಜಿಕ ಅರಿವು ಮೂಡಿಸುವ ಕಾರ್ಯವನ್ನು ಮಾಡಲಾಗಿದೆ.



ಸಂಗೀತ ವಿವಿ ವಿದ್ಯಾರ್ಥಿಗಳು ಕರ್ನಾಟಕ ಮತ್ತು ಹಿಂದೂಸ್ತಾನಿ ಸಂಗೀತ ಪ್ರಸ್ತುತಪಡಿಸಿದರು.

ದಿನದ 24 ನಾಲ್ಕು ಗಂಟೆಯೂ ಅಂಗೈನಲ್ಲೇ ಇದ್ದು, ಅರಿವಿಲ್ಲದೆ ನಮ್ಮನ್ನು ವಿನಾಶದತ್ತ ನೂಕುವ ಸಾಮಾಜಿಕ ಜಾಲತಾಣಗಳು, ಅವುಗಳ ಅತಿಯಾದ ಬಳಕೆಯಿಂದ ಉಂಟಾಗುವ ದುಷ್ಪರಿಣಾಮವನ್ನು ಅರ್ಥವತ್ತಾಗಿ ತಿಳಿಸುವ ಪ್ರಯತ್ನ ಮಾಡಲಾಗಿದೆ.

ಸಾಮಾಜಿಕ ಜಾಲತಾಣಗಳಾದ ವಾಟ್ಸ್‌ಆಪ್, ಫೇಸ್‌ಬುಕ್, ಇನ್ಸ್ಟಾಗ್ರಾಂ, ಸ್ನಾಪ್‌ಚಾಟ್ ಹಾಗೂ ಯೂಟ್ಯೂಬ್ ಬಳಕೆ ಹೆಚ್ಚಾದಷ್ಟು ಅವುಗಳು ನಮ್ಮ ಭವಿಷ್ಯವನ್ನೇ ಹಾಳು ಮಾಡಿ, ಮತ್ತೆ ಎದ್ದೇಳಲಾಗದಂತಹ ಹಳ್ಳಕ್ಕೆ ಕೆಡವಲಿವೆ ಎಂಬುದನ್ನು ಅಚ್ಚುಕಟ್ಟಾಗಿ ಬಿಂಬಿಸಲಾಗಿದೆ.

ಮಹಿಳೆಯರ ತಲೆಯನ್ನು ವಾಟ್ಸ್‌ಆಪ್ ಲೋಗೋ ಮಾದರಿಯಲ್ಲಿ, ಯುವಕರ ತಲೆಯನ್ನು ಫೇಸ್‌ಬುಕ್ ಮತ್ತು ಸ್ನಾಪ್‌ಚಾಟ್, ಯುವತಿಯರ ತಲೆಯನ್ನು ಇನ್ಸ್ಟಾಗ್ರಾಂ ಹಾಗೂ ಶಾಲಾ ಮಕ್ಕಳ ತಲೆಯನ್ನು ಯೂಟ್ಯೂಬ್ ಲೋಗೋ ಮಾದರಿಯಲ್ಲಿ ವಿನ್ಯಾಸಗೊಳಿಸಿ, ಕೊನೆಗೆ ಅತಿಯಾದ ಸಾಮಾಜಿಕ ಜಾಲತಾಣ ಬಳಕೆಯಿಂದ ಎಡವಿ ಹಳ್ಳಕ್ಕೆ ಬೀಳುತ್ತೇವೆ ಎಂಬುದನ್ನು ವಿನ್ಯಾಸಗೊಳಿಸಿ ಎಚ್ಚರಿಸಲಾಗಿದೆ



ಲೈಕ್ಸ್, ಕಾಮೆಂಟ್ಸ್ ಹಿಂದೆ ಬಿದ್ದಿರುವ ಯುವ ಸಮೂಹ ಭವಿಷ್ಯದ ಬಗ್ಗೆ ಚಿಂತಿಸದೆ ತಮ್ಮ ಜೀವನವನ್ನೇ ಹಾಳು ಮಾಡಿಕೊಳ್ಳುತ್ತಿದ್ದಾರೆ. ಓದುವ ವಯಸ್ಸಿನಲ್ಲಿ ಮಕ್ಕಳಿಗೆ ಯುಟ್ಯೂಬ್ ಗೀಳು ಹಿಡಿಸಲಾಗುತ್ತಿದೆ. ಭಾವನೆಗಳಿಗೆ, ಸಂಬಂಧಗಳಿಗೆ ಬೆಲೆಯೇ ಇಲ್ಲದಂತಾಗಿದ್ದು, ಎಚ್ಚರಿಸುವ ದೃಷ್ಟಿಯಿಂದ ವಿನ್ಯಾಸಗೊಳಿಸಲಾಗಿದೆ ಎಂದು ಕಾವಾ ಕಾಲೇಜು ಹಿರಿಯ ವಿದ್ಯಾರ್ಥಿಗಳ ಸಂಘದ ಕಾರ್ಯದರ್ಶಿ ಸೂರ್ಯ 'ಮೈಸೂರು ಮಿತ್ರ'ನಿಗೆ ತಿಳಿಸಿದರು.



ಬುಡಕಟ್ಟು ಜಾನಪದ ನೃತ್ಯ ಪ್ರದರ್ಶನ ನೀಡಿದ ದಕ್ಷಿಣ ವಲಯ ಸಾಂಸ್ಕೃತಿಕ ಕೇಂದ್ರ ಕಲಾವಿದರು.

ಹೊಟ್ಟೆಯಲ್ಲಿರುವ ಮಗುವಿಗೂ ಮೊಬೈಲ್ ಕ್ರೇಜ್...!



ಮೊಬೈಲ್ ಗೀಳು ಮುಂದಿನ ದಿನಗಳಲ್ಲಿ ಗರ್ಭದಲ್ಲಿರುವ ಹಸುಗೂಸಿನ ಮೇಲೂ ದುಷ್ಪರಿಣಾಮ ಬೀರಲಿದೆ ಎಂಬುದನ್ನು ಮನ ಮುಟ್ಟುವಂತೆ ಪ್ರಸ್ತುತಪಡಿಸಲಾಗಿದೆ. ಗರ್ಭಿಣಿ ಸ್ತ್ರೀಯರು ಹೆಚ್ಚಾಗಿ ಮೊಬೈಲ್ ಬಳಕೆ ಮಾಡುವುದರಿಂದ ಹುಟ್ಟುವ ಮಕ್ಕಳು 6ಜಿ ನೆಟ್‌ವರ್ಕ್ ಮೊಬೈಲ್ ಜೊತೆಗೆ ಹುಟ್ಟುತ್ತಾರೆ ಎಂಬ ಎಚ್ಚರಿಕೆಯ ಕಲಾಕೃತಿ ಗಮನ ಸೆಳೆಯುತ್ತಿದೆ. ಕರುಳ ಬಳ್ಳಿಯನ್ನು ಮೊಬೈಲ್ ಚಾರ್ಜರ್‌ನಂತೆ ವಿನ್ಯಾಸಗೊಳಿಸಿದ್ದು, ಮೊಬೈಲ್ ನೋಡುವುದರಿಂದ ಕಣ್ಣಿಗೆ ಆಗುವ ಹಾನಿ, ಮೆದುಳಿನ ಮೇಲಾಗುವ ಪರಿಣಾಮವನ್ನು ಅತ್ಯಂತ ನೈಜವಾಗಿ ಚಿತ್ರಿಸಲಾಗಿದೆ.

ಕಲಾ ರಸಿಕರ ಸೆಳೆಯುವ ಜಾನಪದ ನೃತ್ಯ, ಸಂಗೀತ

ಮೈಸೂರು, ಸೆ.29(ಎಂಕೆ)– ಮೈಸೂರಿನ ಕಾವಾ ಕಾಲೇಜಿನಲ್ಲಿ ಚಿತ್ರಕಲೆಯೊಂದಿಗೆ ಜಾನಪದ ನೃತ್ಯ, ಕರ್ನಾಟಕ ಮತ್ತು ಹಿಂದೂಸ್ತಾನಿ ಸಂಗೀತ ಸಂಗಮ ಕಲಾರಸಿಕರ ಮನಗೆದ್ದಿತು. ನಾಡಹಬ್ಬ ಮೈಸೂರು ದಸರಾ ಮಹೋತ್ಸವದ ಅಂಗವಾಗಿ ಲಲಿತಕಲೆ ಮತ್ತು ಕರಕುಶಲ ಕಲೆ ಉಪ ಸಮಿತಿ ವತಿಯಿಂದ ಆಯೋಜಿಸಿರುವ ಸಾಂಸ್ಕೃತಿಕ ಕಾರ್ಯಕ್ರಮದಲ್ಲಿ ಸೋಮವಾರ ಕರ್ನಾಟಕ ರಾಜ್ಯ ಡಾ ಗಂಗೂಬಾಯಿ ಹಾನಗಲ್ ಸಂಗೀತ ಮತ್ತು ಪ್ರದರ್ಶಕ ಕಲೆಗಳ ವಿಶ್ವವಿದ್ಯಾಲಯ ಹಾಗೂ ದಕ್ಷಿಣ ವಲಯ ಸಾಂಸ್ಕೃತಿಕ ಕೇಂದ್ರದ ಕಲಾವಿದರು ಹಾಡು, ನೃತ್ಯದ ಮೂಲಕ ರಸದೌತಣ ನೀಡಿದರು.

ಸಂಗೀತ ವಿವಿ ವಿದ್ಯಾರ್ಥಿಗಳು ಕರ್ನಾಟಕ ಮತ್ತು ಹಿಂದೂಸ್ತಾನಿ ಸಂಗೀತ ಶೈಲಿಯಲ್ಲಿ ಹತ್ತು–ಹಲವು ಹಾಡುಗಳನ್ನು ಪ್ರಸ್ತುತಪಡಿಸಿ, ಸಂಗೀತ ಪ್ರಿಯರ ಮನತಣಿಸಿದರೆ, ದಕ್ಷಿಣ ವಲಯ ಸಾಂಸ್ಕೃತಿಕ ಕೇಂದ್ರ ಕಲಾವಿದರು ಜಾನಪದ, ಬುಡಕಟ್ಟು ನೃತ್ಯ ಪ್ರದರ್ಶನ ಅಪಾರ ಮೆಚ್ಚುಗೆ ಪಡೆದರು.

ಚಿತ್ರಕಲೆ ವೀಕ್ಷಣೆಗೆ ಆಗಮಿಸಿದ್ದ ನೂರಾರು ಮಂದಿ ಕಲಾವಿದರು, ಕಲಾಪ್ರೇಮಿಗಳು ನೃತ್ಯ–ಸಂಗೀತ ಕಾರ್ಯಕ್ರಮ ವೀಕ್ಷಿಸಿ ಸಂಭ್ರಮಿಸಿದರು. ಲಲಿತಕಲೆ ಮತ್ತು ಕರಕುಶಲ ಕಲೆ ಉಪ ಸಮಿತಿ ಕಾರ್ಯಾಧ್ಯಕ್ಷರಾದ ನಿರ್ಮಲ ಮಠಪತಿ ಸೇರಿದಂತೆ ಸಮಿತಿ ಪದಾಧಿಕಾರಿಗಳು ಉಪಸ್ಥಿತರಿದ್ದರು.

ಬ್ಲಾಕ್...

ಮೈಸೂರು ಮಿತ್ರ ಮಂಗಳವಾರ 30 ಸೆಪ್ಟೆಂಬರ್ 2025

ಬಡತನದ ಬದುಕಿನಲ್ಲಿ ಆನಂದ ಕಂಡ ಜನಪದರು



ಭತ್ತವನ್ನು ಒನಕೆಯಲ್ಲಿ ಕುಟ್ಟಿ ಜಾನಪದ ದಸರಾಕ್ಕೆ ಪೊನ್ನಣ್ಣ ಚಾಲನೆ ನೀಡಿದರು.



ವಿದ್ಯಾರ್ಥಿಗಳು ಜಾನಪದ ಪ್ರದರ್ಶನ ನೀಡುತ್ತಿರುವುದು.

ಮಡಿಕೇರಿ,ಸೆ.29–ಜನಪದರಿಂದ ಹೊರಹೊಮ್ಮಿದ ಜಾನಪದ ಹಾಡು ಮತ್ತು ಸಂಸ್ಕೃತಿಯು ವಿಶಾಲ ಸಮುದ್ರದಂತೆ ಹರಡಿ ಸಂತೋಷವನ್ನು ಉಣಬಡಿಸುತ್ತಿದೆ ಎಂದು ಕೃಷಿಕ ಮಹಿಳೆ ಭಾಗೀರಥಿ ಹುಲಿತಾಳ ವ್ಯಾಖ್ಯಾನಿಸಿದ್ದಾರೆ

ನಗರ ದಸರಾ ಸಮಿತಿ, ದಸರಾ ಸಾಂಸ್ಕೃತಿಕ ಸಮಿತಿಗಳ ಸಹಯೋಗದೊಂದಿಗೆ ಜಿಲ್ಲಾ ಜಾನಪದ ಪರಿಷತ್‌ನಿಂದ ನಗರದ ಗಾಂಧಿ ಮೈದಾನದಲ್ಲಿ ಏರ್ಪಡಿಸಿದ್ದ 5ನೇ ವರ್ಷದ 'ಜಾನಪದ ದಸರಾ' ಉತ್ಸವವನ್ನು ಶಾಸಕ ಎ.ಎಸ್. ಪೊನ್ನಣ್ಣ ಅವರೊಂದಿಗೆ ಪರೆಗೆ ಅಕ್ಕಿ ಹಾಕುವುದರ ಮೂಲಕ ಉದ್ಘಾಟಿಸಿ ಜಾನಪದರು ಮುಂಜಾನೆಯಿಂದ ಮುಸ್ಸಂಜೆವರೆಗಿನ ಎಡೆಬಿಡದ ದುಡಿಮೆಯ ಆಯಾಸವನ್ನು ಜಾನಪದ ಹಾಡುಗಳು ಮರೆಯಾಗಿಸುತ್ತಿತ್ತೆಂದು, ಜಾನಪದ ಹಾಡುಗಳ ಮೂಲಕ ತಿಳಿಸಿದರು.

ಬದುಕು ಎನ್ನುವುದು ಬಡತನವನ್ನೆ ಹೊದ್ದು ಮಲಗಿದ್ದರೂ ಜನಪದರು ಅದನ್ನೆಂದು ಸಂಕಷ್ಟವೆಂದು ಪರಿಗಣಿಸದೆ ಬದುಕಿನ ಪ್ರತಿ ಕ್ಷಣವನ್ನು ಆನಂದಿಸಿದರು. ಕೊಡುವುದು ಎನ್ನುವುದರಲ್ಲೆ ಜನಪದರು ಸಂತೋಷವನ್ನು ಕಾಣುತ್ತಿದ್ದರೆಂದು ಬಣ್ಣಿಸಿದರು. ಜನಪದ ಹಾಡುಗಳಲ್ಲಿ ಹೆಣ್ಣು ವಿವಾಹವಾಗಿ ಗಂಡನ ಮನೆಗೆ ತೆರಳುವಾಗಿನ ಆಕೆಯ ದುಃಖ ದುಮ್ಮಾನಗಳಿರಬಹುದು, ಅಣ್ಣನೆಡೆಗಿನ ಆಪ್ತತೆಯ ಭಾವಗಳನ್ನು, ಮುಂಜಾನೆಯ ಸುಂದರ ನೋಟಗಳನ್ನು, ಗಂಡು ಹೆಣ್ಣಿನ ಭಾವನೆಗಳನ್ನು ಜನಪದರು ಹಾಡುಗಳನ್ನಾಗಿ ಕಟ್ಟಿ ಕೊಟ್ಟಿದ್ದಾರೆಂದು ಸಂತಸ ವ್ಯಕ್ತಪಡಿಸಿದರು.

ಜಾನಪದ ದಸರಾಕ್ಕೆ ಚಾಲನೆ ನೀಡಿದ ಶಾಸಕ ಪೊನ್ನಣ್ಣ, ದಸರಾ ಎನ್ನುವುದು ಜಾತಿ ಧರ್ಮಗಳನ್ನು ಮೀರಿದ ನಾಡ ಹಬ್ಬವಾಗಿ ಎಲ್ಲೆಡೆ ಆಚರಿಸಲಾಗುತ್ತದೆ. ಈ ನೆಲದ ಶ್ರೀಮಂತ ಸಂಸ್ಕೃತಿ, ಪರಂಪರೆಗಳನ್ನು ವಿಶ್ವಕ್ಕೆ ಸಾರುವ ಹಬ್ಬ ಆಗಿದೆ ಎಂದು ಮೆಚ್ಚುಗೆ ವ್ಯಕ್ತಪಡಿಸಿದರು.

ರಾಜ್ಯ ಕೊಡವ ಸಾಹಿತ್ಯ ಅಕಾಡೆಮಿ ಅಧ್ಯಕ್ಷ ಅಜ್ಜಿನಿಕಂಡ ಮಹೇಶ್ ನಾಚಯ್ಯ, ಕರ್ನಾಟಕ ಅರೆಭಾಷಾ ಸಾಹಿತ್ಯ ಅಕಾಡೆಮಿ ಅಧ್ಯಕ್ಷ ಸದಾನಂದ ಮಾವಾಜಿ, ಮಡಿಕೇರಿ ದಸರಾ ಸಮಿತಿ ಅಧ್ಯಕ್ಷೆ ಪಿ. ಕಲಾವತಿ, ನಗರಸಭಾ ಉಪಾಧ್ಯಕ್ಷ ಮಹೇಶ್ ಜೈನಿ ಉತ್ಸವಕ್ಕೆ ಶುಭ ಕೋರಿದರು.

ದಸರಾ ಉತ್ಸವ ಸಮಿತಿ ಕಾರ್ಯಾಧ್ಯಕ್ಷ ಬಿ.ಕೆ.ಅರುಣ್ ಕುಮಾರ್ ಜಿಲ್ಲಾ ಜನಪದ ಪರಿಷತ್ ಅಧ್ಯಕ್ಷ ಬಿ.ಜಿ.ಅನಂತಶಯನ, ಜಾನಪದ ದಸರಾ ಸಂಚಾಲಕ ಅನಿಲ್ ಹೆಚ್.ಟಿ. ಮಾತನಾಡಿದರು.

ವೇದಿಕೆಯಲ್ಲಿ ದಸರಾ ಸಾಂಸ್ಕೃತಿಕ ಸಮಿತಿ ಅಧ್ಯಕ್ಷ ಕುಡೆಕಲ್ಲು ಸಂತೋಷ್, ದಸರಾ ಸಮಿತಿ ಪ್ರಧಾನ ಕಾರ್ಯದರ್ಶಿ ಅರುಣ್‌ಶೆಟ್ಟಿ, ಜಾನಪದ ಪರಿಷತ್ ಪ್ರಧಾನ ಕಾರ್ಯದರ್ಶಿ ಮುನೀರ್ ಅಹಮ್ಮದ್, ಖಜಾಂಚಿ ಸಂಪತ್ ಕುಮಾರ್, ಕಾರ್ಯದರ್ಶಿ ಉಜ್ವಲ್ ರಂಜಿತ್, ಜಾನಪದ ಪರಿಷತ್ ತಾಲೂಕು ಅಧ್ಯಕ್ಷ ಚಂದ್ರಮೋಹನ್,ಟೋಮಿ ಥಾಮಸ್, ದಿಲನ್ ಚಂಗಪ್ಪ, ಪ್ರಕಾಶ್, ಹೋಬಳಿ ಅಧ್ಯಕ್ಷ ಸುಜಲಾದೇವಿ, ಪ್ರಶಾಂತ್, ಗಣ್ಯರಿದ್ದರು

ಮೂರ್ನಾಡು ಜಾನಪದ ಪರಿಷತ್ ಏರ್ಪಡಿಸಿದ್ದ ಜಾನಪದ ವಸ್ತುಗಳ ಪ್ರದರ್ಶನ ಗಮನ ಸೆಳೆಯಿತು. ಜಾನಪದ ದಸರಾ ಆರಂಭಕ್ಕೂ ಮುನ್ನ ನಗರದ ಜ.ತಿಮ್ಮಯ್ಯ ವೃತ್ತದ ಬಳಿಯಿಂದ ವೇದಿಕೆವರೆಗೆ ಡೊಳ್ಳು ಕುಣಿತ, ಪಟ ಕುಣಿತ, ಚೆಂಡೆ ವಾದ್ಯ ತಂಡಗಳೊಂದಿಗೆ ಆಕರ್ಷಕ ಮೆರವಣಿಗೆ ನಡೆಯಿತು.

ಮಲಯಾಳಿ ಬಾಂಧವರಿಂದ ಓಣಂ ಆಚರಣೆ



ಮಲಯಾಳಿ ಬಾಂಧವರು ಪಟ್ಟಣದ ಪ್ರಮುಖ ಬೀದಿಗಳಲ್ಲಿ ಘೋಷಯಾತ್ರೆ ನಡೆಸಿದರು.


ಸುಂಟಿಕೊಪ್ಪ: ಮಲಯಾಳಿ ಸಮಾಜದಿಂದ 18ನೇ ವರ್ಷದ ಓಣಂ ಆಚರಣೆ ಪ್ರಯುಕ್ತ ಕೇರಳದ ಚಂಡೆಯೊಂದಿಗೆ ಮಾವೆಲಿ ವೇಷಧಾರಿಯೊಂದಿಗೆ ಮಲಯಾಳಿ ಬಾಂಧವರು ಪಟ್ಟಣದ ಪ್ರಮುಖ ಬೀದಿಗಳಲ್ಲಿ ಘೋಷಯಾತ್ರೆ ನಡೆಸಿದರು.

ಓಣಂ ಆಚರಣೆ ಅಂಗವಾಗಿ ಮಲಯಾಳಿ ಬಾಂಧವರು ಕೇರಳ ಸಾಂಪ್ರದಾಯಿಕ ಶೈಲಿಯಲ್ಲಿ ಮಹಿಳೆಯರು ಹಾಗೂ ಪುರುಷರು ಮೆರವಣಿಗೆಯಲ್ಲಿ ಸಾಗಿದರು. ಮಂಜನಾಥಯ್ಯ ಮೀನಾಕ್ಷಮ್ಮ ಕಲ್ಯಾಣ ಮಂಟಪದಿಂದ ಹೊರಟ ಘೋಷಯಾತ್ರೆ ವಾಮನ, ಮಾವೆಲಿ ಚಕ್ರವರ್ತಿ, ಕತಕಳ್ಳಿ, ಮೋಹಿನಿ, ತಿರುವಾದಿರ, ಹುಲಿವೇಷ ಹಾಗೂ ಆನಕಲಾಕೃತಿಯ ಮೆರವಣಿಗೆಯೊಂದಿಗೆ ಪಟ್ಟಣದ ಪ್ರಮುಖ ಬೀದಿಗಳಲ್ಲಿ ಸಾಗಿ ಕಲ್ಯಾಣ ಮಂಟಪದಲ್ಲಿ ಸಮಾಪ್ತಿಗೊಂಡಿತು.

ಸಮಾಜದ ಅಧ್ಯಕ್ಷ ರಮೇಶ್‌ಪಿಳ್ಳೆ, ಉಪಾಧ್ಯಕ್ಷರಾದ ವಾಸುದೇವ, ಟಿ.ಕೆ. ಹರೀಶ್, ಪ್ರಧಾನ ಕಾರ್ಯದರ್ಶಿ ಕೆ.ಎಸ್.ಅನಿಲ್, ಖಜಾಂಚಿ ಅನೀಶ್.ಕೆ, ಸಹ ಕಾರ್ಯದರ್ಶಿಗಳಾದ ಗಿರೀಶ್, ಜಿ.ಪಿ.ಅನಿಲ್‌ಕುಮಾರ್ ಸಂಘಟನಾ ಕಾರ್ಯದರ್ಶಿಗಳಾದ ಕೆ. ರಾಜೇಶ್, ವಿ.ಕೆ.ರಾಜು, ಕ್ರೀಡಾ ಕಾರ್ಯದರ್ಶಿಗಳಾದ ಪಿ.ಸಿ.ಸುರೇಶ್, ಬಿಜು.ಪಿ.ಆರ್, ಭಾಸ್ಕರನ್, ವೇಲಾಯುಧನ್, ಪಿ.ಆರ್. ಸುನಿಲ್‌ಕುಮಾರ್, ಸದಸ್ಯೆ ಶಾಂತಿ ಪಾಲ್ಗೊಂಡಿದ್ದರು.

ರಾಜ್ಯ ಮಟ್ಟದ ವಿಜ್ಞಾನ ಸ್ಪರ್ಧೆಗೆ ಗಾನವಿ ಆಯ್ಕೆ

ನಾಪೋಕ್ಲು, ಸೆ.29– ರಾಜ್ಯಮಟ್ಟದ ವಿಜ್ಞಾನ ಸ್ಪರ್ಧೆಗೆ ಚೇರಂಬಾಣೆಯ ಶ್ರೀ ರಾಜರಾಜೇಶ್ವರಿ ಆಂಗ್ಲ ಮಾಧ್ಯಮ ಶಾಲೆಯ ಹತ್ತನೇ ತರಗತಿಯ ವಿದ್ಯಾರ್ಥಿನಿ ಗಾನವಿ ಆಯ್ಕೆಯಾಗಿದ್ದಾರೆ.



ಎನ್.ಡಿ ಡಿಫರೆಂಟ್ ಟೈಪ್ ಆಫ್ ಡಿಸಾಸ್ಟರ್ ಎಲರ್ಟ್ ಎಂಬ ವಿಷಯದ ಮಾಡೆಲ್ ಅನ್ನು ತಯಾರಿಸಿ ಜಿಲ್ಲೆಯಿಂದ ರಾಜ್ಯಮಟ್ಟಕ್ಕೆ ಆಯ್ಕೆ ಆಗಿದ್ದಾರೆ.

ಶಿಕ್ಷಣ ಇಲಾಖೆಯ ವಿಜ್ಞಾನ ಮತ್ತು ಗಣಿತ ವಿಭಾಗವು ನಡೆಸಿದ ಜಿಲ್ಲಾ ಮಟ್ಟದ ಸುಸ್ಥಿರ ಭವಿಷ್ಯಕ್ಕಾಗಿ ವಿಜ್ಞಾನ ಮತ್ತು ತಂತ್ರಜ್ಞಾನ ಎಂಬ ವಿಷಯದಡಿ ಸ್ಪರ್ಧೆಗೆ ಜಿಲ್ಲೆಯಿಂದ ಆಯ್ಕೆಯಾಗಿರುವ ಏಕೈಕ ವಿದ್ಯಾರ್ಥಿನಿ ಅ.4ರಂದು ಬೆಂಗಳೂರಿನಲ್ಲಿ ನಡೆಯುವ ಸ್ಪರ್ಧೆಯಲ್ಲಿ ಗಾನವಿ ಎನ್.ಡಿ ಭಾಗವಹಿಸಲಿರುವರು. ಈಕೆ ಭಾಗಮಂಡಲ ನಿವಾಸಿ ನಿಡ್ಯಮಲೆ ದೇವಾನಂದ ಮತ್ತು ಪ್ರತಿಮಾ ದಂಪತಿಯ ಪುತ್ರಿ.

ಮುತ್ತಪ್ಪ ಮಲಯಾಳಿ ಸಮಾಜದಿಂದ ಓಣಂ ಆಚರಣೆ

ವಿರಾಜಪೇಟೆ, ಸೆ.29–ಸಂಸ್ಕೃತಿ ಸಂಪ್ರದಾಯ ಆಚಾರ ವಿಚಾರಗಳನ್ನು ಉಳಿಸಿ ಬೆಳೆಸುವ ನಿಟ್ಟಿನಲ್ಲಿ ಮಲಯಾಳಿ ಸಮಾಜ ಬಾಂಧವರು ಪ್ರತಿ ವರ್ಷವು ಓಣಂ ಅನ್ನು ಅಚರಿಸಿಕೊಂಡು ಬರುತ್ತಿರುವುದು ಉತ್ತಮ ಕಾರ್ಯವಾಗಿದೆ ಎಂದು ಶಾಸಕ ಎ.ಎಸ್.ಪೊನ್ನಣ್ಣ ಹೇಳಿದರು.



ಓಣಂ ಆಚರಣೆ ಸಮಾರಂಭದಲ್ಲಿ ಶಾಸಕ ಎ.ಎಸ್.ಪೊನ್ನಣ್ಣ ಮಾತನಾಡಿದರು.

ಶ್ರೀ ಮುತ್ತಪ್ಪ ಮಲಯಾಳಿ ಸಮಾಜವು ಪಟ್ಟಣದ ಚೈತನ್ಯ ಮಠಪುರ ಮುತ್ತಪ್ಪ ದೇವಸ್ಥಾನದಲ್ಲಿ ನಡೆದ 17ನೇ ವರ್ಷದ ಓಣಂ ಆಚರಣೆಯಲ್ಲಿ ಮಾತನಾಡಿ, ಮಲಯಾಳಿ ಸಮಾಜದವರು ವಿಶಿಷ್ಟ ರೀತಿಯಲ್ಲಿ ಧೀಮಂತ ಸಂಸ್ಕೃತಿ ಸಂಪ್ರದಾಯ ಆಚಾರ ವಿಚಾರ ಉಳಿಸಿ ಬೆಳೆಸುವ ನಿಟ್ಟಿನಲ್ಲಿ ಸಂಘಟನೆಗಳು ಓಣಂ ಅನ್ನು ಪ್ರತಿ ವರ್ಷ ಆಚರಿಸುತ್ತಿರುವುದು ಶ್ಲಾಘನಿಯ. ಕೊಡಗು ಜಿಲ್ಲೆಗೂ ನೆರೆಯ ಕೇರಳಕ್ಕೂ ಅವಿನಾಭಾವ ಸಂಬಂಧ. ಇಲ್ಲಿ ಆರಾಧಿಸುವ ಅನೇಕ ದೈವ ದೇವರು ಕೇರಳದಿಂದ ಬಂದಿದೆ ಎಂದರು.

ವಿಧಾನಪರಿಷತ್ ಸದಸ್ಯ ಎಂ.ಪಿ. ಸುಜಾ ಕುಶಾಲಪ್ಪ ಮಾತನಾಡಿ ಮಲಯಾಳಿ ಸಮಾಜದವರು ತಮ್ಮ ಸಂಸ್ಕೃತಿ ಸಂಪ್ರದಾಯ ಪದ್ದತಿ ಪರಂಪರೆಯನ್ನು ಮುಂದಿನ ಪೀಳಿಗೆಗೆ ಉಳಿಸಲು ಓಣಂ ಹಬ್ಬ ಹಾಗೂ ಅನೇಕ ಕಾರ್ಯಕ್ರಮವನ್ನು ಆಚರಿಸಿಕೊಂಡು ಬರುತ್ತಿರುವುದು ಶ್ಲಾಘನಿಯ ಎಂದು ಹೇಳಿದರು.

ಸಮಾಜದ ಅಧ್ಯಕ್ಷ ಪಿ.ಜಿ.ಸುಮೇಶ್ ಅಧ್ಯಕ್ಷತೆ ವಹಿಸಿದ್ದರು. ಪುರಸಭೆ ಅಧ್ಯಕ್ಷ ಎಂ.ಕೆ.ದೇಚಮ್ಮ ಕಾಳಪ್ಪ ಮಾತನಾಡಿದರು.

ವೇದಿಕೆಯಲ್ಲಿ ಪುರಸಭಾ ಸದಸ್ಯ ಎಂ.ಕೆ. ಕುಟ್ಟಪ್ಪ, ಹಮೀದ್, ಎಸ್‌ಎನ್‌ಡಿಪಿ ಅಧ್ಯಕ್ಷ ಟಿ.ಎ. ನಾರಾಯಣ, ಹಿಂದೂ ಮಲಯಾಳಿ ಸಮಾಜದ ಮಹಿಳಾ ಘಟಕದ ಅಧ್ಯಕ್ಷೆ ಶೀಭಾ ಪ್ರಥ್ವಿನಾಥ್, ಮುತ್ತಪ್ಪ ದೇವಸ್ಥಾನ ಅಧ್ಯಕ್ಷ ಟಿ.ಕೆ.ರಾಜನ್. ಓಣಂ ಆಚರಣೆ ಸಮಿತಿ ಸದಸ್ಯರು ಉಪಸ್ಥಿತರಿದ್ದರು.

ಮಹಾಬಲಿಯ (ಮಾವೇಲಿ) ಮೆರವಣಿಗೆಯು ಚೈತನ್ಯ ಮಠಪುರ ಮುತ್ತಪ್ಪ ದೇವಸ್ಥಾನದಿಂದ ಕೇರಳದ ಚಿಂಗಾರಿ ಮೇಳಂ ಹಾಗೂ ಚಂಡೆ ಮದ್ದಾಳೆಯೊಂದಿಗೆ ಹೊರಟು ಖಾಸಗಿ ಬಸ್ ನಿಲ್ದಾಣ, ಸುಣ್ಣದ ಬೀದಿ, ಕೆಎಸ್‌ಆರ್‌ಟಿಸಿ ಬಸ್ ನಿಲ್ದಾಣದ ಮಾರ್ಗವಾಗಿ, ದೊಡ್ಡಟ್ಟಿ ಚೌಕಿ, ಗಡಿಯಾರ ಕಂಬದ ಮುಖ್ಯ ರಸ್ತೆಯಲ್ಲಿ ಸಾಗಿ ಮುತ್ತಪ್ಪ ದೇವಸ್ಥಾನ ತಲುಪಿದ ಬಳಿಕ ವಿವಿಧ ಸಾಂಸ್ಕೃತಿಕ ಕಾರ್ಯಕ್ರಮಗಳು, ಓಣಂ ಪ್ರತಿಭಾವಂತ ವಿದ್ಯಾರ್ಥಿಗಳು ಮತ್ತು ವಿವಿಧ ಕ್ಷೇತ್ರದಲ್ಲಿ ಸಾಧನೆಗೈದವರನ್ನು ಸನ್ಮಾನಿಸಿ ನೆನಪಿನ ಕಾಣಿಕೆ ನೀಡಲಾಯಿತು.

ಸಮೀಕ್ಷಾ ಕಾರ್ಯಕ್ಕೆ ಬಿಜೆಪಿಯಿಂದ ಗೊಂದಲ

ಮಡಿಕೇರಿ, ಸೆ.29–ಸಂವಿಧಾನವನ್ನು ಅರ್ಥ ಮಾಡಿಕೊಂಡಿರುವವರು ಸಾಮಾಜಿಕ ಮತ್ತು ಶೈಕ್ಷಣಿಕ ಸಮೀಕ್ಷೆಯನ್ನು ವಿರೋಧಿಸುವುದಿಲ್ಲ. ಸಾಮಾಜಿಕ ಮತ್ತು ಶೈಕ್ಷಣಿಕ ಸಮೀಕ್ಷೆ ಕುರಿತು ಬಿಜೆಪಿ ಪಕ್ಷದವರು ಗೊಂದಲ ಹುಟ್ಟು ಹಾಕುತ್ತಿದ್ದಾರೆ ಎಂದು ಶಾಸಕ ಪೊನ್ನಣ್ಣ ಆರೋಪಿಸಿದ್ದಾರೆ.



ಸುದ್ದಿಗೋಷ್ಠಿಯಲ್ಲಿ ಶಾಸಕ ಎ.ಎಸ್.ಪೊನ್ನಣ್ಣ ಮಾತನಾಡುತ್ತಿರುವುದು.

ಸಮಾಜದಲ್ಲಿ ಹಿಂದುಳಿದಿರುವವರನ್ನು ಗುರುತಿಸುವ ಕೆಲಸವನ್ನು ಸರಕಾರ ಮಾಡುತ್ತಿದೆ. ಜನಗಣತಿ ಮಾಡುತ್ತಿಲ್ಲ. ಬದಲಿಗೆ ಸಾಮಾಜಿಕ ಮತ್ತು ಶೈಕ್ಷಣಿಕ ಸಮೀಕ್ಷೆ ಮೂಲಕ ಸಾಮಾಜಿಕವಾಗಿ ಹಿಂದುಳಿದವರನ್ನು, ಶೋಷಿತರನ್ನು ಗುರುತಿಸುವ ಕೆಲಸ ಮಾಡುತ್ತಿದೆ. ಸರಕಾರ ಯಾವುದೇ ಯೋಜನೆಯನ್ನು ಜಾರಿಗೊಳಿಸುವ ಸಂದರ್ಭ ಅದರ ಫಲವನ್ನು ಸಮಾಜದ ಹಿಂದುಳಿದವರು ಮತ್ತು ಶೋಷಿತರಿಗೆ ತಲುಪ ಬೇಕಾದದ್ದು ಅವರ ಸಂವಿಧಾನಬದ್ಧ ಹಕ್ಕಾಗಿದೆ. ಆದರೆ ಹಿಂದುಳಿದವರು ಮತ್ತು ಶೋಷಿತರ ಬಗ್ಗೆ ಕಾಳಜಿ ಇಲ್ಲದೇ ಬಿಜೆಪಿ ಮುಖಂಡರು ಕೇವಲ ಮೊಸಳೆ ಕಣ್ಣೀರು ಸುರಿಸುತ್ತಾ ರಾಜಕೀಯ ಮಾಡುತ್ತಿದ್ದಾರೆ ಎಂದು ಸುದ್ದಿಗೋಷ್ಠಿಯಲ್ಲಿ ಟೀಕಿಸಿದರು.

ಬಿಜೆಪಿ ಕಾರ್ಯಕರ್ತ ವಿನಯ್ ಸೋಮಯ್ಯ ಆತ್ಮಹತ್ಯೆ ಪ್ರಕರಣದಲ್ಲಿ ತಮ್ಮನ್ನೂ, ಸೇರಿ ಶಾಸಕ ಡಾ.ಮಂತರ್‌ಗೌಡ ಹಾಗೂ ತೆನ್ನೀರಾ ಮೈನಾ ಅವರನ್ನು ಎಳೆದು ತರುವ ಮೂಲಕ ರಾಜಕೀಯ ಬೇಳೆ ಬೇಯಿಸಿಕೊಳ್ಳಲು ಬಿಜೆಪಿಯವರು ಮುಂದಾಗಿದ್ದರು. ಆದರೆ ವಿನಯ್ ಸೋಮಯ್ಯ ಆತ್ಮಹತ್ಯೆ ಪ್ರಕರಣಕ್ಕೆ ಸಂಬಂಧಿಸಿದಂತೆ ಬೆಂಗಳೂರಿನ ಹೆಣ್ಣೂರು ಮೃತ ವಿನಯ್ ಸೋಮಯ್ಯ ಆತ್ಮಹತ್ಯೆಗೂ ಶಾಸಕದ್ವಯರಿಗೂ ಯಾವುದೇ ಸಂಬಂಧವಿಲ್ಲ ಎಂದು ವಿನಯ್ ಪತ್ನಿ ವಿಚಾರಣೆ ಸಂದರ್ಭದಲ್ಲಿ ಪೊಲೀಸರಿಗೆ ಹೇಳಿಕೆ ನೀಡಿದ್ದರು. ಪೊಲೀಸರು ತನಿಖೆ ನಡೆಸಿ 3 ತಿಂಗಳ ಹಿಂದೆ ನ್ಯಾಯಾಲಯಕ್ಕೆ 'ಬಿ ರಿಪೋರ್ಟ್' ಸಲ್ಲಿಸಿದ್ದಾರೆ. ಈ ವರದಿಗೆ ಮೃತ ಸೋಮಯ್ಯ ಅವರ ಕುಟುಂಬವೂ ಆಕ್ಷೇಪ ವ್ಯಕ್ತಪಡಿಸಿಲ್ಲ ಎಂದು ಮಾಹಿತಿ ನೀಡಿದರು.

ವಿರಾಜಪೇಟೆಯ ರಸ್ತೆಗಳ ಅಭಿವೃದ್ಧಿಗೆ 150 ಕೋಟಿ ರೂಪಾಯಿಗಳ ಅನುದಾನ ಬಂದಿದ್ದು ಇದರಲ್ಲಿ ಮಳೆ ನಿಂತ ತಕ್ಷಣ 131 ಕಿಮೀ ರಸ್ತೆಗಳ ಅಭಿವೃದ್ಧಿ ಕಾಮಗಾರಿಯನ್ನು ಕೈಗೆತ್ತಿಕೊಳ್ಳಲಾಗುವುದು. ಇದಲ್ಲದೇ 25 ಕೋಟಿ ರೂಪಾಯಿಗಳ ವೆಚ್ಚದಲ್ಲಿ ಗ್ರಾಮೀಣ ರಸ್ತೆಗಳ ಅಭಿವೃದ್ಧಿ ಕಾಮಗಾರಿ ನಡೆಯುತ್ತಿದೆ. ಕೇವಲ ರಸ್ತೆಗಳ ಅಭಿವೃದ್ದಿಗೆ ಒತ್ತು ನೀಡುವುದರ ಜೊತೆಗೆ ಆಸ್ಪತ್ರೆಗಳ ಅಭಿವೃದ್ಧಿ, ವಿ.ಬಾಡಗದಲ್ಲಿ 30 ಕೋಟಿ ರೂ.ಗಳ ಅನುದಾನದಲ್ಲಿ ಕ್ರೀಡಾ ವಸತಿ ನಿಲಯ ಸ್ಥಾಪನೆ, ಗೋಣಿಕೊಪ್ಪ ಬಸ್ ನಿಲ್ದಾಣ ಸೇರಿದಂತೆ ವಿವಿಧ ಕ್ಷೇತ್ರ ಗಳ ಅಭಿವೃದ್ಧಿ ಮಾಡಲಾಗುತ್ತಿದೆ. ಜತೆಗೆ ದೇವಸ್ಥಾನ, ಚರ್ಚ್, ಮಸೀದಿಗಳ ಅಭಿವೃದ್ಧಿಗೆ ಅನುದಾನ ಒದಗಿಸಲಾಗಿದೆ ಎಂದು ಹೇಳಿದರು.

ಸುದ್ದಿಗೋಷ್ಠಿಯಲ್ಲಿ ಮುಖಂಡರಾದ ಅರುಣ್ ಮಾಚಯ್ಯ, ಟಾಟು ಮೊಣ್ಣಪ್ಪ, ಕೊಲ್ಯದ ಗಿರೀಶ್, ಅಪ್ರು ರವೀಂದ್ರ, ರಂಜಿ ಪೂಣಚ್ಚ, ಸೂರಜ್ ಹೊಸೂರು ಸೇರಿದಂತೆ ಮತ್ತಿತರರು ಉಪಸ್ಥಿತರಿದ್ದರು.

ಯುವ ಕಲಾವಿದರ ದಸರೆಗೆ ಎ.ಆರ್.ಕೃಷ್ಣಮೂರ್ತಿ ಚಾಲನೆ

ಚಾಮರಾಜನಗರ, ಸೆ.29–ಜಿಲ್ಲೆಯ ಸ್ಥಳೀಯ ಜಾನಪದ ಕಲಾವಿದರಿಗೆ ನಮ್ಮ ಬೆಂಬಲ ಸದಕಾಲವೂ ಇರಲಿದೆ ಎಂದು ಶಾಸಕ ಎ.ಆರ್. ಕೃಷ್ಣಮೂರ್ತಿ ಭರವಸೆ ನೀಡಿದರು.



ಚಾಮರಾಜನಗರ ಜಿಲ್ಲಾ ಯುವ ಕಲಾವಿದರ ಬಳಗ ಆಯೋಜಿಸಿದ್ದ ದಸರಾ ಮಹೋತ್ಸವದ ಮೆರವಣಿಗೆಗೆ ಶಾಸಕ ಎ.ಆರ್. ಕೃಷ್ಣಮೂರ್ತಿ ಚಾಲನೆ ನೀಡಿದರು.

ನಗರದ ಶ್ರೀಚಾಮರಾಜೇಶ್ವರ ದೇವಸ್ಥಾನದ ಮುಂಭಾಗ ಜಿಲ್ಲಾ ಯುವ ಕಲಾವಿದರ ಬಳಗ ಆಯೋಜಿಸಿದ್ದ ದಸರಾ ಮಹೋತ್ಸವದ ಮೆರವಣಿಗೆಗೆ ಚಾಲನೆ ನೀಡಿ ಮಾತನಾಡಿ, 2013 ರಿಂದ ಸುಮಾರು 13 ವರ್ಷಗಳ ಕಾಲ ಜಿಲ್ಲೆಯಲ್ಲಿ ಸರ್ಕಾರ ವಿಜೃಂಭಣೆಯಿಂದ ಆಚರಿಸುತ್ತಿತ್ತು. ಆದರೆ, ಈ ಬಾರಿ ದಸರಾವನ್ನು ನಿಲ್ಲಿಸಿದ ಪರಿಣಾಮ ಜಿಲ್ಲೆಯ ಕಲಾವಿದರೆ ಸ್ವತಂತ್ರವಾಗಿ ಆಯೋಜನೆ ಮಾಡುವ ಮೂಲಕ ಸ್ವಯಂ ಪ್ರೇರಿತವಾಗಿ ಮುಂದೆ ಬಂದಿದ್ದು, ನಮ್ಮ ಸಂಪೂರ್ಣ ಬೆಂಬಲವಿದೆ ಎಂದರು.

ಮೈಸೂರಿನ ಜತೆಗೆ ಶ್ರೀರಂಗಪಟ್ಟಣ, ಮಡಿಕೇರಿ, ಶಿವಮೊಗ್ಗ, ತುಮಕೂರಿನಲ್ಲಿ ದಸರಾ ಮಾಡುತ್ತಿದ್ದು, ನಮ್ಮ ಜಿಲ್ಲೆಯಲ್ಲೂ ಸಹ ದಸರಾ ಆಯೋಜನೆ ಮಾಡಲು ಮನವಿ ಮಾಡಿದ್ದೆವು. ಆದರೆ, ಮುಖ್ಯಮಂತ್ರಿಗಳು ಒಲವು ತೋರಲಿಲ್ಲ. ಆದ್ದರಿಂದ ಮುಂದಿನ ವರ್ಷ ನಮ್ಮ ಜಿಲ್ಲೆಯಲ್ಲೂ ದಸರಾ ಆಯೋಜನೆ ಮಾಡುವಂತೆ ಜಿಲ್ಲೆಯ ಎಲ್ಲಾ ಶಾಸಕರ ಜೊತೆಗೂಡಿ ಮನವಿ ಮಾಡಲಾಗುವುದು ಎಂದು ಭರವಸೆ ನೀಡಿದರು.

ಅದ್ದೂರಿ ಮೆರವಣಿಗೆ: ಚಾಮರಾಜೇಶ್ವರ ದೇವಸ್ಥಾನದಲ್ಲಿ ಪ್ರಾರಂಭವಾದ ಮೆರವಣಿಗೆಯಲ್ಲಿ ವಿವಿಧ ಜಾನಪದ ಕಲಾತಂಡಗಳು ಭಾಗವಹಿಸುವ ಮೂಲಕ ಅದ್ದೂರಿಯಾಗಿ ನಡೆಯಿತು. ಮಂಗಳವಾದ್ಯ, ವೀರಗಾಸೆ, ಬ್ಯಾಂಡ್‌ಸೆಟ್, ಡೊಳ್ಳು ಕುಣಿತ, ತಮಟೆ, ಸಿದ್ದಪ್ಪಾಜಿ ಮಂಟೇಸ್ವಾಮಿ ಕಂಡಾಯ, ಸತ್ತಿಗೆ, ಶಿವನ ವೇಷಧಾರಿ, ಗೊರವರ ಕುಣಿತ, ಸೋಬಾನೆ ಪದ ಸೇರಿದಂತೆ ಹಲವಾರು ಕಲಾ ತಂಡಗಳು ಭಾಗಿಯಾಗಿದ್ದವು. ಈ ವೇಳೆ ಯುವಕರು, ಮಹಿಳೆಯರು ಕುಣಿದು ಕುಪ್ಪಳಿಸಿದರು.

ಸಮೂಹ ಗಾಯನದ ಮೂಲಕ ಉದ್ಘಾಟನೆ: ನಗರದ ಜಿಲ್ಲಾಡಳಿತ ಭವನದ ಮುಂಭಾಗದಲ್ಲಿರುವ ಡಾ.ರಾಜ್‌ಕುಮಾರ್ ಜಿಲ್ಲಾ ರಂಗಮಂದಿರದಲ್ಲಿ ಎರಡು ದಿನಗಳ ಕಾಲ ನಡೆದ ವೇದಿಕೆ ಕಾರ್ಯಕ್ರಮವನ್ನು, ಎಲ್ಲಾ ಕಲಾವಿದರು, ವೇದಿಕೆಯಲ್ಲಿದ್ದ ಗಣ್ಯರು ಹಾಗೂ ಸಭಿಕರೆಲ್ಲಾ ಒಗ್ಗೂಡಿ ಹಾಡು ಹೇಳುವ ಮೂಲಕ ವಿನೂತನವಾಗಿ ಉದ್ಘಾಟಿಸಲಾಯಿತು.

ಹಿರಿಯ ಸಾಹಿತಿ ಸೋಮಶೇಖರ್ ಬಿಸಲ್ವಾಡಿ ಮಾತನಾಡಿ, ಈ ದಸರಾ ಮಹೋತ್ಸವದಲ್ಲಿ ಕಲಾವಿದರ ಜನೋತ್ಸವವೇ ನೆರದಿದ್ದು, ತಮ್ಮ ದೊಡ್ಡ ಶಕ್ತಿಯನ್ನು ಪ್ರದರ್ಶನ ಮಾಡಿದ್ದಾರೆ. ಈ ಮೂಲಕ ನಮ್ಮನ್ನು ನಾವೇ ಗೌರವಿಸಿಕೊಳ್ಳುತ್ತಿದ್ದೇವೆ ಎಂದು ಹರ್ಷ ವ್ಯಕ್ತಪಡಿಸಿದರು.

ಕಲಾವಿದರಾದ ಶಿವಣ್ಣ, ವೇಣುಗೋಪಾಲ್, ಕೈಲಾಸಮೂರ್ತಿ, ನಾಗೇಂದ್ರಪ್ರಸಾದ್, ರಾಜು, ಶಂಕರ ಸಿ.ಅಂಕನಶೆಟ್ಟಿಪುರ, ತೊಳಸಮ್ಮ, ಹೊನ್ನಮ್ಮ, ವೆಂಕಟೇಶ್, ಶಿವರುದ್ರಸ್ವಾಮಿ, ಮಾದಶೆಟ್ಟಿ, ಕಾರ್ಯಕ್ರಮದ ಆಯೋಜಕರಾದ ಶಿವಶಂಕರಚೆಟ್ಟು, ಶಿವಕುಮಾರ್, ರಾಕ್ ಗಿರೀಶ್, ಮಂಜುಶ್ರೀ ರಾಂ, ರಮೇಶ್ ದಡದಹಳ್ಳಿ ಇತರರು ಉಪಸ್ಥಿತರಿದ್ದರು.

ನಗದು ಸೇರಿ 42 ಲಕ್ಷ ಮೌಲ್ಯದ ಚಿನ್ನಾಭರಣ ಕಳವು

ಗುಂಡ್ಲುಪೇಟೆ, ಸೆ.29(ಸೋಮ್.ಜಿ)– ಮನೆಯಲ್ಲಿ ಯಾರೂ ಇಲ್ಲದಿರುವುದನ್ನು ಗಮನಿಸಿದ ಕಳ್ಳರು ಮುಂಬಾಗಿಲು ಬೀಗ ಒಡೆದು ಲಕ್ಷಾಂತರ ರೂಪಾಯಿ ನಗ–ನಾಣ್ಯ ಕದ್ದೊಯ್ದಿರುವ ಘಟನೆ ಭಾನುವಾರ ರಾತ್ರಿ ಪಟ್ಟಣದ ಕುವೆಂಪುನಗರದಲ್ಲಿ ನಡೆದಿದೆ.



ಎಸ್‌ಪಿ ಡಾ.ಬಿ.ಟಿ.ಕವಿತಾ ಮತ್ತು ಸಿಬ್ಬಂದಿ ಕಳ್ಳತನ ನಡೆದ ಮನೆಗೆ ಭೇಟಿ ನೀಡಿ ಪರಿಶೀಲಿಸಿದರು.

ಪಟ್ಟಣದ ಕುವೆಂಪುನಗರದ (ಜನತಾ ಕಾಲೋನಿ) ನಿವಾಸಿ ಶ್ರೀ ಮದ್ದಾನೇಶ್ವರ ಮಹಾಮನೆಯ ಪಕ್ಕದಲ್ಲಿರುವ ಅಮೋಘ್ ಎಂಟರ್‌ಪ್ರೈಸಸ್ ಮಾಲೀಕ ಉಮೇಶ್ ಅವರ ಮನೆಯಲ್ಲಿ ಕಳ್ಳತನ ನಡೆದಿದೆ.

ನಿನ್ನೆ ಮೈಸೂರಿಗೆ ತಮ್ಮ ಕುಟುಂಬದವರೊಂದಿಗೆ ಕಾರ್ಯನಿಮಿತ್ತ ತೆರಳಿದ್ದು, ತಡರಾತ್ರಿ ಮನೆಗೆ ವಾಪಸ್ಸಾದಾಗ ಮುಂಬಾಗಿಲಿನ ಬಾಗಿಲನ್ನು ಹಾರೆ ಮತ್ತಿತರೆ ವಸ್ತುಗಳಿಂದ ಮುರಿದು ಮನೆಯಲ್ಲಿದ್ದ ಲಕ್ಷಾಂತರ ರೂ.ನಗದು ಮತ್ತು ಚಿನ್ನಾಭರಣ ದೋಚಿರುವುದು ಬೆಳಕಿಗೆ ಬಂದಿದೆ. ಇದನ್ನು ಗಮನಿಸಿದ ಉಮೇಶ್ ಪಟ್ಟಣ ಠಾಣೆ ಪೊಲೀಸರಿಗೆ ದೂರು ನೀಡಿದ್ದಾರೆ.

ಉಮೇಶ್ ಪತ್ನಿ, ಪುತ್ರಿಗೆ ಸೇರಿದ 12 ಲಕ್ಷ ಮೌಲ್ಯದ ಚಿನ್ನಾಭರಣ, ಲಕ್ಷ ಮೌಲ್ಯದ ಬೆಳ್ಳಿ ನಾಣ್ಯ ಗಳು, 29 ಲಕ್ಷ ನಗದು ಸೇರಿ ಒಟ್ಟು 42 ಲಕ್ಷ ಮೌಲ್ಯದ ವಸ್ತುಗಳು ಕಳ್ಳತನವಾಗಿರುವುದಾಗಿ ಪೊಲೀಸರಿಗೆ ನೀಡಿರುವ ದೂರಿನಲ್ಲಿ ಉಮೇಶ್ ತಿಳಿಸಿದ್ದಾರೆ.

ಸೋಮವಾರ ಬೆಳಿಗ್ಗೆ ಸ್ಥಳಕ್ಕೆ ಭೇಟಿ ನೀಡಿದ ಪೊಲೀಸ್, ಶ್ವಾನದಳ ಹಾಗೂ ಬೆರಳಚ್ಚು ತಂಡದವರು ಪರಿಶೀಲನೆ ನಡೆಸಿದ್ದು ಕಳ್ಳರ ಪತ್ತೆಗೆ ಕ್ರಮ ಕೈಗೊಂಡಿದ್ದಾರೆ. ಸ್ಥಳಕ್ಕೆ ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಡಾ.ಬಿ.ಟಿ.ಕವಿತಾ, ಎಎಸ್ಪಿ ಶಶಿಧರ್, ಡಿವೈಎಸ್‌ಪಿ ಸ್ನೇಹರಾಜ್, ಇನ್ಸ್‌ಪೆಕ್ಟರ್ ಜಯಕುಮಾರ್, ಸಬ್ ಇನ್ಸ್‌ಪೆಕ್ಟರ್ ಸಾಹೇಬಗೌರ ಭೇಟಿ ನೀಡಿ ಘಟನೆಯ ಬಗ್ಗೆ ಮನೆಯ ಮಾಲೀಕರಿಂದ ಮಾಹಿತಿ ಸಂಗ್ರಹಿಸಿದ್ದಾರೆ.

ಕುರುಬ ಸಮುದಾಯ ಎಸ್‌ಟಿ ಸೇರ್ಪಡೆಗೆ ವಿರೋಧಿಸಿ ಉಪವಾಸ

ಚಾ.ನಗರ: ಕುರುಬ ಸಮುದಾಯವನ್ನು ಎಸ್‌ಟಿಗೆ ಸೇರಿಸುವುದನ್ನು ವಿರೋಧಿಸಿ ನಗರದ ಜಿಲ್ಲಾಡಳಿತ ಭವನದ ಎದುರು ಉಪವಾಸ ಸತ್ಯಾಗ್ರಹ ನಡೆಯಿತು.

ನಗರದ ಜಿಲ್ಲಾಡಳಿತ ಭವನದ ಮುಂಭಾಗದಲ್ಲಿ ಮಾತನಾಡಿದ ನಾಯಕ ಸಮುದಾಯದ ಮುಖಂಡ ಅಗರರಾಜು, ಎಲ್.ಜಿ.ಹಾವನೂರು ವರದಿ ಕೊಟ್ಟು ಎಸ್‌ಟಿಯಲ್ಲಿರುವ ಕುರುಬ ಸಮುದಾಯವನ್ನು ಮುಂದುವರೆದಿದ್ದಾರೆ ಎಂದು ಹಿಂದುಳಿದ ವರ್ಗಕ್ಕೆ ಸೇರ್ಪಡೆ ಮಾಡಿದರು. 50 ವರ್ಷಗಳ ನಂತರ ಮತ್ತೆ ಹಿಂದುಳಿದಿದ್ದೇವೆ ಎಂದು ಕುರುಬ ಸಮುದಾಯ ಎಸ್‌ಟಿ ಸೇರ್ಪಡೆ ಮಾಡುವಂತೆ ಕೇಳುವುದು ಎಷ್ಟು ಸರಿ ಎಂದು ಪ್ರಶ್ನಿಸಿ, ಪ್ರಸ್ತುತ ಕುರುಬ ಸಮುದಾಯದ ಸ್ಥಿತಿಗತಿಗಳು, ಎಸ್‌ಟಿ ಸಮುದಾಯದ 50 ಜಾತಿಗಳ ಸ್ಥಿತಿಗತಿಗಳು ಹೇಗಿದೆ ಎಂಬುದನ್ನು ಅರಿಯಬೇಕು ಎಂದರು.

ಮುಂದಿನ ಚುನಾವಣೆಯ ಹಿನ್ನೆಲೆಯಲ್ಲಿ ಸಿದ್ದರಾಮಯ್ಯನವರು ಹುನ್ನಾರ ಮಾಡುತ್ತಿದ್ದಾರೆ. ರಾಜ್ಯ ಸರ್ಕಾರದಿಂದ ಕೇಂದ್ರ ಸರ್ಕಾರಕ್ಕೆ ಕುರುಬ ಸಮುದಾಯವನ್ನು ಎಸ್‌ಟಿ ಪಟ್ಟಿಗೆ ಸೇರಿಸುವಂತೆ ಶಿಫಾರಸು ಮಾಡಿ, ಪ್ರಧಾನಿ ಮೋದಿ ಮೇಲೆ ಕುರುಬ ಸಮುದಾಯದ ವಿರೋಧಿ ಎಂದು ಬಿಂಬಿಸಿ, ಮತಬ್ಯಾಂಕ್ ಗಟ್ಟಿಮಾಡಿಕೊಂಡು ಸಮುದಾಯಗಳ ನಡುವೆ ಎತ್ತಿಕಟ್ಟಿ ವೈಮನಸ್ಸು ಉಂಟು ಮಾಡುವ ಕೆಲಸ ಮಾಡುತ್ತಿದ್ದಾರೆ ಎಂದು ದೂರಿದರು.



ನಾಯಕ ಸಮುದಾಯದ ಮುಖಂಡರಿಂದ ಉಪವಾಸ ಸತ್ಯಾಗ್ರಹ.

ಸತ್ಯಾಗ್ರಹದಲ್ಲಿ ಸಿ.ಎಂ.ಕೃಷ್ಣಮೂರ್ತಿ, ಕಾವಲುಪಡೆ ಜಿಲ್ಲಾಧ್ಯಕ್ಷ ಪರಶಿವಮೂರ್ತಿ, ಯ.ದೇವರಾಜು ಯಳಂದೂರು, ಕೃಷ್ಣನಾಯಕ, ಕಂದಹಳ್ಳಿ ಮಹೇಶ್, ಪ್ರಸನ್ನ ಇರಸವಾಡಿ, ವೆಂಕಟಾಚಲ, ನಾಗೇಂದ್ರ ಹರದನಹಳ್ಳಿ ಇತರರಿದ್ದರು.

ಫಲಾನುಭವಿಗಳಿಗೆ ಮರಣ ಪರಿಹಾರ ವಿತರಣೆ



ಗುಂಡ್ಲುಪೇಟೆ: ಚಾಮರಾಜನಗರ ಸಹಕಾರಿ ಹಾಲು ಒಕ್ಕೂಟ ಹಾಗೂ ಚಾಮುಲ್ ರೈತ ಕಲ್ಯಾಣ ಟ್ರಸ್ಟ್‌ನಿಂದ ಮರಣ ಹೊಂದಿದ ಹಾಲು ಉತ್ಪಾದಕ ಸದಸ್ಯರ ವಾರಸುದಾರರಿಗೆ ನೀಡುವ ಮರಣ ಪರಿಹಾರವನ್ನು 25 ಫಲಾನುಭವಿಗಳಿಗೆ ತಲಾ 15 ಸಾವಿರದಂತೆ ಚೆಕ್‌ಗಳನ್ನು ವಿತರಿಸಿದರು.

ನಿರ್ದೇಶಕ ಹೆಚ್.ಎಸ್.ನಂಜುಂಡ ಪ್ರಸಾದ್ ಮಾತನಾಡಿ, ಮರಣ ಹೊಂದಿದ ಸದಸ್ಯರ ಮನೆಯವರಿಗೆ ನೀಡುವ ಪರಿಹಾರವನ್ನು ಸದುಪಯೋಗ ಪಡಿಸಿಕೊಳ್ಳಬೇಕು. 58 ವರ್ಷ ಒಳಪಟ್ಟಸದಸ್ಯರಿಗೆ ಸಂಘಗಳಲ್ಲಿ ಲಕ್ಷದವರೆಗೆ ವಿಮಾ ಸೌಲಭ್ಯಗಳಿದ್ದು ಅದನ್ನು ಪಡೆಯುವಂತೆ ಹಾಗೂ ರಾಸುಗಳಿಗಿರುವ ತುರ್ತು ಚಿಕಿತ್ಸಾ ವ್ಯವಸ್ಥೆಯನ್ನು ಬಳಸಿಕೊಳ್ಳುವಂತೆ ತಿಳಿಸಿದರು

ಖಾಸಗಿಯವರ ಆಮಿಷಕ್ಕೊಳಗಾಗದೆ ಸಹಕಾರ ಸಂಘಕ್ಕೆ ಹಾಲು ಸರಬರಾಜು ಮಾಡುವಂತೆ ಹಾಗೂ ಸಂಘದಲ್ಲಿ ರಾಸುಗಳಿಗೆ 2 ವರ್ಷಗಳ ಅವಧಿಗೆ ವಿಮಾ ಸೌಲಭ್ಯ ಮಾಡಿಕೊಳ್ಳುವಂತೆ ನಿರ್ದೇಶಕ ಸುನಿಲ್ ಹೇಳಿದರು. ವಿಸ್ತರಣಾಧಿಕಾರಿಗಳಾದ ಎಚ್. ಪ್ರಕಾಶ್, ಸಿದ್ದಲಿಂಗೇಶ್, ರಂಜಿತಾ, ಮುದ್ದಪ್ಪ, ಉದಯ್, ಮಂಜೇಶ್, ಫಲಾನುಭವಿಗಳು ಹಾಜರಿದ್ದರು

ಧರ್ಮದ ಕಾಲಂನಲ್ಲಿ ಬೌದ್ಧಧರ್ಮ ಎಂದೇ ನಮೂದಿಸಲು ಮನವಿ

ಇಂದು ಹೊಲಯ ಸಮುದಾಯದ ಜಿಲ್ಲಾ ಮಟ್ಟದ ವಿಚಾರ ಸಂಕಿರಣ

ಚಾಮರಾಜನಗರ : ಜಾತಿಗಣತಿ ಸಮೀಕ್ಷೆಯಲ್ಲಿ ಸಮುದಾಯದವರು ಧರ್ಮ, ಜಾತಿ, ಉಪ ಜಾತಿಗಳ ಬಗ್ಗೆ ಜಾಗೃತಗೊಳಿಸುವುದಕ್ಕಾಗಿ ಸೆ.30 ರಂದು ಜಿಲ್ಲಾ ಮಟ್ಟದ ವಿಚಾರ ಸಂಕಿರಣ ಹಮ್ಮಿಕೊಂಡಿರುವುದಾಗಿ ಜಿ.ಪಂ ಮಾಜಿ ಉಪಾಧ್ಯಕ್ಷ ಅಯ್ಯನಮರ ಶಿವಕುಮಾರ್ ತಿಳಿಸಿದ್ದಾರೆ.

ನಗರದ ಡಾ.ಬಿ.ಆರ್. ಅಂಬೇಡ್ಕರ್ ಭವನದಲ್ಲಿ ಬೆಳಿಗ್ಗೆ 11 ಗಂಟೆಗೆ ನಡೆಯಲಿರುವ ಈ ವಿಚಾರ ಸಂಕಿರಣದಲ್ಲಿ ಮೈಸೂರು ಉರಿಲಿಂಗಿ ಪೆದ್ದಿ ಮಠದ ಜ್ಞಾನಪ್ರಕಾಶ್ ಸ್ವಾಮೀಜಿ, ಸಂಸದ ಸುನೀಲ್ ಬೋಸ್, ಶಾಸಕ ಎ.ಆರ್.ಕೃಷ್ಣಮೂರ್ತಿ, ಮಾಜಿ ಶಾಸಕ ಜಿ.ಎನ್.ನಂಜುಂಡಸ್ವಾಮಿ, ಎನ್. ಮಹೇಶ್, ಎಸ್.ಬಾಲರಾಜು, ಐಎಫ್‌ಎಸ್ ನಿವೃತ್ತ ಅಧಿಕಾರಿ ಡಾ.ರಾಜು, ಜಿಲ್ಲೆಯ ಗಡಿಜನರು, ಕಟ್ಟೆಯ ಯಜಮಾನರು, ಚುನಾಯಿತ ಜನಪ್ರತಿಗಳು, ಸಂಘ– ಸಂಸ್ಥೆಗಳ ಮುಖಂಡರು ಭಾಗವಹಿಸುವರೆಂದು ಸುದ್ಧಿ ಗೋಷ್ಠಿಯಲ್ಲಿ ಹೇಳಿದರು.



ಚಾಮರಾಜನಗರ ಜಿಲ್ಲಾ ಕಾರ್ಯನಿರತ ಪತ್ರಕರ್ತರ ಭವನದಲ್ಲಿ ಪತ್ರಿಕಾಗೋಷ್ಠಿಯಲ್ಲಿ ಜಿ.ಪಂ.ಮಾಜಿ ಉಪಾಧ್ಯಕ್ಷ ಅಯ್ಯನಪುರ ಶಿವಕುಮಾರ್ ಮಾತನಾಡಿದರು.

ರಾಜ್ಯ ಸರ್ಕಾರ ಹಿಂದುಳಿದ ವರ್ಗದ ಆಯೋಗದ ಮೂಲಕ ಸೆ22 ರಿಂದ ನಡೆಸುತ್ತಿರುವ ಸಾಮಾಜಿಕ, ಶೈಕ್ಷಣಿಕ ಜಾತಿ ಗಣತಿ ಸಮೀಕ್ಷೆಯಲ್ಲಿ ಸಮುದಾಯದವರು ಧರ್ಮ ಕಾಲಂನಲ್ಲಿ ಬೌದ್ಧ ಧರ್ಮ, ಜಾತಿ ಕಾಲಂನಲ್ಲಿ ಪರಿಶಿಷ್ಟ ಜಾತಿ, ಉಪ ಜಾತಿ ಕಾಲಂನಲ್ಲಿ ಹೊಲೆಯ ಎಂದು ಬರೆಸಬೇಕು ಎಂದರು.

ಯಾವುದೇ ಧರ್ಮವನ್ನು ವಿರೋಧ ಮಾಡುವ ಅವಶ್ಯಕತೆಯಿಲ್ಲ. ಬುದ್ದ, ಅಂಬೇಡ್ಕರ್ ಅನುಯಾಯಿಗಳು ಜಾತಿಗಣತಿಯಲ್ಲಿ ಧರ್ಮದ ಕಾಲಂನಲ್ಲಿ ಬೌದ್ಧ ಧರ್ಮ ಎಂದು ನಮೂದಿಸಬೇಕು. ಅಂಬೇಡ್ಕರ್ ಅವರು ಬೌದ್ಧ ಧರ್ಮ ಸ್ವೀಕರಿಸಿದವರಿಂದ ದಲಿತರಿಗೆ ದೊರೆಯುವ ಮೀಸಲಾತಿಯಲ್ಲಿ ಯಾವುದೇ ತೊಂದರೆ ಆಗುವುದಿಲ್ಲ ಎಂದು ಹೇಳಿದ್ದಾರೆ. ಬೌದ್ಧ ಧರ್ಮ ಶಾಂತಿ, ಪ್ರೀತಿಯನ್ನು ಸಾರುವ ಧರ್ಮವಾಗಿದೆ. ಜಾತಿಯ ಕಾಲಂನಲ್ಲಿ ನಿಮ್ಮ ಜಾತಿಯನ್ನು ನಮೂದಿಸಿ ಆದರೆ ಧರ್ಮದ ಕಾಲಂನಲ್ಲಿ ಕಡ್ಡಾಯವಾಗಿ ಬೌದ್ಧ ಎಂದು ನಮೂದಿಸುವ ಮೂಲಕ ಅಂಬೇಡ್ಕರ್ ಆಶಯಕ್ಕೆ ಪೂರಕವಾಗಿ ನಾವೆಲ್ಲರೂ ನಡೆದುಕೊಳ್ಳಬೇಕಿದೆ ಎಂದರು.

ಈ ಸಮೀಕ್ಷೆಯಲ್ಲಿ ರೇಷನ್ ಕಾರ್ಡ್, ಆಧಾರ್ ಕಾರ್ಡ್ ಮೂಲಕ ಜಾತಿ ನಮೂದಿಸುವ ಪ್ರಕಾರವೇ ಆಯಾಯ ಜಾತಿ ಪ್ರಮಾಣ ಕೊಡಿಸಲು ಸರ್ಕಾರ ತಹಸೀಲ್ದಾರ್ ಕಚೇರಿ ಗಳಿಗೆ ಆದೇಶ ಹೊರಡಿಸಬೇಕು ಎಂದು ಒತ್ತಾಯಿಸಿದರು.

ತಾಪಂ ಮಾಜಿ ಅಧ್ಯಕ್ಷ ಆರ್.ಮಹದೇವು, ತಾಲೂಕು ಗ್ಯಾರಂಟಿ ಯೋಜನೆಗಳ ಪ್ರಾಧಿಕಾರ ಸಮಿತಿ ಅಧ್ಯಕ್ಷ ನಲ್ಲೂರು ಸೋಮೇಶ್ವರ ಮಾತನಾಡಿದರು. ಪತ್ರಿಕಾಗೋಷ್ಠಿಯಲ್ಲಿ ಮುಖಂಡರಾದ ಆರ್.ಪಿ.ನಂಜುಂಡಸ್ವಾಮಿ, ನಲ್ಲೂರು ಮಹದೇವಸ್ವಾಮಿ, ಸೋಮಣ್ಣ, ಗೋವಿಂದರಾಜ, ರಂಗಸ್ವಾಮಿ ಹಾಜರಿದ್ದರು.



ಚಾಮುಂಡಿ ಬೆಟ್ಟದಲ್ಲಿ ಇತ್ತೀಚಿನ ಸರಣಿ ಅಪಘಾತ ಪ್ರಕರಣ

ಸಾರಿಗೆ ಬಸ್ ಕಿಟಕಿಯಿಂದ ಹಾರಿದ್ದ ನಿವೃತ್ತ ಅಬಕಾರಿ ಇನ್ಸ್‌ಪೆಕ್ಟರ್ ಸಾವು

- ಮರು ದಿನ ಬೆಳಗ್ಗೆ ವಿದ್ಯುತ್ ಕಂಬ ಸರಿಪಡಿಸಲು ಹೋದ ಚೆಸ್ಕಾಂ ಸಿಬ್ಬಂದಿಗೆ ಮೃತದೇಹ ಪತ್ತೆ
- ಅಪಘಾತ ನಡೆದ ಸಂದರ್ಭದಲ್ಲಿ ಬಸ್ ಪ್ರಯಾಣಿಕರ ಪರಿಶೀಲಿಸಿದ್ದರೆ ಇವರ ರಕ್ಷಿಸಬಹುದಿತ್ತು



ಚಿಕ್ಕಬಸವೇಗೌಡ

ಮೈಸೂರು, ಸೆ.29(ಆರ್‌ಕೆ)– ಕಳೆದ ಶುಕ್ರವಾರ ಸಂಜೆ ಚಾಮುಂಡಿಬೆಟ್ಟದಲ್ಲಿ ಸಂಭವಿಸಿದ್ದ ಸರಣಿ ಅಪಘಾತದ ವೇಳೆ ಮೈಸೂರು ನಗರ ಸಾರಿಗೆ ಬಸ್ ಕಿಟಕಿಯಿಂದ ಹಾರಿದ್ದ ವ್ಯಕ್ತಿಯ ಮೃತದೇಹ, ಮರುದಿನ ಬೆಳಿಗ್ಗೆ ಪತ್ತೆಯಾಗಿದೆ.

ಮೈಸೂರಿನ ವಿಜಯನಗರ 4ನೇ ಹಂತ, 2ನೇ ಘಟ್ಟದ ನಿವಾಸಿ ಚಿಕ್ಕಬಸವೇಗೌಡ (72) ದುರಂತ ಸಾವಿಗೀಡಾದವರು. ಮೂಲತಃ ಚಾಮರಾಜನಗರ ಜಿಲ್ಲೆ, ಗುಂಡ್ಲುಪೇಟೆ ತಾಲೂಕು, ಹಂಗಳ ಗ್ರಾಮದವರಾದ ಇವರು ಅಬಕಾರಿ ಇಲಾಖೆಯಲ್ಲಿ ಇನ್ಸ್‌ಪೆಕ್ಟರ್ ಆಗಿ ಸೇವೆ ಸಲ್ಲಿಸಿ 12 ವರ್ಷಗಳ ಹಿಂದೆ ನಿವೃತ್ತರಾಗಿದ್ದರು. ಸೆಪ್ಟೆಂಬರ್ 26 ರಂದು ಬೆಳಿಗ್ಗೆ ಚಾಮುಂಡಿಬೆಟ್ಟಕ್ಕೆ ಹೋಗಿ ಬರುತ್ತೇನೆಂದು ಹೇಳಿ ಮನೆಯಿಂದ ಹೋಗಿದ್ದ ಚಿಕ್ಕಬಸವೇಗೌಡರು, ಅದರಂತೆ ನಗರ ಸಾರಿಗೆ ಬಸ್‌ನಲ್ಲಿ ಬೆಟ್ಟಕ್ಕೆ ತೆರಳಿ ತಾಯಿ ಚಾಮುಂಡೇಶ್ವರಿಯ ದರ್ಶನ ಪಡೆದು, ಲಾಡು ಪ್ರಸಾದ ಮತ್ತು ಪೂಜಾ ಸಾಮಗ್ರಿಗಳನ್ನು ಬ್ಯಾಗ್‌ನಲ್ಲಿಟ್ಟುಕೊಂಡು ಸಂಜೆ ಅಲ್ಲಿಂದ ನಗರ ಸಾರಿಗೆ ಬಸ್‌ನಲ್ಲೇ ಹಿಂದಿರುಗುತ್ತಿದ್ದರು.

ಬಸ್ ಚಾಮುಂಡಿ ಬೆಟ್ಟದ ಮಧ್ಯಭಾಗಕ್ಕೆ ಬರುತ್ತಿದ್ದಂತೆಯೇ ಚಾಲಕನ ನಿಯಂತ್ರಣ ಕಳೆದುಕೊಂಡು ಮೊದಲು ಬೆಟ್ಟಕ್ಕೆ ಅಪ್ಪಳಿಸಿ, ನಂತರ ಎರಡು ಕಾರುಗಳಿಗೆ ಢಿಕ್ಕಿ ಹೊಡೆಯಿತು. ಬಸ್ಸಿನ ಎಡಬದಿ ಕಿಟಕಿ ಪಕ್ಕ ಕುಳಿತಿದ್ದ ಚಿಕ್ಕಬಸವೇಗೌಡರು ಬಸ್ ಉರುಳಿ ಬೀಳಬಹುದು ಎಂಬ ಭೀತಿಯಿಂದ ಕಿಟಕಿಯಿಂದ ಹೊರಕ್ಕೆ ಹಾರಿದ್ದಾರೆ. ಹಾಗಾಗಿ ಅವರು ತಡೆಗೋಡೆ ಪಕ್ಕದ ಕಲ್ಲಿನ ಬಂಡೆ ಬಳಿ ಬಿದ್ದಿದ್ದಾರೆ. ಆದರೆ, ಯಾವುದೇ ಶಬ್ದ ಕೇಳಿಬರದ ಕಾರಣ, ಅಲ್ಲದೆ, ಅವರು ಹಾರಿದ್ದನ್ನು ಯಾರೂ ನೋಡದೇ ಇರದಿದ್ದರಿಂದ ಅವರ ಸ್ಥಿತಿ–ಗತಿ ಯಾರಿಗೂ ತಿಳಿಯಲಿಲ್ಲ.

ಅಪಘಾತ ಸಂಭವಿಸುತ್ತಿದ್ದಂತೆಯೇ ಬಸ್ ಚಾಲಕ, ನಿರ್ವಾಹಕ, ಸಂಚಾರ ಪೊಲೀಸರು, ಸಾರ್ವಜನಿಕರ ನೆರವಿನಿಂದ ಗಾಯಾಳುಗಳನ್ನು ಆಸ್ಪತ್ರೆಗೆ ಸಾಗಿಸುವುದು, ವಾಹನಗಳ ತೆರವುಗೊಳಿಸಿ ಸಂಚಾರಕ್ಕೆ ಅನುವು ಮಾಡಿಕೊಡುವುದರಲ್ಲಿ ನಿರತರಾಗಿದ್ದರು. ಆ ಸಂದರ್ಭ ಮಳೆ ಬೀಳುತ್ತಿದ್ದು, ಕತ್ತಲು ಆವರಿಸಿದ ಕಾರಣ ಯಾರಿಗೂ ಬಸ್‌ನಿಂದ ಹಾರಿದ ವ್ಯಕ್ತಿಯ ಪರಿವೇ ಬರಲಿಲ್ಲ. ಪರಿಣಾಮ ಚಿಕ್ಕಬಸವೇಗೌಡರು ಸ್ಥಳದಲ್ಲೇ ನರಳಿ–ನರಳಿ ಪ್ರಾಣ ಬಿಟ್ಟಿದ್ದಾರೆ.

ಈ ನಡುವೆ ಸಂಜೆಯಾದರೂ ಮನೆಗೆ ಹಿಂದಿರುಗದ ಕಾರಣ ಮನೆಯವರು ಚಿಕ್ಕ ಬಸವೇಗೌಡರಿಗಾಗಿ ಸಂಬಂಧಿಕರ ಮನೆ ಹಾಗೂ ಸ್ನೇಹಿತರ ವಿಚಾರಿಸಿದರಾದರೂ ಯಾವ ಸುಳಿವು ಸಿಗಲಿಲ್ಲ. ಇತ್ತ ಅವರ ಮೊಬೈಲ್‌ಗೆ ಕರೆ ಮಾಡಿದರೂ ನಾಟ್ ರೀಚಬಲ್ ಆಗಿತ್ತು.

ಕಡೆಗೆ ಚೆಸ್ಕಾಂ ಸಿಬ್ಬಂದಿ ಮರುದಿನ (ಸೆ. 27) ಬೆಳಿಗ್ಗೆ 10.30 ಗಂಟೆಗೆ ಅಪಘಾತದಿಂದ ಮುರಿದು ಬಿದ್ದಿದ್ದ ವಿದ್ಯುತ್ ಕಂಬ ರಿಪೇರಿ ಮಾಡಲು ಹೋದಾಗ ತಡೆ ಗೋಡೆ ಪಕ್ಕದಲ್ಲೇ ಒಂದು ಬ್ಯಾಗ್ ಕಾಣಿಸಿದೆ. ಅದರ ಸ್ವಲ್ಪ ದೂರದಲ್ಲೇ ವ್ಯಕ್ತಿಯ ಮೃತದೇಹವೂ ಪತ್ತೆಯಾಗಿದೆ.

ತಕ್ಷಣ ಸಿಬ್ಬಂದಿ ಪೊಲೀಸರಿಗೆ ಮಾಹಿತಿ ನೀಡಿದ ಹಿನ್ನೆಲೆಯಲ್ಲಿ ಸಿದ್ಧಾರ್ಥ ನಗರ ಸಂಚಾರ ಠಾಣೆ ಇನ್ಸ್‌ಪೆಕ್ಟರ್ ಕೆ.ವಿ. ಶ್ರೀಧರ್ ಹಾಗೂ ಸಿಬ್ಬಂದಿ ಸ್ಥಳಕ್ಕೆ ಧಾವಿಸಿ ಮಹಜರು ನಡೆಸಿದರು.

ಚಿಕ್ಕಬಸವೇಗೌಡರ ಪ್ಯಾಂಟ್ ಜೇಬಿನಲ್ಲಿ ದೊರೆತ ಮಾಹಿತಿ ಮೇರೆಗೆ ಪೊಲೀಸರು ಅವರ ಮಗ ಎಚ್.ಸಿ. ರಾಜೇಂದ್ರ ಅವರಿಗೆ ಕರೆ ಮಾಡಿ ವಿಷಯ ತಿಳಿಸಿದ್ದಾರೆ.

ಪ್ರಕರಣ ದಾಖಲಿಸಿಕೊಂಡಿರುವ ಸಿದ್ಧಾರ್ಥನಗರ ಸಂಚಾರ ಠಾಣೆ ಪೊಲೀಸರು ಮರಣೋತ್ತರ ಪರೀಕ್ಷೆ ಬಳಿಕ ದೇಹವನ್ನು ಶನಿವಾರ ಸಂಜೆ ವಾರಸುದಾರರಿಗೆ ಒಪ್ಪಿಸಿದರು. ಭಾನುವಾರ ಬೆಳಿಗ್ಗೆ ಗುಂಡ್ಲುಪೇಟೆ ತಾಲೂಕು ಹಂಗಳ ಗ್ರಾಮದಲ್ಲಿ ಅಂತ್ಯಕ್ರಿಯೆ ನೇರವೇರಿಸಲಾಯಿತು ಎಂದು ಚಿಕ್ಕಬಸವೇಗೌಡರ ಮಗನಾದ ವಕೀಲ ಎಚ್.ಸಿ. ರಾಜೇಂದ್ರ 'ಮೈಸೂರು ಮಿತ್ರ'ನಿಗೆ ತಿಳಿಸಿದರು.

ಮೃತರು ಪತ್ನಿ ಬಸಮ್ಮಣಿ, ಪುತ್ರರಾದ ಎಚ್.ಸಿ. ರಾಜೇಂದ್ರ, ಎಚ್.ಸಿ. ಶಿವಕುಮಾರ್, ಪುತ್ರಿ ಎಚ್.ಸಿ. ಮಮತಾ ಹಾಗೂ ಅಪಾರ ಬಂಧು–ಬಳಗದವರನ್ನು ಅಗಲಿದ್ದಾರೆ. ಅಪಘಾತದ ವೇಳೆ ಬಸ್‌ನಲ್ಲಿದ್ದವರ ಮಾಹಿತಿ ಪರಿಶೀಲಿಸಿದ್ದರೆ ನಮ್ಮ ಯಜಮಾನರ ಉಳಿಸಬಹುದಿತ್ತು ಎಂದು ಕುಟುಂಬದವರು ಅಭಿಪ್ರಾಯಪಟ್ಟಿದ್ದಾರೆ.

ಮುಡಾ ಪ್ರಕರಣ ವಿಚಾರಣೆ ಅಕ್ಟೋಬರ್ 8ಕ್ಕೆ ಮುಂದೂಡಿಕೆ

ಮಾಜಿ ಆಯುಕ್ತ ದಿನೇಶ್‌ಕುಮಾರ್ 14 ದಿನ ನ್ಯಾಯಾಂಗ ಬಂಧನಕ್ಕೆ

ಮೈಸೂರು: ಮುಖ್ಯಮಂತ್ರಿ ಸಿದ್ದರಾಮಯ್ಯ ವಿರುದ್ಧದ ಮುಡಾ (ಮೈಸೂರು ನಗರಾಭಿವೃದ್ಧಿ ಪ್ರಾಧಿಕಾರ) ಪ್ರಕರಣಕ್ಕೆ ಸಂಬಂಧಿಸಿದಂತೆ ಜನಪ್ರತಿನಿಧಿಗಳ ವಿಶೇಷ ನ್ಯಾಯಾಲಯದಲ್ಲಿ ಇಂದು ವಿಚಾರಣೆ ನಡೆಯಿತು. ದೂರುದಾರ ಸ್ನೇಹಮಯಿ ಕೃಷ್ಣ ಅವರು ಕೋರ್ಟ್‌ಗೆ ಹಾಜರಾಗಿ ತಮ್ಮ ಮನವಿ ಮಂಡಿಸಿದರು.



ದಿನೇಶ್‌ಕುಮಾರ್

ಅಕ್ಟೋಬರ್ 8ಕ್ಕೆ ಮುಂದೂಡಿಕೆ: ಲೋಕಾಯುಕ್ತ ಅಧಿಕಾರಿಗಳು ಸಲ್ಲಿಸಿದ್ದ ಬಿ–ರಿಪೋರ್ಟ್ ಅನ್ನು ಪ್ರಶ್ನಿಸಿ ಸ್ನೇಹಮಯಿ ಕೃಷ್ಣ ಅವರು ಅರ್ಜಿ ಸಲ್ಲಿಸಿದ್ದರು. ತನಿಖಾಧಿಕಾರಿಯನ್ನು ಬದಲಿಸುವಂತೆ ಹಾಗೂ ತನಿಖಾಧಿಕಾರಿ ವಿರುದ್ಧ ಕ್ರಮ ಕೈಗೊಳ್ಳುವಂತೆ ಅವರು ಕೋರ್ಟ್‌ಗೆ ಮನವಿ ಮಾಡಿದ್ದರು. ಈ ಮನವಿಗಳ ಕುರಿತು ವಿಚಾರಣೆ ನಡೆಸಿದ ಕೋರ್ಟ್ ಆದೇಶವನ್ನು ಅಕ್ಟೋಬರ್ 8ಕ್ಕೆ ಮುಂದೂಡಿದೆ.

ಮಾಜಿ ಮುಡಾ ಆಯುಕ್ತ ದಿನೇಶ್‌ಕುಮಾರ್‌ಗೆ 14 ದಿನ ನ್ಯಾಯಾಂಗ ಬಂಧನ: ಇದೇ ವೇಳೆ, ಮಾಜಿ ಮುಡಾ ಆಯುಕ್ತ ದಿನೇಶ್ ಕುಮಾರ್ ಬಂಧನ ವಿಚಾರವೂ ಕೋರ್ಟ್‌ನಲ್ಲಿ ಚರ್ಚೆಗೆ ಬಂತು. ಇತ್ತೀಚೆಗೆ ಇಡಿ (ಎನ್ಫೋರ್ಸ್‌ಮೆಂಟ್ ಡೈರೆಕ್ಟೊರೇಟ್) ಬಂಧಿಸಿದ್ದ ದಿನೇಶ್‌ಕುಮಾರ್ ಅವರ ಇಡಿ ಕಸ್ಟಡಿ ಅವಧಿ ಮುಕ್ತಾಯವಾಗಿದ್ದರಿಂದ, ಇಂದು ಕೋರ್ಟ್‌ಗೆ ಹಾಜರುಪಡಿಸಿದರು. ಜನ ಪ್ರತಿನಿಧಿಗಳ ವಿಶೇಷ ನ್ಯಾಯಾಲಯವು ದಿನೇಶ್‌ಕುಮಾರ್ ಅವರನ್ನು 14 ದಿನಗಳ ನ್ಯಾಯಾಂಗ ಬಂಧನಕ್ಕೆ ಒಪ್ಪಿಸಿದೆ. ಜತೆಗೆ, ದಿನೇಶ್ ಕುಮಾರ್ ಸಲ್ಲಿಸಿರುವ ಜಾಮೀನು ಅರ್ಜಿ ವಿಚಾರಣೆಯನ್ನು ನಾಳೆಗೆ ಮುಂದೂಡಲಾಗಿದೆ.

ಮುಡಾ ಅಕ್ರಮಗಳ ಕುರಿತ ತನಿಖೆಯನ್ನು ಇಡಿ ಅಧಿಕಾರಿಗಳು ಮುಂದುವರೆಸಿದ್ದಾರೆ. ಸಿಎಂ ಸಿದ್ದರಾಮಯ್ಯ ವಿರುದ್ಧದ ಪ್ರಕರಣ, ಲೋಕಾಯುಕ್ತ ವರದಿ ಪ್ರಶ್ನೆ ಹಾಗೂ ದಿನೇಶ್ ಕುಮಾರ್ ಬಂಧನ ಎಲ್ಲವೂ ರಾಜಕೀಯ ವಲಯದಲ್ಲಿ ಭಾರೀ ಚರ್ಚೆಗೆ ಕಾರಣವಾಗಿವೆ.

ದಸರಾಗೆ ದೇಶ–ವಿದೇಶದಿಂದ ಹರಿದು ಬರುತ್ತಿರುವ ಪ್ರವಾಸಿಗರು

ಮೈಸೂರು ಹೋಟೆಲ್‌ಗಳ ರೂಂಗಳು ಬಹುತೇಕ ಭರ್ತಿ



ಮೈಸೂರು, ಸೆ.29(ಬಿಎಲ್‌ಯು)– ವಿಶ್ವ ವಿಖ್ಯಾತ ಮೈಸೂರು ದಸರಾ ಮಹೋತ್ಸವಕ್ಕೆ ದೇಶ– ವಿದೇಶದ ಲಕ್ಷಾಂತರ ಪ್ರವಾಸಿಗರು ಆಗಮಿಸುತ್ತಿದ್ದು, ನಗರದ ಹೋಟೆಲ್‌ಗಳ ರೂಂಗಳು ಬಹುತೇಕ ಭರ್ತಿಯಾಗಿವೆ.

ಸೆ.22 ರಿಂದ 26 ರವರೆಗೆ ಶೇ.80 ರಿಂದ 90 ರಷ್ಟು ರೂಂಗಳು ಭರ್ತಿಯಾಗಿದ್ದವು. ಒಂದೇ ಬಾರಿಗೆ ಸಾವಿರಾರು ಪ್ರವಾಸಿ ವಾಹನಗಳು ಆಗಮಿಸಿದ್ದ ಕಾರಣ ಪಾರ್ಕಿಂಗ್‌ಗೆ ತೊಂದರೆಯಾಗಿತ್ತು ಇದರಿಂದಾಗಿ ಪ್ರವಾಸಿಗರು ಬೆಳಗ್ಗೆ ಮೈಸೂರಿಗೆ ಆಗಮಿಸಿ ಸಂಜೆವರೆಗೆ ಸುತ್ತಾಡಿ, ರಾತ್ರಿ ವೇಳೆ ಲೈಟಿಂಗ್ ವೀಕ್ಷಣೆ ಮಾಡಿ ವಾಪಸ್ಸಾಗಿದ್ದಾರೆ.

ಆದರೂ ಇನ್ನು ಸಾವಿರಾರು ಪ್ರವಾಸಿಗರು ಮೈಸೂರಿನಲ್ಲೇ ವಾಸ್ತವ್ಯ ಹೂಡುತ್ತಿರುವುದರಿಂದ ಶೇ.80 ರಿಂದ 90 ರಷ್ಟು ರೂಂಗಳು ಭರ್ತಿಯಾಗಿದ್ದವು. ವಾಹನಗಳ ಪಾರ್ಕಿಂಗ್‌ಗೆ ಪ್ರವಾಸಿಗರು ಪರದಾಡಿದರು. ಸುತ್ತಮುತ್ತ ಎಲ್ಲಿ ಖಾಲಿ ಜಾಗ ಇದೆಯೋ ಅಲ್ಲೆಲ್ಲಾ ನಿಲ್ಲಿಸಿ ಹೋಗುತ್ತಿದ್ದಾರೆ.

ಆದರೆ ನಾಳೆ (ಸೆ.30) ಯಿಂದ ಅ.2 ರವರೆಗೆ ನಗರದ ಎಲ್ಲಾ ಹೋಟೆಲ್‌ಗಳ ರೂಂಗಳು ಆನ್‌ಲೈನ್‌ನಲ್ಲೇ ಬುಕ್ ಆಗಿವೆ. ನಾಳೆಯಿಂದ ಮೈಸೂರಿಗೆ ಬರುವ ಪ್ರವಾಸಿಗರು ವಾಸ್ತವ್ಯ ಹೂಡಲು ಪರದಾಡುವ ಪರಿಸ್ಥಿತಿ ನಿರ್ಮಾಣವಾಗಲಿದೆ.

ಭಾರಿ ಸಂಖ್ಯೆಯಲ್ಲಿ ಜನ ಆಗಮಿಸಿರುವ ಹಿನ್ನೆಲೆಯಲ್ಲಿ ಆಹಾರ ಮೇಳ, ರೈತ ದಸರಾ, ಫಲಪುಷ್ಪ ಪ್ರದರ್ಶನ ಸೇರಿದಂತೆ ಇತರೆಡೆಯ ಫುಡ್‌ಸ್ಟಾಲ್‌ಗಳಲ್ಲಿ ಭರ್ಜರಿ ವ್ಯಾಪಾರ ನಡೆಯುತ್ತಿದೆ. ಅಲ್ಲದೆ ನಗರದ ಇತರೆಡೆ ಇರುವ ಸಾವಿರಾರು ಫುಡ್‌ಸ್ಟಾಲ್‌ಗಳಲ್ಲಿ ವ್ಯಾಪಾರ ಜೋರಾಗಿದೆ. ಆಯಾ ಸ್ಥಳದಲ್ಲೇ ಇರುವ ಫುಡ್‌ಸ್ಟಾಲ್‌ಗಳಲ್ಲಿ ಜನರು ತಮ್ಮ ತಿಂಡಿ–ಊಟೋಪಚಾರ ಮಾಡಿಕೊಳ್ಳುತ್ತಿರುವುದರಿಂದ ರೆಸ್ಟೋರೆಂಟ್‌ಗಳಲ್ಲಿ ವ್ಯಾಪಾರ ಅಷ್ಟಾಗಿ ಆಗಲಿಲ್ಲ ಎಂದು ಹೋಟೆಲ್ ಮಾಲೀಕರು ತೀವ್ರ ಅಸಮಾಧಾನ ವ್ಯಕ್ತಪಡಿಸಿದ್ದಾರೆ. ದಸರಾ ಜಂಬೂ ಸವಾರಿ ಮೆರವಣಿಗೆ ಮುಗಿದ ಒಂದು ವಾರ ದವರೆಗೆ ನಗರದ ಎಲ್ಲಾ ಹೋಟೆಲ್‌ಗಳ ರೂಂಗಳು ಭರ್ತಿಯಾಗಿರುತ್ತವೆ ಎಂದು ಹೋಟೆಲ್ ಮಾಲೀಕರು ವಿಶ್ವಾಸ ವ್ಯಕ್ತಪಡಿಸಿದ್ದಾರೆ.

ರೆಸ್ಟೋರೆಂಟ್‌ಗಳ ವ್ಯಾಪಾರ–ವಹಿವಾಟು ನಿರೀಕ್ಷಿತ ಮಟ್ಟದಲ್ಲಿಲ್ಲ



ನಗರದ ಮಹಾರಾಜ ಕಾಲೇಜು ಮೈದಾನದ ದಸರಾ ಆಹಾರ ಮೇಳದಲ್ಲಿ 30 ಸಸ್ಯಾಹಾರ, 130 ಮಾಂಸಾಹಾರಿ ಸೇರಿ ಒಟ್ಟು 160 ಸ್ಟಾಲ್ ತೆರೆಯಲಾಗಿದೆ. ಆಹಾರ ಮೇಳ, ರೈತ ದಸರಾ, ಫಲಪುಷ್ಪ ಪ್ರದರ್ಶನ ಸೇರಿ ದಸರಾದ ವಿವಿಧ ಕಾರ್ಯಕ್ರಮಗಳಲ್ಲಿ ಫುಡ್ ಸ್ಟಾಲ್‌ಗಳನ್ನು ತೆರೆಯಲಾಗಿದೆ. ಇದರ ಜೊತೆಗೆ ಸಾವಿರಾರು ಫಾಸ್ಟ್‌ಫುಡ್‌ಗಳಲ್ಲಿ ವ್ಯಾಪಾರ ಜೋರಾಗಿದೆ. ಇದರಿಂದ ದಸರಾ ಆರಂಭವಾದ ದಿನದಿಂದ ಇಲ್ಲಿವರೆಗೆ ರೆಸ್ಟೋರೆಂಟ್‌ಗಳಲ್ಲಿನ ವ್ಯಾಪಾರ–ವಹಿವಾಟು ನಿರೀಕ್ಷಿತ ಮಟ್ಟದಲ್ಲಿ ಇಲ್ಲ. ಆಹಾರ ಮೇಳದಲ್ಲಿ ಸ್ವಚ್ಛತೆ ಕಾಪಾಡಿಲ್ಲ ಅಲ್ಲದೆ ಆಹಾರ ಪದಾರ್ಥಗಳ ಬೆಲೆ ದುಬಾರಿ. ಇಂತಹ ಅವ್ಯವಸ್ಥೆ ಇದ್ದರೂ ಅದಕ್ಕೆ ಅಧಿಕಾರಿಗಳು ಕಡಿವಾಣ ಹಾಕಿಲ್ಲ.

– ಸಿ.ನಾರಾಯಣ ಗೌಡ, ಅಧ್ಯಕ್ಷರು, ಮೈಸೂರು ಹೋಟೆಲ್ ಮಾಲೀಕರ ಸಂಘ

ಜಾತಿಗಣತಿ ಕಾರ್ಯಕ್ಕೆ ಅ.1, 2 ರಂದು ವಿನಾಯ್ತಿಗೆ ಶಿಕ್ಷಕರ ಸಂಘ ಮನವಿ

ಮೈಸೂರು, ಸೆ.29(ಎಸ್‌ಪಿಎನ್)– ರಾಜ್ಯಾದ್ಯಂತ ಎಲ್ಲಾ ಜಿಲ್ಲೆಗಳಲ್ಲಿ ಲಕ್ಷಕ್ಕೂ ಅಧಿಕ ಶಿಕ್ಷಕರು ಗಣತಿ ಕಾರ್ಯ ವನ್ನು ಅತ್ಯಂತ ಯಶಸ್ವಿಯಾಗಿ ಮುಂದುವರೆಸಿದ್ದಾರೆ. ನವರಾತ್ರಿ ಹಬ್ಬದ ಹಿನ್ನಲೆಯಲ್ಲಿ ಅ.1 ಮತ್ತು 2ರಂದು ಗಣತಿ ನಡೆಸಲು ಶಿಕ್ಷಕರಿಗೆ ವಿನಾಯ್ತಿ ನೀಡಬೇಕು ಎಂದು ರಾಜ್ಯ ಪ್ರಾಥಮಿಕ ಶಾಲಾ ಶಿಕ್ಷಕರ ಸಂಘ, ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆ ಕಾರ್ಯದರ್ಶಿ ತುಳಸಿ ಮದ್ದಿನೇನಿ ಅವರಿಗೆ ಪತ್ರ ಬರೆದು ಮನವಿ ಮಾಡಿದೆ.

ನಾಡಹಬ್ಬ ದಸರಾ ನಾಡಿನ ಪ್ರತಿಯೊಬ್ಬರಿಗೂ ಪ್ರಮುಖ ಹಬ್ಬವಾಗಿದ್ದು, ಅ.1 ಆಯುಧ ಪೂಜೆ ಮತ್ತು 2 ರಂದು ವಿಜಯದಶಮಿ ದಿನದಂದು ಬನ್ನಿ ವಿನಿಮಯ ಕಾರ್ಯ ಇರುವುದರಿಂದ ಆ ಎರಡು ದಿನಗಳು ಗಣತಿ ಕಾರ್ಯದಿಂದ ವಿನಾಯ್ತಿ ನೀಡಿ ನಾಡಹಬ್ಬ ಆಚರಿಸಲು ಅವಕಾಶ ನೀಡಬೇಕು ಎಂದು ಮನವಿ ಮಾಡಿದ್ದಾರೆ.

ಸರ್ವರ್ ಸಮಸ್ಯೆ, ಸಾರ್ವಜನಿಕರ ಅಸಹಕಾರ, ಹಿರಿಯ ಅಧಿಕಾರಿಗಳ ತೀವ್ರ ಕಿರುಕುಳ ಸೇರಿದಂತೆ ಇತರೆ ಸಮಸ್ಯೆಗಳ ನಡುವೆಯೂ ಗಣತಿ ಕಾರ್ಯ ರಾಜ್ಯಾದ್ಯಂತ ಯಶಸ್ವಿಯಾಗಿ ನಿರ್ವಹಿಸುತ್ತಿದ್ದಾರೆ. ಆದರೆ, ಸರ್ಕಾರದ ಅಣತಿಯಂತೆ ವಿವಿಧ ಜಿಲ್ಲೆಯ ಜಿಲ್ಲಾಧಿಕಾರಿಗಳು, ಕಾರಣವಿಲ್ಲದೆ ಲೋಪ ತೋರಿಸಿ ಶಿಕ್ಷಕರಿಗೆ ನೋಟೀಸ್ ನೀಡುತ್ತಿರುವ ಕ್ರಮ ಹೆಚ್ಚಳವಾಗಿದೆ. ಅಧಿಕಾರಿಗಳ ನಡೆಯಿಂದ ಶಿಕ್ಷಕರು ಮಾನಸಿಕವಾಗಿ ಖಿನ್ನತೆಗೆ ಒಳಗಾಗುವ ಸಾಧ್ಯತೆಯಿದ್ದು, ನೋಟೀಸ್ ನೀಡುವ ವಿಧಾನವನ್ನು ಕಡಿಮೆಗೊಳಿಸಿ, ಗಣತಿದಾರರಿಗೆ ಸೂಕ್ಷ್ಮ ತಿಳುವಳಿಕೆ ಹೇಳಿ ಗಣತಿ ಕಾರ್ಯ ಯಶಸ್ವಿಗೊಳಿಸಬೇಕು ಎಂದು ಸಂಘದ ಅಧ್ಯಕ್ಷ ಚಂದ್ರಶೇಖರ್ ನುಗ್ಗಲಿ ಹಾಗೂ ಪ್ರಧಾನ ಕಾರ್ಯ ದರ್ಶಿ ಎಚ್.ಎಸ್.ಚೇತನ್ ಮನವಿ ಮಾಡಿದ್ದಾರೆ.

ಶ್ರೀ ಶಿವಶೈಲದಲ್ಲಿ ಶಾಸಕ ಜಿ.ಟಿ.ದೇವೇಗೌಡರ ಕುಟುಂಬದಿಂದ ಸುದರ್ಶನ ಹೋಮ

ಪಾಂಡವಪುರ, ಸೆ.29– ತಾಲೂಕಿನ ಪಟ್ಟಸೋಮನಹಳ್ಳಿ ಗ್ರಾಮದ ಹೊರವಲಯದಲ್ಲಿರುವ ಶ್ರೀಶಿವಶೈಲದ ದೇವಾಲಯದ ಆವರಣದಲ್ಲಿ ಶರನ್ನವರಾತ್ರಿ ಕಾರ್ಯಕ್ರಮಗಳು ನಡೆಯುತ್ತಿದ್ದು, ಶಾಸಕ ಜಿ.ಟಿ.ದೇವೇಗೌಡರು ಕುಟುಂಬ ಸಮೇತರಾಗಿ ಪಾಲ್ಗೊಂಡು ಸುದರ್ಶನ ಹೋಮ ನಡೆಸಿದರು.

ಇಲ್ಲಿನ ಕಾಮಾಕ್ಷಿ ಚಂದ್ರಮೌಳೇಶ್ವರ ದೇವಾಲಯದಲ್ಲಿ ನವರಾತ್ರಿ ಮಹೋತ್ಸವದ ಅಂಗವಾಗಿ ಸೆ.22 ರಿಂದ ಅ.1 ರವರೆಗೆ ಒಂಭತ್ತು ದಿನಗಳ ಕಾಲ ವಿವಿಧ ಹೋಮ ಹವನಗಳು ನಡೆಯಲಿದ್ದು, ನವರಾತ್ರಿಯ ಆರನೇ ದಿನವಾದ ಶನಿವಾರ ಮಹಾಸುದರ್ಶನ ಹೋಮದಲ್ಲಿ ಪಾಲ್ಗೊಂಡಿದ್ದರು. ಹಲವು ವರ್ಷಗಳಿಂದ ಇಲ್ಲಿ ನಡೆಯುವ ನವರಾತ್ರಿ ಮಹೋತ್ಸವದಲ್ಲಿ ಪಾಲ್ಗೊಳ್ಳುತ್ತಿದ್ದೇವೆ. ದೇವಿಯಲ್ಲಿ ಪ್ರಾರ್ಥಿಸಿ ಮಹಾಸುದರ್ಶನ ಹೋಮ ಸೇರಿದಂತೆ ಇತರೆ ವಿಶೇಷ ಪೂಜೆಗಳನ್ನು ಸಲ್ಲಿಸಲಾಗಿದ್ದು, ಸಂಕಷ್ಟ ನಿವಾರಣೆಯಾಗಬೇಕು ಹಾಗೂ ದೇಶ ಸುಭಿಕ್ಷೆಯಾಗಿರಬೇಕೆಂಬ ಆಶಯದಿಂದ ಪ್ರಾರ್ಥಿಸಲಾಗಿದೆ ಎಂದು ಸುದ್ದಿಗಾರರಿಗೆ ತಿಳಿಸಿದರು.

ನಿವೃತ್ತ ನ್ಯಾಯಾಧೀಶ ಶಿವಶೈಲ ದತ್ತಿ ಧಾರ್ಮಿಕ ಸಂಸ್ಥೆಯ ಮುಖ್ಯಸ್ಥ ಸಿ.ಶಿವಪ್ಪ, ಸಹೋದರ ನಾಗಭೂಷಣ್, ಪುತ್ರ ಡಾ||ಸಿ.ಎಸ್.ರಾಜೇಶ್, ರಾಜ್ಯ ಪತ್ತಿನ ಸಹಕಾರ ಸಂಘಗಳ ಮಹಾಮಂಡಳಿ ಮಾಜಿ ಅಧ್ಯಕ್ಷೆ ಲಲಿತಾ ದೇವೇಗೌಡ, ಜಿಟಿಡಿ ಸಹೋದರ ಯಧುವರ್, ಜಿಟಿಡಿ ಪುತ್ರಿಯರಾದ ಅನ್ನಪೂರ್ಣ, ಯಶೋಧ, ಮಹಾಲಕ್ಷ್ಮಿ, ಸ್ವೀಟ್ ಮಾಲೀಕ ಶಿವ ಕುಮಾರ್, ವಕೀಲ ಫಾಲಾಕ್ಷ, ಬಿಜೆಪಿ ಮುಖಂಡ ರೈಸ್‌ಮಿಲ್ ತಮ್ಮಣ್ಣ, ಜವರ ನಾಯಕ ಸಿದ್ದರಾಜು, ಶಿವಕುಮಾರ್ ಸ್ವಾಮಿ, ರಮೇಶ್, ಬೋರಪ್ಪ, ಜಿಪಂ ಮಾಜಿ ಸದಸ್ಯ ಲಾರಿಸ್ವಾಮಿಗೌಡ, ತಾಪಂ ಮಾಜಿ ಸದಸ್ಯ ಶಿವಣ್ಣ, ಗೀತಾ ಮಂಜುನಾಥ್, ಎಪಿಎಂಸಿ ಮಾಜಿ ಅಧ್ಯಕ್ಷ ನಾಗರಾಜು, ಡೈರಿ ನಿರ್ದೇಶಕ ಉಮಾಶಂಕರ್, ಧನಂಜಯ, ರೈಸ್ ಮಿಲ್ ನಾಗರಾಜು, ಪ್ರಧಾನ ಅರ್ಚಕರಾದ ದತ್ತಾತ್ರೇಯಾ ಭಟ್, ಶಿವಶೈಲ ಮ್ಯಾನೇಜರ್ ನಂಜುಂಡೇಗೌಡ, ರುದ್ರೇಶ್, ಹಾಗೂ ಭಕ್ತರು ಪಾಲ್ಗೊಂಡಿದ್ದರು.



ಶರನ್ನವರಾತ್ರಿ ಪ್ರಯುಕ್ತ ಶ್ರೀ ಶಿವಶೈಲ ದೇವಸ್ಥಾನದಲ್ಲಿ ಶಾಸಕ ಜಿ.ಟಿ.ದೇವೇಗೌಡರು ಕುಟುಂಬ ಸಮೇತ ಸುದರ್ಶನ ಹೋಮ ನೆರವೇರಿಸಿದರು.

ಜಾತಿಗಣತಿ ಕಾರ್ಯ ಪರಿಶೀಲನೆ ನಡೆಸಿದ ಜಿಲ್ಲಾ ಉಸ್ತುವಾರಿ ಕಾರ್ಯದರ್ಶಿ

ಮೈಸೂರು, ಸೆ.29(ಎಸ್‌ಪಿಎನ್)– ಮೈಸೂರಿನಲ್ಲಿ ಜಿಲ್ಲೆಯಲ್ಲಿ ಆರ್ಥಿಕ, ಸಾಮಾಜಿಕ ಮತ್ತು ಶೈಕ್ಷಣಿಕ ಸಮೀಕ್ಷೆ ಹಿನ್ನಲೆಯಲ್ಲಿ ಸೋಮವಾರ ನಗರದ ಗೋಕುಲಂ ಹಾಗೂ ಬೇರೆಬೇರೆ ಸ್ಥಳಕ್ಕೆ ಜಿಲ್ಲಾ ಉಸ್ತುವಾರಿ ಕಾರ್ಯದರ್ಶಿ ಸೆಲ್ವಂಕುಮಾರ್ ಭೇಟಿ ನೀಡಿ, ಗಣತಿ ಕಾರ್ಯವನ್ನು ಪರಿಶೀಲಿಸಿದರು.

ಕೆಲವೆಡೆ ಗಣತಿದಾರರಿಗೆ ಮಾಹಿತಿ ನೀಡಲು ಸಾರ್ವಜನಿಕರು ಹಿಂದೇಟು ಹಾಕುತ್ತಿರುವ ಹಿನ್ನಲೆಯಲ್ಲಿ ಭೇಟಿ ನೀಡಿ, ಖುದ್ದು ಸಮಸ್ಯೆ ಆಲಿಸಿದರು. ಈ ವೇಳೆ ಜಿಲ್ಲಾಧಿಕಾರಿ ಜಿ.ಲಕ್ಷ್ಮೀಕಾಂತ ರೆಡ್ಡಿ ಹಾಗೂ ಜಿಪಂ ಸಿಇಓ ಎಸ್.ಯುಕೇಶ್ ಕುಮಾರ್ ಹಾಗೂ ಮಹಾನಗರ ಪಾಲಿಕೆ ಆಯುಕ್ತ ಶೇಖ್ ತನ್ವಿರ್ ಆಸಿಫ್ ಉಪಸ್ಥಿತರಿದ್ದರು.



ಮೈಸೂರು ಜಿಲ್ಲಾ ಉಸ್ತುವಾರಿ ಕಾರ್ಯದರ್ಶಿ ಸೆಲ್ವಂಕುಮಾರ್ ಮೈಸೂರು ನಗರದ ವಿವಿಧೆಡೆ ಭೇಟಿ ನೀಡಿ, ಸಿಬ್ಬಂದಿಯ ಸಮೀಕ್ಷೆ ಪರಿಯನ್ನು ಪರಿಶೀಲಿಸಿದರು.

ರಂಗಭೂಮಿ ನಟ, ಕಲಾವಿದ ಯಶವಂತ ಸರದೇಶಪಾಂಡೆ ನಿಧನ

ಖ್ಯಾತ ಕನ್ನಡ ರಂಗಭೂಮಿ ನಟ, ಅನೇಕ ನಾಟಕಗಳಲ್ಲಿ ನಟಿಸಿ–ನಿರ್ದೇಶಿಸಿ ಜನಪ್ರಿಯರಾಗಿದ್ದ ಹುಬ್ಬಳ್ಳಿ ಮೂಲದ ಯಶವಂತ ಸರದೇಶಪಾಂಡೆ ಅವರು ಇಂದು ಬೆಳಗ್ಗೆ ತೀವ್ರ ಹೃದಯಾಘಾತದಿಂದ ನಿಧನರಾಗಿದ್ದಾರೆ. ಅವರಿಗೆ 60 ವರ್ಷ ವಯಸ್ಸಾಗಿತ್ತು.



ಯಶವಂತ ಸರದೇಶಪಾಂಡೆ ಅವರಿಗೆ ಬೆಳಗ್ಗೆ 10 ಗಂಟೆ ಸುಮಾರಿಗೆ ತೀವ್ರ ಹೃದಯಾಘಾತ ಉಂಟಾಯಿತು. ಅವರನ್ನು ಫೋರ್ಟಿಸ್ ಆಸ್ಪತ್ರೆಗೆ ದಾಖಲು ಮಾಡಲಾಯಿತು. ಆದರೆ, ಯಾವುದೇ ಪ್ರಯೋಜನವಾಗಿಲ್ಲ. ಅವರ ಆಲ್ ದಿ ಬೆಸ್ಟ್ ನಾಟಕ ಅಭೂತ ಪೂರ್ವ ಯಶಸ್ಸು ಕಂಡಿತು. ಕಿರುತೆರೆ ಮತ್ತು ಚಲನಚಿತ್ರಗಳಲ್ಲಿಯೂ ಅವರು ಪಾತ್ರವಹಿಸುತ್ತಿದ್ದರು. 'ರಾಮ ಶ್ಯಾಮ ಭಾಮಾ'ನಲ್ಲಿ ನಟಿಸಿ ಖ್ಯಾತಿ ಗಳಿಸಿದ್ದರು. ಅವರ ನಿಧನಕ್ಕೆ ಕುಟುಂಬ ವರ್ಗ, ಅವರ ಅಭಿಮಾನಿಗಳು, ನಾಡಿನ ಗಣ್ಯರು ಕಂಬನಿ ಮಿಡಿದಿದ್ದಾರೆ. ಇವರ ಪತ್ನಿ ಮಾಲತಿ ಸಹ ರಂಗಭೂಮಿ ಮತ್ತು ಕಿರುತೆರೆಯಲ್ಲಿ ಜನಪ್ರಿಯ ಕಲಾವಿದೆ.

ಶ್ರೀಗಳ ಸಂಗೀತ ಚಿಕಿತ್ಸಾ ಪರಿಕಲ್ಪನೆ ಅದ್ಭುತ

ಕೇಂದ್ರ ಸಚಿವ ವಿ.ಸೋಮಣ್ಣ ಬಣ್ಣನೆ



ಕೇಂದ್ರ ಸಚಿವ ವಿ. ಸೋಮಣ್ಣ ನಾದಭವನ ಉದ್ಘಾಟಿಸಿದರು.

ಮೈಸೂರು, ಸೆ.29– ಯೋಗ ಸಂಗೀತ ನಾದ ಭವನ ಪರಿಕಲ್ಪನೆಯೇ ಅದ್ಭುತ. ಇದೊಂದು ಪ್ರೇರಣದಾಯಕ ಶಕ್ತಿ, ಇದಕ್ಕೆ ಕಾರಣರು ದೈವ ಸ್ವರೂಪಿಗಳಾದ ಶ್ರೀ ಗಣಪತಿ ಸಚ್ಚಿದಾನಂದ ಸ್ವಾಮೀಜಿಗಳು ಎಂದು ಕೇಂದ್ರ ಸಚಿವ ವಿ. ಸೋಮಣ್ಣ ಬಣ್ಣಿಸಿದರು.

ಶನಿವಾರ ಸಂಜೆ ಮೈಸೂರಿನ ಅವಧೂತ ದತ್ತ ಪೀಠದಲ್ಲಿ ಅತ್ಯಾಧುನಿಕ ಯೋಗ ಸಂಗೀತ ನಾದಭವನದ ಉದ್ಘಾಟನೆ ನೆರವೇರಿಸಿ ಅವರು ಮಾತನಾಡಿದರು.

ಐದು ದಶಕಗಳಿಗಿಂತಲೂ ಹೆಚ್ಚು ಕಾಲದಿಂದ ಶ್ರೀ ಗಣಪತಿ ಸಚ್ಚಿದಾನಂದ ಸ್ವಾಮೀಜಿಗಳು ಧ್ಯಾನ ಮತ್ತು ಚಿಕಿತ್ಸೆಗೆ ಸಂಗೀತ ಎಂಬ ಮಹಾದರ್ಶನವನ್ನು ರೂಪಿಸುವುದರಲ್ಲಿ ಹಾಗೂ ವಿಶ್ವದಾದ್ಯಂತ ಹರಡುವುದರಲ್ಲಿ ದೀಪಸ್ತಂಭರಾಗಿದ್ದಾರೆ ಎಂದು ಕೊಂಡಾಡಿದರು.

ಯೋಗ ಸಂಗೀತ ಜ್ಞಾನ ಚಿಕಿತ್ಸೆ ಜನತೆಗೆ ಅತ್ಯಂತ ಉಪಯುಕ್ತವಾದುದು, ಇದು ಶಾಂತಿ ನೆಮ್ಮದಿ ನೀಡುತ್ತದೆ. ಜನರು ಇದರ ಸದುಪಯೋಗಪಡಿಸಿಕೊಳ್ಳಬೇಕು ಎಂದು ಸಲಹೆ ನೀಡಿದರು.

ಸ್ವಾಮೀಜಿಯವರ ಸಾಮಾಜಿಕ ಕಳಕಳಿ ನೋಡಿದರೆ ಇತರೆ ಮಠಮಾನ್ಯಗಳಿಗೆ ಅವಧೂತ ದತ್ತಪೀಠ ಮಾದರಿಯಾಗಿದೆ. ಶ್ರೀಗಳ ಸಂಗೀತ ಚಿಕಿತ್ಸಾ ಪರಿಕಲ್ಪನೆ ನಿಜಕ್ಕೂ ಅತೀ ಅದ್ಭುತವಾದದ್ದು ಎಂದು ತಿಳಿಸಿದರು.

ನಮ್ಮ ದೇಶ ನಡೆದು ಬಂದ ದಾರಿ ತಿಳಿದು, ನೆಮ್ಮದಿ ಮತ್ತು ಬಾಳ್ವೆಗೆ ಬೇಕಾದ ಸಲಕರಣೆಗಳನ್ನು ತಿಳಿದು ಶ್ರೀಗಳು ದೂರ ದೃಷ್ಟಿಯ ಚಿಂತನೆ ಮಾಡಿದ್ದಾರೆ. ಇದನ್ನೆಲ್ಲಾ ನೋಡಿದರೆ ನಿಜಕ್ಕೂ ಶ್ರೀಗಳು ಭಗವಂತನ ಅವತಾರವೇ ಸರಿ ಎಂದು ಸೋಮಣ್ಣ ಬಣ್ಣಿಸಿದರು. ಶ್ರೀ ಗಣಪತಿ ಸಚ್ಚಿದಾನಂದ ಸ್ವಾಮೀಜಿಯವರು ಆಶೀರ್ವಚನ ನೀಡಿ ನಾವೆಲ್ಲರೂ ಸನಾತನ ಪದ್ಧತಿಯನ್ನು ಪಾಲಿಸೋಣ ಎಂದು ಕರೆ ನೀಡಿದರು.

ಪಶು ಪಕ್ಷಿ ಪ್ರಾಣಿಗಳು ಕೂಡ ನಾದದಲ್ಲಿ ತಲ್ಲೀನವಾಗುತ್ತವೆ. ಶರೀರ ಪೂರ್ತಿ ನಾದ ಆವರಿಸಿಕೊಳ್ಳುತ್ತದೆ ಇದರಿಂದ ವ್ಯಾದಿಗಳು, ಮನಕ್ಲೇಶ ಎಲ್ಲವೂ ಮಾಯವಾಗುತ್ತದೆ. ಹಾಗಾಗಿ ಪ್ರತಿಯೊಬ್ಬರೂ ಮಲಗುವ ಮುಂಚೆ ರಿದಂ ಇಲ್ಲದ ಸಾಫ್ಟ್ ಸಂಗೀತವನ್ನು ಕೇಳುತ್ತಾ ಮಲಗಿದರೆ ಬೆಳಿಗ್ಗೆ ಎದ್ದಾಗ ಫ್ರೆಶ್ ಆಗಿರುತ್ತೀರಿ ಹೊಸ ಹೊಸ ಐಡಿಯಾಗಳು ಸಿಗುತ್ತವೆ. ನಿಮ್ಮ ಮನಸ್ಸಿಗೆ ಉತ್ತೇಜನ ಸಿಗುತ್ತದೆ ಎಂದು ಶ್ರೀಗಳು ಹೇಳಿದರು.

ಸ್ವಾಮೀಜಿಯವರ ಸಂಗೀತದಲ್ಲಿ ಏನೊ ಧನ್ಯತೆ ಕಂಡು ಅವರು ಕರೆಸುತ್ತಾರೆ. ಈಗ ಸಂಗೀತ ಭವನ ಉದ್ಘಾಟನೆ ಆಗಿದೆ ಎಲ್ಲರೂ ನಾದ ಕೇಳುವ ಅಭ್ಯಾಸ ಮಾಡಬೇಕು ಎಂದು ಹೇಳಿದರು.

ನಮ್ಮ ರಾಷ್ಟ್ರಕ್ಕೆ ಕರ್ನಾಟಕಕ್ಕೆ ಮತ್ತು ಎಲ್ಲ ಪ್ರಜೆಗಳಿಗೆ ಸುಖ ಶಾಂತಿ ನೆಮ್ಮದಿ ಸಿಗಲಿ ಉತ್ತಮ ಬೆಳೆಯಾಗಲಿ, ಎಲ್ಲರಿಗೂ ಸದ್ಬುದ್ಧಿ ಕೊಡಲಿ ನಾವೆಲ್ಲರೂ ಸನಾತನ ಪದ್ಧತಿಯನ್ನು ಪಾಲಿಸೋಣ ಎಂದು ಸ್ವಾಮೀಜಿ ಕರೆ ನೀಡಿದರು. ಕಾರ್ಯಕ್ರಮದಲ್ಲಿ ಆಶ್ರಮದ ಕಿರಿಯ ಸ್ವಾಮೀಜಿಗಳಾದ ಶ್ರೀ ದತ್ತ ವಿಜಯಾನಂದ ತೀರ್ಥ ಸ್ವಾಮೀಜಿ, ಶಾಸಕ ಟಿ.ಎಸ್.ಶ್ರೀವತ್ಸ ಉಪಸ್ಥಿತರಿದ್ದರು.

ಪ್ರತಿವರ್ಷ ಪ್ರಕಾಶಕರು ಪ್ರಕಟಿಸುವ ಪುಸ್ತಕಗಳನ್ನು ಸರ್ಕಾರ ಖರೀದಿಸಿದರೆ ಆರ್ಥಿಕ ಸಮಸ್ಯೆ ದೂರ

ಹಿರಿಯ ಸಾಹಿತಿ ಪ್ರೊ.ಅರವಿಂದ ಮಾಲಗತ್ತಿ ಅಭಿಮತ



'ಸಾಹಿತಿಗಳೊಂದಿಗೆ ಸೆಲ್ಫಿ' ಶೀರ್ಷಿಕೆಯಡಿ ಹಿರಿಯ ಸಾಹಿತಿ ಪ್ರೊ.ಅರವಿಂದ ಮಾಲಗತ್ತಿ ಅವರು ಕನ್ನಡ ಪುಸ್ತಕಗಳ ರಿಯಾಯ್ತಿ ಮಾರಾಟ ಮೇಳದಲ್ಲಿ ವಿವಿಧ ಮಳಿಗೆಗಳಿಗೆ ಭೇಟಿ ನೀಡಿದರು.

ಮೈಸೂರು, ಸೆ.29(ಎಸ್‌ಪಿಎನ್)– ಪ್ರಕಾಶಕರು ಪ್ರಕಟಿಸುವ ಪುಸ್ತಕಗಳನ್ನು ಸರ್ಕಾರ ಆಯಾಯ ವರ್ಷದಲ್ಲೇ ಖರೀದಿಸಿದರೆ, ಯಾವುದೇ ಹಣಕಾಸಿನ ಸಮಸ್ಯೆ ಉದ್ಭವಿಸುವುದಿಲ್ಲ ಎಂದು ಹಿರಿಯ ಸಾಹಿತಿ ಪ್ರೊ.ಅರವಿಂದ ಮಾಲಗತ್ತಿ ಅಭಿಪ್ರಾಯಪಟ್ಟರು.

ಮೈಸೂರು ಹಳೆ ಜಿಲ್ಲಾಧಿಕಾರಿಗಳ ಕಚೇರಿ ಹಿಂಭಾಗದ ಸ್ಕೌಟ್ಸ್ ಮತ್ತು ಗೈಡ್ಸ್ ಮೈದಾನದಲ್ಲಿ ಕನ್ನಡ ಮತ್ತು ಸಂಸ್ಕೃತಿ ಇಲಾಖೆ, ಮೈಸೂರು ದಸರಾ ಮಹೋತ್ಸವ ಸಮಿತಿ ಹಾಗೂ ಬೆಂಗಳೂರು ಕನ್ನಡ ಪುಸ್ತಕ ಪ್ರಾಧಿಕಾರದ ಸಹಯೋಗದೊಂದಿಗೆ ಆಯೋಜಿಸಿರುವ ಕನ್ನಡ ಪುಸ್ತಕಗಳ ರಿಯಾಯ್ತಿ ಮಾರಾಟ ಮೇಳ–2025ರಲ್ಲಿ 'ಸಾಹಿತಿಗಳೊಂದಿಗೆ ಸೆಲ್ಫಿ' ಶೀರ್ಷಿಕೆಯಡಿ ಹಮ್ಮಿಕೊಂಡಿದ್ದ ಕಾರ್ಯಕ್ರಮದಲ್ಲಿ ವಿವಿಧ ಮಳಿಗೆಗಳಿಗೆ ಭೇಟಿ ನೀಡಿ ಮಾತನಾಡಿದರು.

ಸರ್ಕಾರ ಹಲವು ವರ್ಷಗಳಿಂದ ಹೊಸ ಹೊಸ ಪುಸ್ತಕಗಳನ್ನು ಖರೀದಿಸುತ್ತಿಲ್ಲ. ಇದರಿಂದ ಪ್ರಕಾಶಕರು ಸಂಕಷ್ಟಕ್ಕೆ ಸಿಲುಕಿದ್ದಾರೆ. ವರ್ಷದಿಂದ ವರ್ಷಕ್ಕೆ ಪುಸ್ತಕ ಖರೀದಿ ನಿಲ್ಲಿಸಿದರೆ, ಅಷ್ಟು ವರ್ಷಗಳ ಸೇರಿಸಿ ಒಟ್ಟಿಗೆ ಖರೀದಿಸಲು ರಾಜ್ಯ ಸರ್ಕಾರಕ್ಕೂ ಆರ್ಥಿಕ ಹೊರೆ ಎನಿಸುತ್ತದೆ. ಹಾಗಾಗಿ ರಾಜ್ಯ ಸರ್ಕಾರ ಪುಸ್ತಕ ಖರೀದಿಸಿ ಸಣ್ಣಮೊತ್ತ ಬಿಡುಗಡೆ ಮಾಡಬೇಕು ಎಂದು ಸಲಹೆ ನೀಡಿದರು. ಚಿಂತನ ಚಿತ್ತಾರ, ಕರಾಮುವಿವಿ, ಹಂಪಿ ವಿವಿ, ಕನ್ನಡ ಪುಸ್ತಕ ಪ್ರಾಧಿಕಾರ, ಸಪ್ನ ಬುಕ್ ಹೌಸ್, ಚೇತನ ಬುಕ್ ಹೌಸ್ ಸೇರಿದಂತೆ ಇತರೆ ಪುಸ್ತಕ ಮಳಿಗೆ ಭೇಟಿ ನೀಡಿ, ಪುಸ್ತಕ ಪ್ರಿಯರೊಂದಿಗೆ ಸೆಲ್ಫಿ ಕ್ಲಿಕ್ಕಿಸಿಕೊಂಡರು.

ಬಸವಣ್ಣ ಮತ್ತು ಕನಕದಾಸರು: ತೌಲಾನಿಕ ಅಧ್ಯಯನ ಕುರಿತಾದ ವಿಚಾರ ಸಂಕಿರಣದಲ್ಲಿ ಸಾಹಿತಿ ಡಾ.ಬಸವರಾಜ ಸಾದರ ಮಾತನಾಡಿ, ರಾಜ್ಯ ಸರ್ಕಾರ ಬಸವಣ್ಣನವರನ್ನು 'ಸಾಂಸ್ಕೃತಿಕ ನಾಯಕ' ಎಂದು ಘೋಷಣೆ ಮಾಡಿರುವುದು ಔಚಿತ್ಯವಾಗಿದೆ. ಹನ್ನೆರಡನೇ ಶತಮಾನದಲ್ಲಿ ಜಾತಿ ವ್ಯವಸ್ಥೆ ವಿರುದ್ಧ ಸಮಸಮಾಜ ನಿರ್ವಹಿಸಲು ಶ್ರಮಿಸಿದ ಬಸವಣ್ಣ, ಅನುಭವ ಮಂಟಪದ ಮೂಲಕ ಸಾಮಾಜಿಕ ವ್ಯವಸ್ಥೆಯನ್ನು ಸರಿದಾರಿಗೆ ತರಲು ಪ್ರಯತ್ನಿಸಿದ ಮಹಾನ್ ದಾರ್ಶನಿಕರು ಹಾಗೂ ದಾಸ ಪರಂಪರೆಯಲ್ಲಿ ಸಂತ ಕನಕದಾಸರೂ ಈ ಜಾತಿವ್ಯವಸ್ಥೆ ವಿರುದ್ಧ ತಮ್ಮ ಕಾರ್ಯಮಿತಿಯಲ್ಲಿ ಕೆಲಸ ಮಾಡಿದ್ದಾರೆ. ಈ ಇಬ್ಬರು ದಾರ್ಶನಿಕರ ಚಿಂತನೆಯಲ್ಲಿ ಪರಸ್ಪರ ಹೊಂದಾಣಿಕೆಯಿದೆ ಎಂದರು.

ಈ ವೇಳೆ ಹಿರಿಯ ಸಾಹಿತಿಗಳಾದ ಡಾ.ಜಿ.ಪಿ ಬಸವರಾಜು, ಡಾ ಕುಂಸಿ ಉಮೇಶ, ಡಾ.ಅನುಸೂಯ ಕಾಂಬಳೆ ಹಾಗೂ ಡಾ.ಸೀಚ ಯತೀಶ್ವರ ಅವರು ಬಸವಣ್ಣ ಮತ್ತು ಕನಕದಾಸರು: ತೌಲಾನಿಕ ಅಧ್ಯಯನ ಕುರಿತ ವಿಚಾರ ಸಂಕಿರಣದಲ್ಲಿ ಮಾತನಾಡಿದರು.

ಈ ವೇಳೆ ಕನ್ನಡ ಪುಸ್ತಕ ಪ್ರಾಧಿಕಾರದ ಅಧ್ಯಕ್ಷ ಡಾ. ಮಾನಸ ಅಧ್ಯಕ್ಷತೆ ವಹಿಸಿದ್ದರು. ಕಾರ್ಯಕ್ರಮದಲ್ಲಿ ಸಂತ ಕವಿ ಕನಕದಾಸ ಮತ್ತು ತತ್ವಪದಕಾರರ ಅಧ್ಯಯನ ಕೇಂದ್ರದ ಸದಸ್ಯ ಕಾರ್ಯದರ್ಶಿ ಎನ್.ಕರಿಯಪ್ಪ, ಕನ್ನಡ ಪುಸ್ತಕ ಪ್ರಾಧಿಕಾರದ ಆಡಳಿತಾಧಿಕಾರಿ ಕೆ.ಬಿ.ಕಿರಣ್ ಸಿಂಗ್, ಉಪಸಮಿತಿ ಸದಸ್ಯರಾದ ರಾಜಶೇಖರ ಕದಂಬ, ಎಂ.ಚಂದ್ರಶೇಖರ್, ಸುಚಿತ್ರ ಹೆಗಡೆ, ಪ್ರಕಾಶಕ ನಿಂಗರಾಜು ಚಿತ್ತಣ್ಣವರ್ ಹಾಜರಿದ್ದರು. ಡಾ. ತ್ರಿವೇಣಿ ಅವರು ಕಾರ್ಯಕ್ರಮ ನಿರೂಪಿಸಿದರು. ಕನ್ನಡ ಪುಸ್ತಕ ಪ್ರಾಧಿಕಾರದ ಸದಸ್ಯ ನೀರಗುಡಿ ಅವರು ವಂದನೆ ಸಲ್ಲಿಸಿದರು.

ಮೈಸೂರು ಮಿತ್ರ

ಜಿಲ್ಲಾ ಸಹಕಾರಿ ಯೂನಿಯನ್ ಒಕ್ಕೂಟದ ನೂತನ ನಿರ್ದೇಶಕರಿಗೆ ಸನ್ಮಾನ

ಶಾಸಕ ಜಿ.ಡಿ.ಹರೀಶ್‌ಗೌಡರು ನನ್ನ ಮೇಲಿಟ್ಟಿರುವ ನಂಬಿಕೆಗೆ ಚಿರಋಣಿ: ಮಲ್ಲಣ್ಣ



ಮೈಸೂರು ಜಿಲ್ಲಾ ಸಹಕಾರಿ ಯೂನಿಯನ್ ಒಕ್ಕೂಟದ ನೂತನ ನಿರ್ದೇಶಕ ಮಲ್ಲಣ್ಣ ಅವರನ್ನು ಸನ್ಮಾನಿಸಲಾಯಿತು.

ತಿ.ನರಸೀಪುರ, ಸೆ.29– ಮೈಸೂರು ಜಿಲ್ಲಾ ಸಹಕಾರಿ ಯೂನಿಯನ್ ಒಕ್ಕೂಟಕ್ಕೆ ಶಾಸಕ ಜಿ.ಡಿ.ಹರೀಶ್‌ಗೌಡರ ತಂಡದಿಂದ ಸ್ಪರ್ಧಿಸಿ ನಿರ್ದೇಶಕರಾಗಿ ಅವಿರೋಧವಾಗಿ ಆಯ್ಕೆಯಾದ ಕಸಬಾ ಪಿಎಸಿಎಸ್ ಅಧ್ಯಕ್ಷ ಡಣಾಯಕನಪುರ ಮಲ್ಲಣ್ಣ ಅವರನ್ನು ಡಾ.ಶಿವಕುಮಾರ ಸ್ವಾಮಿಗಳ ಸೇವಾ ಟ್ರಸ್ಟ್ ವತಿಯಿಂದ ಆತ್ಮೀಯವಾಗಿ ಸನ್ಮಾನಿಸಲಾಯಿತು.

ಪಟ್ಟಣದ ಸಹಕಾರ ಸಂಘದ ಕಚೇರಿಯಲ್ಲಿ ಸನ್ಮಾನ ಸ್ವೀಕರಿಸಿ ಮಾತನಾಡಿದ ಮಲ್ಲಣ್ಣ ಮೈಸೂರು ಜಿಲ್ಲಾ ಸಹಕಾರಿ ಯೂನಿಯನ್ ಒಕ್ಕೂಟಕ್ಕೆ ಮೊದಲ ಬಾರಿಗೆ ನಮ್ಮ ತಾಲೂಕಿನಿಂದ ಅವಿರೋಧವಾಗಿ ಆಯ್ಕೆಯಾಗಿದ್ದೇನೆ. 3 ಬಾರಿ ಟಿಎಪಿಸಿಎಂಎಸ್ ಉಪಾಧ್ಯಕ್ಷ ಹಾಗೂ 3 ಅವಧಿಗೆ ಕಸಬಾ ಸೊಸೈಟಿ ಅಧ್ಯಕ್ಷನಾಗಿ ಆಯ್ಕೆಯಾಗಿ ಸಹಕಾರಿ ಸೇವೆಯಲ್ಲಿ ತೊಡಗಿಕೊಂಡ ನನ್ನ ಕಾರ್ಯವೈಖರಿ ಗಮನಿಸಿ ಶಾಸಕ ಜಿ.ಡಿ.ಹರೀಶ್‌ಗೌಡರು ವಿಶೇಷ ಆಸಕ್ತಿ ವಹಿಸಿ ಜಿಲ್ಲಾ ಬ್ಯಾಂಕ್‌ಗೆ ಅವಕಾಶ ನೀಡಿದ್ದರು. ಆದರೆ ಕಾರಣಾಂತರದಿಂದ ಜಿಲ್ಲಾ ಬ್ಯಾಂಕ್‌ಗೆ ಹೋಗಲು ಸಾಧ್ಯವಾಗಲಿಲ್ಲ. ಹಾಗಾಗಿ ಅವರೇ ಜಿಲ್ಲಾ ಯೂನಿಯನ್ ಒಕ್ಕೂಟಕ್ಕೆ ನಾಮಿನೇಷನ್ ಮಾಡಿಸಿ ಅವಿರೋಧವಾಗಿ ಆಯ್ಕೆ ಮಾಡಿಸಿದ್ದು, ಅವರು ನನ್ನ ಮೇಲಿಟ್ಟಿರುವ ನಂಬಿಕೆಗೆ ಚಿರಋಣಿಯಾಗಿರುತ್ತೇನೆ. ಹಾಗೂ ಸಹಕಾರ ಕ್ಷೇತ್ರದಲ್ಲಿ ಇನ್ನೂ ಹೆಚ್ಚಿನ ಸೇವೆ ಸಲ್ಲಿಸುವ ಮೂಲಕ ತಾಲೂಕಿನಲ್ಲಿ ಸಹಕಾರ ಕ್ಷೇತ್ರದ ಬಲವರ್ಧನೆಗೆ ಪ್ರಯತ್ನ ಮಾಡುತ್ತೇನೆ ಎಂದರು.

ರೈತ ಮುಖಂಡ ಕೆಬ್ಬೆಹುಂಡಿ ಶಿವಕುಮಾರ್ ಮಾತನಾಡಿ, ಮಲ್ಲಣ್ಣನವರು ಸಹಕಾರ ಕ್ಷೇತ್ರದಲ್ಲಿ ಸಹಕಾರ ಭಂಡಾರದಂತೆ ಕೆಲಸ ಮಾಡುತ್ತಿದ್ದು, ಸಹಕಾರ ಸಂಘದಲ್ಲಿ ತಮ್ಮದೇ ಛಾಪು ಮೂಡಿಸಿ ಎಲ್ಲಾ ಸಮಾಜ, ಸಂಘ ಸಂಸ್ಥೆಗಳನ್ನು ಒಗ್ಗೂಡಿಸಿ ಕೆಲಸ ಮಾಡುತ್ತಿದ್ದಾರೆ. ಜಿಲ್ಲಾ ಸಹಕಾರಿ ಯೂನಿಯನ್ ಒಕ್ಕೂಟಕ್ಕೆ ತಾಲೂಕಿನಿಂದ ಮಲ್ಲಣ್ಣನವರನ್ನು ಆಯ್ಕೆ ಮಾಡಿರುವುದು ಸಂತಸದ ವಿಚಾರ. ಅವರು ಮತ್ತಷ್ಟು ಎತ್ತರಕ್ಕೆ ಬೆಳೆಯುವಂತಾಗಲಿ ಎಂದು ಹಾರೈಸಿದರು.

ಸಂಘದ ಅಧ್ಯಕ್ಷ ಬಜ್ಜಿ ನಿಂಗಪ್ಪ ಮಾತನಾಡಿ, ಸಹಕಾರ ಕ್ಷೇತ್ರಕ್ಕೆ ಡಣಾಯಕನಪುರ ಮಲ್ಲಣ್ಣನವರ ಕೊಡುಗೆ ಅಪಾರವಾಗಿದೆ. ಜಿಲ್ಲಾ ಯೂನಿಯನ್ ಒಕ್ಕೂಟದ ನಿರ್ದೇಶಕರಾಗಿ ಆಯ್ಕೆಯಾಗಿರುವ ಅವರಿಗೆ ಮತ್ತಷ್ಟು ಅಧಿಕಾರ ದೊರಕಿ ಅವರು ಮತ್ತಷ್ಟು ಸೇವೆ ಮಾಡುವಂತಾಗಲಿ ಎಂದು ಆಶಿಸಿದರು.

ವಕೀಲ ವಾಟಾಳು ನಾಗೇಂದ್ರ ಪ್ರಸಾದ್, ಉಪನ್ಯಾಸಕ ಮೂಗೂರು ಕುಮಾರಸ್ವಾಮಿ, ಕಾವೇರಿಪುರ ಎಂ.ಮಲ್ಲು, ಮುಖಂಡರಾದ ಮಾಯಪ್ಪ, ಕಾರ್ ಮಲ್ಲಪ್ಪ, ನಿರಂಜನ್, ಬಸವಣ್ಣ, ಅದೃಷ್ಟ ಮಾದಪ್ಪ, ಬಿಲಿಗೆರೆಹುಂಡಿ ನಟರಾಜು, ಮಾದಾಪುರ ಮರುಡೇಶ್, ವಾಟಾಳು ಗುರುಪಾದ, ಮಾವಿನಹಳ್ಳಿ ಸೋಮಣ್ಣ, ಎಸ್‌ಎಂಆರ್ ಪ್ರಕಾಶ್ ಸೇರಿದಂತೆ ಮತ್ತಿತರರಿದ್ದರು.

ಹನುಮನಾಳು ಸಿದ್ದೇಗೌಡರಿಗೆ ಹ್ಯಾಟ್ರಿಕ್ ಗೆಲುವು



ಹನುಮನಾಳು ಸಿದ್ದೇಗೌಡರು ತಹಸೀಲ್ದಾರರಿಂದ ಪ್ರಮಾಣ ಪತ್ರ ಸ್ವೀಕರಿಸಿದರು.

ತಿ.ನರಸೀಪುರ: ಮೈಸೂರು ಜಿಲ್ಲಾ ಸಹಕಾರಿ ಯೂನಿಯನ್ ಒಕ್ಕೂಟದ ನಿರ್ದೇಶಕರಾಗಿ ಹನುಮನಾಳು ಸಿದ್ದೇಗೌಡ ಜಯಗಳಿಸಿದ್ದಾರೆ. ಈಗಾಗಲೇ 2 ಬಾರಿ ಗೆಲುವು ಸಾಧಿಸಿದ್ದ ಸಿದ್ದೇಗೌಡರು ಈ ಗೆಲುವಿನೊಂದಿಗೆ ಹ್ಯಾಟ್ರಿಕ್ ಸಾಧಿಸಿದ್ದಾರೆ.

ಮೈಸೂರು ಜಿಲ್ಲಾ ಸಹಕಾರಿ ಯೂನಿಯನ್ ಒಕ್ಕೂಟದ ನಿರ್ದೇಶಕರ ಸ್ಥಾನಕ್ಕೆ ಶಾಸಕ ಜಿ.ಡಿ.ಹರೀಶ್‌ಗೌಡರ ಬೆಂಬಲಿಗರಾಗಿ ಹನುಮನಾಳು ಸಿದ್ದೇಗೌಡ ಸ್ಪರ್ಧಿಸಿದ್ದರು. ಇವರ ಪ್ರತಿಸ್ಪರ್ಧಿಯಾಗಿ ರಾಜ್‌ಕುಮಾರ್ ಹಾಗೂ ಪ್ರಸನ್ನ ನಾಮಪತ್ರ ಸಲ್ಲಿಸಿದ್ದರು. ಭಾನುವಾರ ನಡೆದ ಚುನಾವಣೆಯಲ್ಲಿ ಒಟ್ಟು 27 ಮತಗಳ ಪೈಕಿ 15 ಮತ ಪಡೆದ ಸಿದ್ದೇಗೌಡರು ನೂತನ ನಿರ್ದೇಶಕರಾಗಿ ಆಯ್ಕೆಯಾದರೇ, ಪ್ರತಿಸ್ಪರ್ಧಿಗಳಾದ ರಾಜ್‌ಕುಮಾರ್ 5, ಪ್ರಸನ್ನ 7 ಮತಗಳನ್ನು ಪಡೆದು ಪರಾಭವಗೊಂಡರು.

ಈ ವೇಳೆ ಸಹಕಾರಿ ಯೂನಿಯನ್ ಕಚೇರಿಯಲ್ಲಿ ತಹಸೀಲ್ದಾರ್‌ರಿಂದ ಪ್ರಮಾಣ ಪತ್ರವನ್ನು ಸಿದ್ದಗೌಡರು ಸ್ವೀಕರಿಸಿದರು. ಈ ವೇಳೆ ಶಾಸಕ ಜಿ.ಡಿ.ಹರೀಶ್‌ಗೌಡ ಹಾಜರಿದ್ದು ಶುಭ ಕೋರಿದರು. ಅಲ್ಲದೇ ನೆರೆದಿದ್ದ ಅಭಿಮಾನಿಗಳು ಪಟಾಕಿ ಸಿಡಿಸಿ, ಸಿಹಿ ಹಂಚಿ ಸಂಭ್ರಮಾಚರಣೆ ನಡೆಸಿದರು.

ನೂತನ ನಿರ್ದೇಶಕ ಹನುಮನಾಳು ಸಿದ್ದೇಗೌಡ ಮಾತನಾಡಿ, ಶಾಸಕ ಜಿ.ಡಿ.ಹರೀಶ್‌ಗೌಡರ ಸಹಕಾರದೊಂದಿಗೆ ಯೂನಿಯನ್ ಬ್ಯಾಂಕ್ ನಿರ್ದೇಶಕನಾಗಿ ಆಯ್ಕೆಯಾಗಿದ್ದೇನೆ. ಮುಂಬರುವ ದಿನಗಳಲ್ಲಿ ಉತ್ತಮವಾಗಿ ಕಾರ್ಯನಿರ್ವಹಿಸುವ ಮೂಲಕ ಸರ್ಕಾರದಿಂದ ಬರುವ ಸೌಲಭ್ಯಗಳನ್ನು ರೈತರಿಗೆ ಸಮರ್ಪಕವಾಗಿ ತಲುಪಿಸಲು ಪ್ರಾಮಾಣಿಕ ಪ್ರಯತ್ನ ಮಾಡುತ್ತೇನೆ ಎಂದು ಭರವಸೆ ನೀಡಿದರು.

ದೊಡ್ಡ ಬೇಲಾಳು ಪಿಎಸಿಎಸ್ ವಾರ್ಷಿಕ ಮಹಾಸಭೆ



ಸಭೆಯನ್ನು ಸಂಘದ ಅಧ್ಯಕ್ಷ ಮಹದೇವ್ ಉದ್ಘಾಟಿಸಿದರು.

ಕಂಪಲಾಪುರ, ಸೆ.29– ಇಲ್ಲಿಗೆ ಸಮೀಪದ ದೊಡ್ಡ ಬೇಲಾಳು ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘದ ವಾರ್ಷಿಕ ಮಹಾಸಭೆ ಸಂಘದ ಆವರಣದಲ್ಲಿ ನಡೆಯಿತು.

ಕಾರ್ಯಕ್ರಮ ಉದ್ಘಾಟಿಸಿ ಮಾತನಾಡಿದ ಸಂಘದ ಅಧ್ಯಕ್ಷ ಆರ್.ಎಸ್.ಮಹದೇವ್, ಸಂಘದಲ್ಲಿ ಸಾಲ ಪಡೆದು ಸುಸ್ತಿದಾರರಾಗಿರುವ 265 ಮಂದಿಯಿಂದ 3.80 ಕೋಟಿ ಸಾಲ ವಸೂಲಾಗಬೇಕಿದ್ದು, ಈಗಾಗಲೇ ಅವರಿಗೆ 2 ಬಾರಿ ನೋಟಿಸ್ ಜಾರಿಗೊಳಿಸಲಾಗಿದೆ. ಸದ್ಯದಲ್ಲೇ 3 ಬಾರಿಗೆ ನೋಟಿಸ್ ನೀಡಲಾಗುತ್ತಿದ್ದು, ಅದರೊಳಗೆ ಸಾಲ ಕಟ್ಟದಿದ್ದರೇ ಅವರ ವಿರುದ್ಧ ಕೋರ್ಟ್‌ನಲ್ಲಿ ದಾವೆ ಹೂಡಲಾಗುವುದು ಎಂದು ಎಚ್ಚರಿಸಿದರು.

ನನ್ನ ಅಧಿಕಾರವಧಿಯಲ್ಲಿ ರೈತರಿಗೆ ಯಾವುದೇ ಅನ್ಯಾಯವಾಗದಂತೆ ಆಡಳಿತ ಮಂಡಳಿಯನ್ನು ವಿಶ್ವಾಸ ತೆಗೆದುಕೊಂಡು ಸಂಘವನ್ನು ಲಾಭದತ್ತ ಕೊಂಡೊಯ್ಯುವುದೇ ನನ್ನ ಗುರಿ ಎಂದ ಅವರು ನಮ್ಮ ಸಂಘದ ಎಲ್ಲಾ ರೈತರಿಗೂ ಸಾಲ ವಿತರಿಸಲಾಗಿದ್ದು, ಬಾಕಿ ರೈತರಿಗೂ ಮುಂದಿನ ದಿನಗಳಲ್ಲಿ ಸಾಲ ವಿತರಿಸುವುದಾಗಿ ಭರವಸೆ ನೀಡಿದರು.

ಸಿಇಓ ರವಿ ಮಾತನಾಡಿ, ಪ್ರಸಕ್ತ ಸಾಲಿನಲ್ಲಿ ಸಂಘ 5.12 ಲಕ್ಷ ರೂ. ನಿವ್ವಳ ಲಾಭ ಗಳಿಸಿದೆ. ಸಂಘದಲ್ಲಿ 1850 ಷೇರುದಾರರಿದ್ದು, 619 ಮಂದಿಗೆ 9.65 ಕೋಟಿ ಸಾಲ ನೀಡಲಾಗಿದ್ದು, 1.68 ಕೋಟಿ ರೂ. ಷೇರು ಧನವಿದೆ ಎಂದರು.

ಸಭೆಯಲ್ಲಿ ಉಪಾಧ್ಯಕ್ಷ ಕೃಷ್ಣ ನಿರ್ದೇಶಕರಾದ ಮಹೇಶ್, ರಮೇಶ್, ಅಣ್ಣೇಗೌಡ ಬಸವರಾಜ ಅರಸ್, ಕುಮಾರ್, ಲಕ್ಷ್ಮಿಕಾಂತ್ ರಾಜ್ ಅರಸ್, ಮಹದೇವ ನಾಯಕ, ವೀರಭದ್ರ, ಕನಕಮ್ಮ, ಸಾವಿತ್ರಮ್ಮ, ಮುಖಂಡರಾದ ವಿಜಿ ಕೊಪ್ಪಲು ಲೋಕೇಶ್, ಚಲುವಯ್ಯ, ಸಣ್ಣ ತಮ್ಮೇಗೌಡ, ಲೋಕಪಾಲಯ್ಯ, ಹರೀಶ್ ಅರಸ್ ಸೇರಿದಂತೆ ಸಿಬ್ಬಂದಿ ಶ್ರೀಧರ್, ಸುಷ್ಮಾ, ಅರುಣ್ ಹಾಗೂ ರೈತರು ಹಾಜರಿದ್ದರು.

ಶಾಲೆಗಳಲ್ಲಿ ಶಿಕ್ಷಕರ ಶ್ರಮಕ್ಕೆ ಬೆಲೆ ಕಟ್ಟಲಾಗದು

ಗುರುವಂದನಾ ಕಾರ್ಯಕ್ರಮದಲ್ಲಿ ವೈ.ಡಿ.ರಾಜಣ್ಣ



ಗುರುವಂದನಾ ಕಾರ್ಯಕ್ರಮದಲ್ಲಿ ಶಿಕ್ಷಕರನ್ನು ಅಭಿನಂದಿಸಲಾಯಿತು.

ಸರಗೂರು, ಸೆ.29– ಶಾಲೆಗಳಲ್ಲಿ ಶಿಕ್ಷಕರ ಶ್ರಮ ಅವಿರತವಾಗಿದ್ದು, ಅವರ ಶ್ರಮಕ್ಕೆ ಬೆಲೆ ಕಟ್ಟಲಾಗದು ಎಂದು ಪಶುಸಂಗೋಪನಾ ಇಲಾಖೆ ಸಹಾಯಕ ನಿರ್ದೇಶಕ ಡಾ.ವೈ.ಡಿ.ರಾಜಣ್ಣ ತಿಳಿಸಿದರು.

ಪಟ್ಟಣದ ಲಯನ್ಸ್ ಅಕಾಡೆಮಿ ಶಾಲೆಯಲ್ಲಿ ನಡೆದ ಗುರುವಂದನಾ ಕಾರ್ಯಕ್ರಮದಲ್ಲಿ ಮಾತನಾಡಿದ ಅವರು, ಶಿಕ್ಷಕರು ಮಕ್ಕಳ ಪ್ರತಿಭೆ ಗುರುತಿಸುವ ಕೆಲಸ ಮಾಡಬೇಕು. ಪಠ್ಯದೊಂದಿಗೆ ಪಠ್ಯೇತರ ಚಟುವಟಿಕೆಗಳಲ್ಲಿ ಭಾಗಿಯಾಗುವಂತೆ ನೋಡಿಕೊಳ್ಳಬೇಕು. ಮಕ್ಕಳಿಗೆ ಭಕ್ತಿ ಗೀತೆ ಸಾಹಿತ್ಯ, ಕ್ರೀಡೆ, ಸಂಗೀತ ಹೀಗೆ ನಾನಾ ಕ್ಷೇತ್ರಗಳಲ್ಲಿ ಭಾಗಿಯಾಗುವಂತೆ ಪ್ರೇರಣೆ ನೀಡಬೇಕು. ಇಂತಹ ಕೆಲಸವನ್ನು ನಮ್ಮ ಶಿಕ್ಷಕರು ಮಾಡಿದ್ದಾರೆ. ಹೀಗಾಗಿಯೇ ಸಾಹಿತ್ಯದಲ್ಲಿ ಹೆಚ್ಚಿನ ಆಸಕ್ತಿ ಬೆಳೆಯಲು ಸಹಕಾರಿಯಾಯಿತು. ಶಿಕ್ಷಕರಿಂದಲೇ ಇಷ್ಟೊಂದು ದೊಡ್ಡ ಮಟ್ಟಕ್ಕೆ ಬೆಳೆಯಲು ಅನುಕೂಲವಾಯಿತು ಎಂದರು.

ಮಕ್ಕಳ ಬೌದ್ಧಿಕ, ಮಾನಸಿಕವಾಗಿ ವಿಕಾಸ ಹೊಂದುಲು ಶಿಕ್ಷಕರು ಸಹಕರಿಸಬೇಕು. ಇತ್ತೀಚಿಗೆ ಶಿಕ್ಷಕರು ಸಾಕಷ್ಟು ಸಮಸ್ಯೆಗಳನ್ನು ಎದುರಿಸುತ್ತಿದ್ದಾರೆ. ಸರ್ಕಾರಿ ಶಾಲೆಗಳಲ್ಲಿ ಶಿಕ್ಷಕರನ್ನು ಅನ್ಯ ಕಾರ್ಯಗಳಿಗೆ ಬಳಸಿಕೊಳ್ಳಲಾಗುತ್ತಿದೆ. ಇದರಿಂದಾಗಿ ಅವರ ಜವಾಬ್ದಾರಿ ಹೆಚ್ಚಾಗಿದೆ ಎಂದರು.

ಕ್ಷೇತ್ರ ಶಿಕ್ಷಣಾಧಿಕಾರಿ ಸಿ.ಎನ್.ರಾಜು ಮಾತನಾಡಿ, ಶಿಕ್ಷಣ ಕ್ಷೇತ್ರದಲ್ಲಿ ಲಯನ್ಸ್ ಸಂಸ್ಥೆ ಉತ್ತಮ ಕೆಲಸ ಮಾಡುತ್ತಿದ್ದು, ಎಸ್‌ಎಸ್‌ಎಲ್‌ಸಿಯಲ್ಲಿ ಉತ್ತಮ ಫಲಿತಾಂಶ ನೀಡುತ್ತಿದೆ ಎಂದರು.

ಲಯನ್ಸ್ ಕ್ಲಬ್ ಅಧ್ಯಕ್ಷ ಎಸ್.ಬಿ.ನಾಗರಾಜು ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿದ್ದರು. ಜಿಲ್ಲೆ 317 ಜಿ ಪ್ರಾಂತ್ಯ–08 1 ಪ್ರಾಂತೀಯ ಅಧ್ಯಕ್ಷ ಎಸ್.ವಾಸುಕಿ, ಕಸಾಪ ತಾಲೂಕು ಅಧ್ಯಕ್ಷ ಎಂ.ಕೆಂಡಗಣ್ಣಸ್ವಾಮಿ, ಪಪಂ ಸದಸ್ಯ ಶ್ರೀನಿವಾಸ್, ಕಾರ್ಯದರ್ಶಿ ಎಸ್.ಎಸ್.ಪ್ರಭುಸ್ವಾಮಿ, ಖಜಾಂಚಿ ಬ್ರಹ್ಮದೇವಯ್ಯ, ಎಸ್.ವಿ.ಯೋಗೀಶ್, ಎಸ್.ನಾರಾಯಣ್, ಮೋಹನ್ ಕುಮಾರ್, ಶಾಂಭವ ಮೂರ್ತಿ ಸೇರಿದಂತೆ ಶಾಲಾ ಶಿಕ್ಷಕರು ಹಾಜರಿದ್ದರು.

ಈ ವೇಳೆ ಉತ್ತಮ ಶಿಕ್ಷಕ ಪ್ರಶಸ್ತಿಯನ್ನು ಟಿ.ಎಂ.ಸುರೇಶ್ ಕುಮಾರ್, ದೀರ್ಘಾವಧಿ ಸೇವಾ ಪ್ರಶಸ್ತಿಯನ್ನು ಪದ್ಮಿನಿ ಅವರಿಗೆ ನೀಡಲಾಯಿತು. ನಿವೃತ್ತ ದೈಹಿಕ ಶಿಕ್ಷಕ ವಾಸುದೇವ ಅವರನ್ನು ಸನ್ಮಾನಿಸಲಾಯಿತು. ಶಾಲಾ ಶಿಕ್ಷಕ ವೃಂದದವರು ಉಪಸ್ಥಿತರಿದ್ದರು.

ಲಾಭದಲ್ಲಿ ಚಾಮನಹಳ್ಳಿ ಪಿಎಸಿಎಸ್



ಸಭೆಯಲ್ಲಿ ಅಧ್ಯಕ್ಷ ಹೆಚ್.ಎಂ.ಮಾದೇಗೌಡ ಮಾತನಾಡಿದರು.

ಬನ್ನೂರು, ಸೆ.29– ಸಂಘದ ಸದಸ್ಯರ ಸಹಕಾರದಿಂದ ಚಾಮನಹಳ್ಳಿ ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘ ಲಾಭದಲ್ಲಿ ಮುನ್ನಡೆದಿದೆ ಎಂದು ಅಧ್ಯಕ್ಷ ಹೆಚ್.ಎಂ.ಮದೇಗೌಡ ತಿಳಿಸಿದರು.

ಚಾಮನಹಳ್ಳಿ ಪಿಎಸಿಎಸ್ ಆವರಣದಲ್ಲಿ ನಡೆದ 2024–25ನೇ ಸಾಲಿನ ಸರ್ವ ಸದಸ್ಯರ ವಾರ್ಷಿಕ ಮಹಾಸಭೆ ಉದ್ಘಾಟಿಸಿ ಮಾತನಾಡಿದ ಅವರು, ಸಂಘದಿಂದ ರೈತರ ಅನುಕೂಲಕ್ಕಾಗಿ ರಸಗೊಬ್ಬರ, ಪಡಿತರ ವಿತರಣೆ, ಶುದ್ಧ ಕುಡಿಯುವ ನೀರು ಸೇರಿದಂತೆ ಹಲವು ಸೌಲಭ್ಯಗಳನ್ನು ನೀಡಲಾಗಿದ್ದು, ಬಂದ ಲಾಭದಲ್ಲಿ ಧರ್ಮ, ಸಹಕಾರ ಶಿಕ್ಷಣ ನಿಧಿ, ಕರಡು ಸಾಲದ ನಿಧಿ, ಮರಣನಿಧಿ, ಯಶಸ್ವಿನಿ ಯೋಜನೆ ನಿಧಿ, ಸಿಬ್ಬಂದಿ ಕಲ್ಯಾಣ ನಿಧಿಗೆ ಬೈಲಾದ ನಿಯಮದಂತೆ ಹಣ ಮೀಸಲಿಡಲಾಗುವುದು ಎಂದರು.

ರೈತರಿಗೆ ಕೆಸಿಸಿ, ಮಧ್ಯಮಾವಧಿ, ಸ್ವಸಹಾಯ ಸಂಘಗಳಿಗೆ, ಜೆಎಲ್‌ಜೆ, ಹೈನುಗಾರಿಕೆ, ವ್ಯಾಪಾರ, ವೈಯಕ್ತಿಕ ಸಾಲಗಳನ್ನು ನೀಡುವುದರ ಜೊತೆಗೆ ಉಳಿತಾಯ ಮತ್ತು ಪಿಗ್ಮಿ ಠೇವಣಿಗಳ ಮೂಲಕ ಸಂಘದ ಬೆಳವಣಿಗೆಗೆ ಅವಿರತ ಶ್ರಮಿಸಿ ದ್ದರಿಂದ ಪ್ರಸಕ್ತ ಸಾಲಿನಲ್ಲಿ ಸಂಘ 5,79,903 ರೂ. ನಿವ್ವಳ ಲಾಭ ಗಳಿಸಿದೆ ಎಂದರು.

ಸಾಲ ಪಡೆದ ಸದಸ್ಯರು ಸಕಾಲಕ್ಕೆ ಮರುಪಾವತಿಸಬೇಕು. ಅಲ್ಲದೇ ಸಂಘವನ್ನು ಮಾದರಿ ಮಾಡಲು ಎಲ್ಲಾ ಸದಸ್ಯರು ಹಾಗೂ ನಿರ್ದೇಶಕರು ಸಹಕರಿಸಬೇಕು ಎಂದರು.

ಈ ವೇಳೆ ಮಾಜಿ ಶಾಸಕಿ ಜೆ.ಸುನೀತಾ ವೀರಪ್ಪಗೌಡ, ಉಪಾಧ್ಯಕ್ಷ ಎಂ.ಎಸ್.ಜಯರಾಮೇಗೌಡ, ವಿ.ಶಂಕರೇಗೌಡ, ಚನ್ನಮಲ್ಲು, ಗೋಪಾಲ, ಲಕ್ಷ್ಮಮ್ಮ, ಬಿ.ದೇವರಾಜು, ಉಮೇಶ್, ಎಂ.ಸತೀಶ್, ಸಿ.ಎಸ್.ಮಂಜುನಾಥ, ಸಿ.ಪಿ.ವಿದ್ಯಾ, ಮಂಜೇಶ್‌ಗೌಡ, ಸಿಇಓ ಹೆಚ್.ಎಂ.ರವಿಕುಮಾರ್, ಸಿ.ಪಿ.ಮಹದೇವ, ಹೆಚ್.ಎಸ್.ಕೃಷ್ಣ, ಮಂಚೇಗೌಡ, ಸಿ.ಆರ್.ಕೃಷ್ಣಮೂರ್ತಿ ಸೇರಿದಂತೆ ಇತರರಿದ್ದರು.

ಬುದ್ಧಿಮಾಂದ್ಯ ಮಹಿಳೆ ನಾಪತ್ತೆ



ಕೆ.ಆರ್.ನಗರ, ಸೆ.29– ಪಟ್ಟಣದ ಈಶ್ವರ ನಗರದಲ್ಲಿರುವ ಮಾತೃಶ್ರೀ ವಿದ್ಯಾ ಶಿಕ್ಷಣ ಸಂಸ್ಥೆ ಮತ್ತು ಬುದ್ಧಿ ಮಾಂದ್ಯ ಮಹಿಳೆಯರ ಅನುಪಾಲನ ಕೇಂದ್ರದಿಂದ ಬುದ್ಧಿಮಾಂದ್ಯ ಮಹಿಳೆ ಕಾಣೆಯಾಗಿರುವ ಸಂಬಂಧ ಕೆ.ಆರ್.ನಗರ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ಸುರೇಖಾ ಭಾನು (28) ನಾಪತ್ತೆಯಾದವರು. ಈಕೆ ಉರ್ದು ಮತ್ತು ಹಿಂದಿ ಮಾತನಾಡುತ್ತಾರೆ. ಈಕೆ ಬಗ್ಗೆ ಮಾಹಿತಿ ಸಿಕ್ಕಲ್ಲಿ ಕೆ.ಆರ್.ನಗರ ಪೊಲೀಸ್ ಠಾಣೆ ದೂ:08223–263666 ಅಥವಾ ಮೊ.9480805036 ಅನ್ನು ಸಂಪರ್ಕಿಸುವಂತೆ ಪ್ರಕಟಣೆ ತಿಳಿಸಿದೆ.

ನಿರ್ಗಮಿತ ಮಹಾಸಭಾ ಸಮಿತಿ ವಿರುದ್ಧ

ವೀರಶೈವ ಲಿಂಗಾಯತ ಮಹಾಸಭಾಧ್ಯಕ್ಷರ ಸುಳ್ಳು ಆರೋಪ



ಸುದ್ದಿಗೋಷ್ಠಿಯಲ್ಲಿ ಮಹಾಸಭಾ ಮಾಜಿ ಅಧ್ಯಕ್ಷ ದೇವನೂರು ಬಿ.ಮಹದೇವಪ್ಪ ಮಾತನಾಡಿದರು.

ನಂಜನಗೂಡು, ಸೆ.29– ತಾಲೂಕು ಅಖಿಲ ಭಾರತ ವೀರಶೈವ ಲಿಂಗಾಯತ ಮಹಾಸಭಾ ಅಧ್ಯಕ್ಷ ಸಿಂಧುವಳ್ಳಿ ಕೆಂಪಣ್ಣ ಅವರು ನಿರ್ಗಮಿತ ಮಹಾಸಭಾ ಸಮಿತಿ ವಿರುದ್ಧ ಇಲ್ಲಸಲ್ಲದ ಸುಳ್ಳು ಆರೋಪ ಮಾಡಿ ಕಳಂಕ ತರುವ ಪ್ರಯತ್ನ ಮಾಡಿದ್ದಾರೆ ಎಂದು ಮಹಾಸಭಾ ಮಾಜಿ ಅಧ್ಯಕ್ಷ ದೇವನೂರು ಬಿ.ಮಹದೇವಪ್ಪ ಆರೋಪಿಸಿದರು.

ನಗರದ ಪತ್ರಕರ್ತರ ಭವನದಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಕಳೆದ 5 ವರ್ಷಗಳಿಂದ ತಾಲೂಕು ಅಖಿಲ ಭಾರತ ವೀರಶೈವ ಲಿಂಗಾಯತ ಮಹಾಸಭಾ ಅಧ್ಯಕ್ಷನಾಗಿ ನಗರದಲ್ಲಿ ಅದ್ದೂರಿಯಾಗಿ ಬಸವ ಜಯಂತಿ ನಡೆಸಿದ್ದೇನೆ. ಆದರೆ ಈಗಿನ ಅಧ್ಯಕ್ಷ ಎಸ್.ಎಂ.ಕೆಂಪಣ್ಣ ಅವರು, ತಮ್ಮ ಅವಧಿಯಲ್ಲಿ ನಡೆದ ಬಸವ ಜಯಂತಿಗಾಗಿ ಸಮಾಜ ಬಾಂಧವರಿಂದ ಸಂಗ್ರಹಿಸಿದ್ದ ದೇಣಿಗೆ ಹಣದ ಲೆಕ್ಕ ಕೊಟ್ಟಿಲ್ಲ. ಜೊತೆಗೆ ಕಾರ್ಯಕ್ರಮದಂದು ಬಳಸಿ ಉಳಿದ ದಿನಸಿ ಪದಾರ್ಥಗಳನ್ನು ಸಮಿತಿ ಸದಸ್ಯರು ಕೊಂಡೊಯ್ದು ತಮ್ಮ ಸ್ವಂತಕ್ಕೆ ಬಳಸಿಕೊಂಡಿದ್ದಾರೆ ಎಂಬ ಕ್ಷುಲ್ಲಕ ಆರೋಪಿಸಿದ್ದಾರೆ. ಇದು ಸತ್ಯಕ್ಕೆ ದೂರವಾದದ್ದು. ನಮ್ಮ ಸಮಿತಿ ಕಾರ್ಯಕ್ರಮ ನಿಮಿತ್ತ ಹಲವು ಸಮಿತಿಗಳನ್ನು ರಚಿಸಿ ಪಾರದರ್ಶಕವಾಗಿ ಅತ್ಯಂತ ವೈಭವಯುತವಾಗಿ ಬಸವ ಜಯಂತಿ ಆಚರಿಸಲಾಗಿದೆ. ಅಲ್ಲದೆ ಮಲ್ಲನಮೂಲೆ ಮಠದ ಸ್ವಾಮೀಜಿಗಳ ನೇತೃತ್ವದಲ್ಲಿ ಕಾರ್ಯಕ್ರಮ ಮುಗಿದ ನಂತರ ಖರ್ಚು–ವೆಚ್ಚದ ಲೆಕ್ಕಪತ್ರಗಳನ್ನು ಪಾರದರ್ಶಕವಾಗಿ ಮಂಡಿಸಲಾಗಿದೆ. ಆ ಸಮಿತಿಯಲ್ಲಿ ಈಗಿನ ಅಧ್ಯಕ್ಷರು ಉಪಸ್ಥಿತರಿದ್ದರು. ಲೋಪ ದೋಷವಿದ್ದಲ್ಲಿ ಅವರು ಅಲ್ಲಿ ಪ್ರಶ್ನೆ ಮಾಡಬಹುದಿತ್ತು. ಆದರೆ ಪ್ರಸ್ತುತ ಮಹಾಸಭಾ ಅಧ್ಯಕ್ಷ ಸಿಂಧುವಳ್ಳಿ ಕೆಂಪಣ್ಣ ಅವರು ನಿರ್ಗಮಿತ ಮಹಾಸಭಾ ಸಮಿತಿ ವಿರುದ್ಧ ಮಾಡಿರುವ ಆರೋಪವನ್ನು ಖಂಡಿಸುತ್ತೇವೆ ಎಂದರು.

ಮುಖಂಡ ವೀರೇಶ್ ಮಾತನಾಡಿ, ಮಹಾಸಭಾ ನಿರ್ದೇಶಕರನ್ನು ಕಾಡಿ ಬೇಡಿ ನಿಯಮಬಾಹಿರವಾಗಿ ಕೇವಲ 2 ವರ್ಷಗಳ ಅವಧಿಗೆ ಅಧ್ಯಕ್ಷರಾಗಿರುವ ಕೆಂಪಣ್ಣ, ಬಸವ ಜಯಂತಿ ಕಾರ್ಯಕ್ರಮದ ದೇಣಿಗೆ ಸಂಗ್ರಹಿಸಲು ಹೆಚ್ಚುವರಿಯಾಗಿ ರಶೀದಿ ಪುಸ್ತಕ ಮುದ್ರಿಸಿಕೊಂಡು ಹೆಚ್ಚಿನ ಹಣ ಸಂಗ್ರಹಿಸಿದ್ದಾರೆ. ಸಮಿತಿಗೆ ಸರಿಯಾದ ಲೆಕ್ಕ ಕೊಟ್ಟಿಲ್ಲ. ಇಂತಹ ಇತಿಹಾಸ ಹೊಂದಿರುವವರು ಕ್ಷುಲ್ಲಕ ಆರೋಪ ಮಾಡುವ ಮೂಲಕ ಸಮಾಜದ ದಿಕ್ಕು ತಪ್ಪಿಸುತ್ತಿದ್ದಾರೆ ಎಂದರು.

ಸುದ್ದಿಗೋಷ್ಠಿಯಲ್ಲಿ ಕಸುವಿನಹಳ್ಳಿ ಚಿನ್ನಸ್ವಾಮಿ, ಮಂಜು, ಮಧು, ಶಿವನಾಗಪ್ಪ, ಪ್ರಕಾಶ್, ನಂಜಪ್ಪ ಗುರುಪ್ರಸಾದ್, ಮಲ್ಲೇಶ್, ಮುಳ್ಳೂರು ಶೇಖರ್ ಉಪಸ್ಥಿತರಿದ್ದರು.

ಡಾ.ಎಸ್.ಎಲ್.ಭೈರಪ್ಪ ಅವರಿಗೆ ಶ್ರದ್ಧಾಂಜಲಿ



ಇತ್ತೀಚೆಗೆ ನಿಧನರಾದ ಪದ್ಮಭೂಷಣ, ಹಿರಿಯ ಕಾದಂಬರಿಕಾರ ಎಸ್.ಎಲ್.ಭೈರಪ್ಪ ಅವರಿಗೆ ಹುಣಸೂರಿನ ರೋಟರಿ ಭವನದಲ್ಲಿ ಕಸಾಪ ವತಿಯಿಂದ ಶ್ರದ್ಧಾಂಜಲಿ ಸಲ್ಲಿಸಲಾಯಿತು. ಕಸಾಪ ಅಧ್ಯಕ್ಷ ಮಹದೇವ್, ರೋಟರಿ ಸಂಸ್ಥೆ ಅಧ್ಯಕ್ಷ ಕೃಷ್ಣಕುಮಾರ್, ಪ್ರೊ.ಸಿದ್ದೇಗೌಡ, ಆನಂದ ಸ್ವಾಮಿ, ಹಿರಿಯ ಕಲಾವಿದ ಜಂಬುರಾಮ್, ಲಕ್ಷ್ಮಿಕಾಂತ್, ರೈತ ಸಂಘದ ಅಧ್ಯಕ್ಷ ಕುಮಾರ್, ಪತ್ರಕರ್ತ ನಟರಾಜ್, ದಸಂಸ ಮುಖಂಡ ನಿಂಗರಾಜ್, ಶಿಕ್ಷಕ ಲೋಕೇಶ್, ಮಹದೇವಮ್ಮ, ಡೀಡ್ ಶ್ರೀಕಾಂತ್, ವಾಸುಕಿ, ಕಲಾವಿದ ಕುಮಾರ್ ಅರಸೇಗೌಡ, ವಿವಿಧ ಸಂಘಟನೆಗಳ ಪದಾಧಿಕಾರಿಗಳು ಹಾಜರಿದ್ದರು.

ಬಿಳಿಕೆರೆ ಠಾಣೆ ಇನ್ಸ್‌ಪೆಕ್ಟರ್ ಟಿ.ಎಂ.ಪುನೀತ್ ಅಧಿಕಾರ ಸ್ವೀಕಾರ



ನೂತನ ಇನ್ಸ್‌ಪೆಕ್ಟರ್ ಪುನೀತ್ ಅವರನ್ನು ಮುಖಂಡರು ಸನ್ಮಾನಿಸಿದರು.

ಹುಣಸೂರು, ಸೆ.29– ತಾಲೂಕಿನ ಬಿಳಿಕೆರೆ ಪೊಲೀಸ್ ಠಾಣೆ ಇನ್ಸ್‌ಪೆಕ್ಟರ್ ಆಗಿ ಟಿ.ಎಂ.ಪುನೀತ್ ಅಧಿಕಾರ ಸ್ವೀಕರಿಸಿದ್ದಾರೆ.

ಈ ಠಾಣೆಯ ಹಿಂದಿನ ಇನ್ಸ್‌ಪೆಕ್ಟರ್ ಲೋಲಾಕ್ಷಿ ಅವರು ರಜೆ ಮೇಲೆ ತೆರಳಿದ ಹಿನ್ನೆಲೆಯಲ್ಲಿ ನಗರ ಠಾಣೆ ಇನ್ಸ್‌ಪೆಕ್ಟರ್ ಸಂತೋಷ್ ಕಶ್ಯಪ್ ಪ್ರಭಾರವಾಗಿ ಕಾರ್ಯ ನಿರ್ವಹಿಸುತ್ತಿದ್ದರು. ಅಲ್ಲದೇ ಲೋಲಾಕ್ಷಿಯವರನ್ನು ಮೈಸೂರು ನಗರದ ಲಷ್ಕರ್ ಠಾಣೆಗೆ ನಿಯುಕ್ತಿಗೊಳಿಸಿದ್ದರಿಂದ ಬಿಳಿಕೆರೆಯಲ್ಲಿ ಖಾಲಿಯಾಗಿದ್ದ ಸ್ಥಾನಕ್ಕೆ ಕೆಆರ್‌ಎಸ್ ಠಾಣೆಯಲ್ಲಿ ಕರ್ತವ್ಯ ನಿರ್ವಹಿಸುತ್ತಿದ್ದ ಪುನೀತ್ ಅವರನ್ನು ನಿಯೋಜಿಸಿ ಪೊಲೀಸ್ ಮಹಾ ನಿರ್ದೇಶಕರು ಆದೇಶಿಸಿದ್ದರು.

ಈ ಹಿನ್ನೆಲೆಯಲ್ಲಿ ಬಿಳಿಕೆರೆ ಠಾಣೆ ಇನ್ಸ್‌ಪೆಕ್ಟರ್ ಆಗಿ ಅಧಿಕಾರ ಸ್ವೀಕರಿಸಿದ ಟಿ.ಎಂ.ಪುನೀತ್ ಅವರನ್ನು ಟಿಎಪಿಸಿಎಂಎಸ್ ಮಾಜಿ ಅಧ್ಯಕ್ಷ ಕೆಂಪೇಗೌಡ, ಮಾಜಿ ಉಪಾಧ್ಯಕ್ಷ ನಾಗರಾಜು, ಮಾಜಿ ಗ್ರಾಪಂ ಅಧ್ಯಕ್ಷ ಗೋವಿಂದೇಗೌಡ, ಟೌನ್ ಬಳಕೆದಾರರ ಸಂಘದ ನಿರ್ದೇಶಕ ಕೆ.ಕೃಷ್ಣ ಸನ್ಮಾನಿಸಿದರು.

ಗುಣಮಟ್ಟದ ಹಾಲು ಸರಬರಾಜಿಗೆ ಮನವಿ



ಕಾರ್ಯಕ್ರಮವನ್ನು ಸಂಘದ ಅಧ್ಯಕ್ಷ ಶಿವರಾಜು ಉದ್ಘಾಟಿಸಿದರು.

ಮಲ್ಕುಂಡಿ, ಸೆ.29– ಹೆಚ್ಚಿನ ಪ್ರಮಾಣದಲ್ಲಿ ಗುಣಮಟ್ಟದ ಹಾಲು ಸರಬರಾಜು ಮಾಡುವ ಮೂಲಕ ಹಾಲು ಉತ್ಪಾದಕರು ಸಂಘದ ಅಭಿವೃದ್ಧಿಗೆ ಮುಂದಾಗಬೇಕು ಎಂದು ಹುರ ಗ್ರಾಮದ ಹಾಲು ಉತ್ಪಾದಕರ ಸಂಘದ ಅಧ್ಯಕ್ಷ ಶಿವರಾಜು ತಿಳಿಸಿದರು.

ಇಲ್ಲಿಗೆ ಸಮೀಪದ ಹುರ ಡೇರಿ ಆವರಣದಲ್ಲಿ ನಡೆದ 2024–25ನೇ ಸಾಲಿನ ವಾರ್ಷಿಕ ಮಹಾಸಭೆ ಉದ್ಘಾಟಿಸಿ ಮಾತನಾಡಿದ ಅವರು, ಹಾಲು ಉತ್ಪಾದಕರು ಮೈಮುಲ್‌ನಿಂದ ದೊರೆಯುವ ಸೌಲಭ್ಯಗಳನ್ನು ಸದುಪಯೋಗಪಡಿಸಿಕೊಂಡು ಗುಣಮಟ್ಟದ ಹಾಲನ್ನು ಸರಬರಾಜು ಮಾಡಿದರೇ ಹೆಚ್ಚಿನ ಲಾಭ ಬರಲು ಸಾಧ್ಯವಾಗಲಿದೆ. ಇದರಿಂದ ಸಂಘದ ಅಭಿವೃದ್ಧಿ ಜೊತೆಗೆ ತಮ್ಮ ಆರ್ಥಿಕ ಪರಿಸ್ಥಿತಿಯೂ ಸುಧಾರಣೆಯಾಗಲಿದೆ ಎಂದರು.

ಈ ವೇಳೆ ಸಂಘದ ಉಪಾಧ್ಯಕ್ಷ ರವಿಮೂರ್ತಿ, ಸುಬ್ಬಯ್ಯ, ಮಹದೇವಯ್ಯ, ರಾಜು, ವೆಂಕಟಯ್ಯ, ಚನ್ನಯ್ಯ, ಪುಟ್ಟನಾಯಕ, ಗೌರಮ್ಮ, ತ್ಯಾಗರಾಜು, ಸಿಇಓರಾಮನಾಥ್ ಸೇರಿದಂತೆ ಇತರರಿದ್ದರು.

ತಿ.ನರಸೀಪುರ ನಾಯಕರ ಸಂಘಕ್ಕೆ ಎಂ.ಡಿ.ಬಸವರಾಜು ಅಧ್ಯಕ್ಷ

ಕಾರ್ಯದರ್ಶಿಯಾಗಿ ಆಲಗೂಡು ನಾಗರಾಜು ಅವಿರೋಧ ಆಯ್ಕೆ



ಸಂಘದ ನೂತನ ಪದಾಧಿಕಾರಿಗಳನ್ನು ಸನ್ಮಾನಿಸಲಾಯಿತು.

ತಿ.ನರಸೀಪುರ ಸೆ.29– ತಾಲೂಕು ನಾಯಕರ ಸಂಘದ ಅಧ್ಯಕ್ಷರಾಗಿ ಎಂ.ಡಿ.ಬಸವರಾಜು ಹಾಗೂ ಪ್ರಧಾನ ಕಾರ್ಯದರ್ಶಿಯಾಗಿ ಆಲಗೂಡು ನಾಗರಾಜು ಅವಿರೋಧವಾಗಿ ಆಯ್ಕೆಯಾದರು.

ಪಟ್ಟಣದ ತಾಲೂಕು ನಾಯಕರ ಸಂಘದ ಆವರಣದಲ್ಲಿ ನಡೆದ ಸಭೆಯಲ್ಲಿ ಸಂಘದ ಚಟುವಟಿಕೆಗಳು, ಭವಿಷ್ಯದ ಯೋಜನೆಗಳು ಹಾಗೂ ನಾಯಕ ಸಮುದಾಯದ ಸಾಂಸ್ಕೃತಿಕ–ಸಾಮಾಜಿಕ ಪ್ರಗತಿ ಕುರಿತಂತೆ ಚರ್ಚೆ ನಡೆಸಿದ ಸದಸ್ಯರು, ಒಮ್ಮತ ದಿಂದ ಅಧ್ಯಕ್ಷರಾಗಿ ಎಂ.ಡಿ.ಬಸವರಾಜು, ಪ್ರಧಾನ ಕಾರ್ಯದರ್ಶಿ ಆಲಗೂಡು ನಾಗರಾಜು, ಗೌರವಾಧ್ಯಕ್ಷ ತಲಕಾಡು ಮಂಜುನಾಥನ್, ಉಪಾಧ್ಯಕ್ಷ ಹೆಮ್ಮಿಗೆ ಹೊನ್ನನಾಯಕ ಹಾಗೂ ಖಜಾಂಚಿಯಾಗಿ ಗೋವಿಂದರಾಜ್ ಅವರನ್ನು ಆಯ್ಕೆಗೊಳಿಸಿದರು.

ನೂತನ ಅಧ್ಯಕ್ಷ ಎಂ.ಡಿ.ಬಸವರಾಜು ಮಾತನಾಡಿ, ವಾಲ್ಮೀಕಿ ಭವನದ ಉಳಿದಿರುವ ಕಾಮಗಾರಿಯನ್ನು ನೂತನ ಕಾರ್ಯಕಾರಿ ಸಮಿತಿ ಹಾಗೂ ನಾಯಕ ಸಮಾಜದ ಎಲ್ಲಾ ಮುಖಂಡರ ಸಹಕಾರದೊಂದಿಗೆ ಮುಖ್ಯಮಂತ್ರಿ ಸಿದ್ದರಾಮಯ್ಯ ಹಾಗೂ ಸಚಿವ ಡಾ.ಹೆಚ್.ಸಿ.ಮಹದೇವಪ್ಪ ಅವರಿಂದ ಅನುದಾನ ತಂದು ವರ್ಷದೊಳಗೆ ಮುಗಿಸಿ ಸಿಎಂ ಮತ್ತು ಸಚಿವರಿಂದಲೇ ಉದ್ಘಾಟಿಸುವ ಭರವಸೆಯನ್ನು ನಾಯಕ ಸಮುದಾಯದ ಬಂಧುಗಳಿಗೆ ನೀಡುತ್ತಿದ್ದೇನೆ. ಅದರಂತೆಯೇ ನಡೆದುಕೊಳ್ಳುತ್ತೇನೆ ಎಂದರು.

ಈ ವೇಳೆ ನಾಯಕರ ಸಂಘದ ಮಾಜಿ ಅಧ್ಯಕ್ಷ ಹೊನ್ನನಾಯಕ, ವೆಂಕಟರಾಮಯ್ಯ, ಮಾಜಿ ಪ್ರಧಾನ ಕಾರ್ಯದರ್ಶಿ ಪಿ.ಶಶಿಧರ್, ಜಿಪಂ ಮಾಜಿ ಸದಸ್ಯ ಕೆ.ಸಿ.ಲೋಕೇಶ್, ಪ್ರಥಮ ದರ್ಜೆ ಗುತ್ತಿಗೆದಾರ ಶ್ರೀರಂಗರಾಜಪುರ ಸಿದ್ದರಾಜು, ಮುಖಂಡರಾದ ಡಾ.ಎಂ.ಮಹದೇವಯ್ಯ, ರಾಜು, ಬೂದಹಳ್ಳಿ ಸಿದ್ದರಾಜು, ತಲಕಾಡು ಯಜಮಾನ್ ರಾಜು, ಗಾಡಿ ಮಹದೇವನಾಯಕ, ಸುಂದರನಾಯಕ, ಆರ್.ಪಿ.ಹುಂಡಿ ನಾಗರಾಜು, ಮರಡಿಪುರ ನಾಗರಾಜು, ಇಂಡವಾಳು ಬಸವರಾಜು, ಕುಮಾರ್, ಗವಿನಾಯಕ, ಮಹೇಶ್, ಪ್ರಸಾದ್ ನಾಯಕ್, ಕೃಷ್ಣ ನಾಯಕ, ರಾಜೇಶ್, ಮೂಗೂರು ಮರಿಸ್ವಾಮಿ, ಶಾಂತರಾಜು, ಮಹದೇವ, ಕೆಬ್ಬೆ ಸುಂದ್ರ, ಮಾದೇಶ್ ನಾಯಕ, ಕುಮಾರ್ ಇತರರಿದ್ದರು.


ಸಭೆಯಲ್ಲಿ ನಾಯಕ ಸಮುದಾಯದ ಸಾಂಸ್ಕೃತಿಕ–ಸಾಮಾಜಿಕ ಅಭಿವೃದ್ಧಿ, ಸಂಘದ ಚಟುವಟಿಕೆಗಳು, ಭವಿಷ್ಯದ ಯೋಜನೆಗಳು ಕುರಿತಂತೆ ಚರ್ಚಿಸಲಾಯಿತು. ಅಲ್ಲದೇ ಸಂಘದ ಪದಾಧಿಕಾರಿಗಳು ಸಂಘದ ಒಗ್ಗಟ್ಟು ಕಾಪಾಡಿ, ಸಂಘದ ಬೆಳವಣಿಗೆಗೆ ಸಹಕರಿಸಿ, ಸದಸ್ಯರ ಹಿತಾಸಕ್ತಿ ಕಾಪಾಡಲು ಸನ್ನದ್ಧರಾಗಿ ಕಾರ್ಯ ನಿರ್ವಹಿಸುವಂತೆ ಹಾಗೂ ವಿವಿಧ ಕ್ಷೇತ್ರಗಳಲ್ಲಿರುವ ನಾಯಕ ಸಮುದಾಯದ ಸಬಲೀಕರಣ, ಶಿಕ್ಷಣ ಹಾಗೂ ಸಾಮಾಜಿಕ ನ್ಯಾಯಕ್ಕಾಗಿ ಸಂಘವು ಮುಂದಿನ ದಿನಗಳಲ್ಲಿ ಇನ್ನಷ್ಟು ಚಟುವಟಿಕೆಗಳನ್ನು ಕೈಗೊಳ್ಳುವಂತೆ ಮುಖಂಡರು ಸಲಹೆ ನೀಡಿದರು.

ನಾಡಕಚೇರಿಯಲ್ಲಿ ಕಂಪ್ಯೂಟರ್ ಕಳ್ಳತನ



ಬೆಟ್ಟದಪುರ, ಸೆ.29– ದುಷ್ಕರ್ಮಿಗಳು ಗ್ರಾಮದ ನಾಡ ಕಚೇರಿ ಬಾಗಿಲು ಮುರಿದು 50 ಸಾವಿರ ಮೌಲ್ಯದ ಕಂಪ್ಯೂಟರ್‌ಗಳನ್ನು ಕಳ್ಳತನ ಮಾಡಿರುವ ಘಟನೆ ಭಾನುವಾರ ರಾತ್ರಿ ನಡೆದಿದೆ. ಸೋಮವಾರ ಬೆಳಗ್ಗೆ ನಾಡಕಚೇರಿಗೆ ಉಪ ತಹಸೀಲ್ದಾರ್ ಶಶಿಧರ, ಸಿಬ್ಬಂದಿ ಆಗಮಿಸಿದ ವೇಳೆ ಕಳ್ಳತನ ನಡೆದಿರುವುದು ಬೆಳಕಿಗೆ ಬಂದಿದೆ. ವಿಷಯ ತಿಳಿದು ಸ್ಥಳಕ್ಕಾಗಮಿಸಿದ ಬೆಟ್ಟದಪುರ ಠಾಣೆ ಪೊಲೀಸರು ಪರಿಶೀಲಿಸಿ ಪ್ರಕರಣ ದಾಖಲಿಸಿಕೊಂಡು ಮುಂದಿನ ತನಿಖೆ ಕೈಗೊಂಡಿದ್ದಾರೆ.

ಪುಟ್ಟಬಸವ ನಾಯಕ ನಿಧನ



ಹೆಚ್.ಡಿ.ಕೋಟೆ, ಸೆ.29– ತಾಲೂಕಿನ ನೇರಳೆ ಹೊಸೂರು ಗ್ರಾಮದ ನಿವಾಸಿ, ಖ್ಯಾತ ನಾಟಿ ವೈದ್ಯ ಪುಟ್ಟಬಸವ ನಾಯಕ (99) ಸೋಮವಾರ ನಿಧನರಾದರು. ಮೃತರು ಆರು ಮಂದಿ ಪುತ್ರರು, ಇಬ್ಬರು ಪುತ್ರಿಯರು ಸೇರಿದಂತೆ ಅಪಾರ ಬಂಧುಗಳನ್ನು ಅಗಲಿದ್ದಾರೆ. ಅಂತ್ಯಕ್ರಿಯೆ ಮಂಗಳವಾರ ಸ್ವಗ್ರಾಮದ ಮೃತರ ತೋಟದಲ್ಲಿ ನಡೆಯಲಿದೆ ಎಂದು ಕುಟುಂಬದ ಮೂಲಗಳು ತಿಳಿಸಿವೆ.

ಇಂದಿನ (ಸೆಪ್ಟೆಂಬರ್ 30) ದಸರಾ ಕಾರ್ಯಕ್ರಮಗಳು

ಸಾಂಸ್ಕೃತಿಕ ಕಾರ್ಯಕ್ರಮಗಳು



ಕಿರು ರಂಗಮಂದಿರ ವೇದಿಕೆ

ಮ. 2.00 : ಡಾ. ಮೃತ್ಯುಂಜಯ ಅಗಡಿ ಮತ್ತು ತಂಡದಿಂದ ಹಿಂದೂಸ್ಥಾನಿ ಗಾಯನ
ಮ. 3.00 : ಸೂತ್ರ ಫೌಂಡೇಷನ್, ಮೈಸೂರು, ಜಗದೀಶ್ ಕುಮಾರ್. ಜಿ. ಅವರಿಂದ ರಂಗ ಸಂಗೀತ
ರಾ. 7.00 : ಸಂಜೆ ರಂಗ ರೂಬಿನ್ ಸಂಜಯ್ ಮತ್ತು ತಂಡದಿಂದ ನಾಟಕ : ಬೆಲ್ಲದ ದೋಣಿ

ಪುರಭವನ ವೇದಿಕೆ

ಬೆ. 10.30 : ಶ್ರೀ ಸಿದ್ದರಾಮೇಶ್ವರ ಕನ್ನಡ ಕಲಾ ಸಂಘ, ಮೈಸೂರು ಪುಟ್ಟಯ್ಯ ಅವರಿಂದ ಪೌರಾಣಿಕ ನಾಟಕ : ಚಂದ್ರಮನ ಶಾಪ ವಿಮೋಚನೆ
ಮ. 3.00 : ಗಂಗಾಪರಮೇಶ್ವರಿ ಕಲಾಸಂಘ, ಮೈಸೂರು ಅವರಿಂದ ಸಾಮಾಜಿಕ ನಾಟಕ : ಮಲಮಗಳು
ಸಂ. 6.00 : ಶ್ರೀ ಗಣಪತಿ ಮಿತ್ರ ಮಂಡಳಿ, ಮೈಸೂರು, ಸುಲೋಚನಾ ಅವರಿಂದ ಸಾಮಾಜಿಕ ನಾಟಕ : ಮುದುಕನ ಮದುವೆ

ಚಿಕ್ಕಗಡಿಯಾರ ವೇದಿಕೆ

ಸಂ. 4.00 : ಸಂತೋಷ್ ಮತ್ತು ತಂಡ, ತುಮಕೂರು ಅವರಿಂದ ಗಾರುಡಿಗೊಂಬೆ ನೃತ್ಯ
ಸಂ. 4.30 : ಮಾರುತಿ ಕೋಳಿ ಮತ್ತು ತಂಡ, ಬೀದರ್ ಅವರಿಂದ ತತ್ವಪದ
ಸಂ. 5.30 : ಜಿ.ಎಚ್. ಬಸವರಾಜು ಮತ್ತು ತಂಡದಿಂದ ಜಾನಪದ ಗಾಯನ
ಸಂ. 6.30 : ಗೀತಾ ಕಾರೆಪ್ಪ ಮ್ಯಾಗಿನ ಮನೆ ಮತ್ತು ತಂಡ, ಬಾಗಲಕೋಟೆ ಅವರಿಂದ ಚೌಡಿಕೆ ಪದ
ರಾ. 7.30 : ನಾಗಪ್ಪ ಗೋವಿಂದಪ್ಪ ಸಿದ್ದಣ್ಣನವರ ಮತ್ತು ತಂಡದಿಂದ ಭಜನೆ
ರಾ. 8.30 : ಟಿ.ಎಸ್. ಮಹದೇವು ಮತ್ತು ತಂಡದಿಂದ ಜಾನಪದ ಗಾಯನ

ನಾದಬ್ರಹ್ಮ ಸಂಗೀತಸಭಾ ವೇದಿಕೆ, ಜೆಎಲ್‌ಬಿ ರಸ್ತೆ.

ಸಂ. 4.15 : ಲಕ್ಷ್ಮೀದೇವಿ ಎಂ. ಮತ್ತು ತಂಡ, ಹೊಸಕೋಟೆ (ಅಂಧ ಕಲಾವಿದರು) ಅವರಿಂದ ವಚನ ಗಾಯನ
ಸಂ. 5.00 : ನಯನ ವಸಂತಾಚಾರ್ಯ ಅಳವಂಡಿ ಮತ್ತು ತಂಡ, ಗದಗ ಅವರಿಂದ ಸುಗಮ ಸಂಗೀತ
ಸಂ. 5.45 : ಅರ್ಚನಾ ಜಿ. ಮತ್ತು ಅನುಷಾ ಜಿ. ತಂಡ, ಮೈಸೂರು ಅವರಿಂದ ಸ್ಯಾಕ್ಸೋಫೋನ್ ವಾದನ
ಸಂ. 6.30 : ಡಾ. ಪದ್ಮಿನಿ ಎಲ್. ಓಕ್, ಬೆಂಗಳೂರು ಅವರಿಂದ ಭಕ್ತಿಗೀತೆ
ರಾ. 7.30 : ಮಧುರ ಎಸ್. ಸಂಪಗಾವಿ ಮತ್ತು ತಂಡ, ಬಾಗಲಕೋಟೆ ಅವರಿಂದ ಭರತನಾಟ್ಯ
ರಾ. 8.30 : ಭಾವಾಂತರಂಗ ಕಲಾ ವೃಂದ –ಜಿ.ಕೆ. ಶಂಕರ್ ಅವರಿಂದ ಹಳೆಯ ಮಧುರ ಗೀತೆಗಳು

ಗಾನಭಾರತಿ ವೇದಿಕೆ, ಕುವೆಂಪುನಗರ

ಸಂ. 5.00 : ಗಾನ ಕಲಾಕಸ್ತೂರಿ ಎಸ್. ಪುಟ್ಟರಾಜು ಮತ್ತು ತಂಡದಿಂದ ವಾದ್ಯ ಸಂಗೀತ
ಸಂ. 5.30 : ಎಸ್.ಆರ್. ಲಕ್ಷ್ಮೀನರಸಿಂಹನ್ ಮತ್ತು ತಂಡ, ಮೈಸೂರು ಅವರಿಂದ ಹರಿಕಥಾ ಕಾರ್ಯಕ್ರಮ
ರಾ. 6.30 : ವಿಷಕಂಠಮೂರ್ತಿ ಮತ್ತು ತಂಡದಿಂದ ಭಕ್ತಿ ಸಂಗೀತ
ರಾ. 7.30 : ಶಿವಗಂಗಾ ಸಾಂಸ್ಕೃತಿಕ ಯುವಕ ಸಂಘ, ಮಂಡ್ಯ– ಎಸ್. ಬಸವರಾಜು ಅವರಿಂದ ಮೂಲದಾಟಿ ಜಾನಪದ ಗಾಯನ
ರಾ. 8.30 : ಶಿವಪ್ಪ ಮತ್ತು ತಂಡದಿಂದ ಜಾನಪದ ಗಾಯನ

ರಮಾಗೋವಿಂದ ರಂಗಮಂದಿರ ವೇದಿಕೆ, ರಾಮಕೃಷ್ಣನಗರ

ಸಂ. 5.00 : ಅನಂತಗೀತ ಮತ್ತು ತಂಡದಿಂದ ಜಾನಪದ ಗೀತೆ
ಸಂ. 5.30 : ನಾದ ವಿದ್ಯಾಲಯ ವಿದ್ಯಾರ್ಥಿಗಳಿಂದ ಭರತನಾಟ್ಯ
ರಾ. 6.30 : ವಿದ್ವಾನ್ ಪ್ರೊ. ಎಂ.ಜಿ. ವೆಂಕಟರಾಘವನ್ ಮತ್ತು ತಂಡ, ಬೆಂಗಳೂರು ಅವರಿಂದ ಸುಗಮ ಸಂಗೀತ
ರಾ. 7.30 : ಬಾ ಸೃಷ್ಟಿ ಕಲಾವಿದರಿಂದ ನಾಟಕ : ಆಮೆ ಕಥೆ

ಶ್ರೀಕಂಠೇಶ್ವರ ದೇವಸ್ಥಾನ, ನಂಜನಗೂಡು

ಸಂ. 5.00 : ಎಚ್.ಕೆ. ಶಿವಕುಮಾರ್ ಮತ್ತು ತಂಡ, ಚನ್ನಪಟ್ಟಣ ಅವರಿಂದ ಜಾನಪದ ಗಾಯನ
ಸಂ. 5.30 : ಆರ್. ಮಂಜುನಾಥ್ ಮತ್ತು ತಂಡದಿಂದ ಬುದ್ಧ ಮತ್ತು ಅಂಬೇಡ್ಕರ್ ಗೀತಗಾಯನ
ರಾ. 6.30 : ಶ್ರೀ ನೃತ್ಯ ಕಲಾ ನಿಲಯಂ, ಸಂಧ್ಯಾಮೂರ್ತಿ ಮತ್ತು ತಂಡ, ಆಂಧ್ರಪ್ರದೇಶ ಅವರಿಂದ ಕೂಚುಪುಡಿ ನೃತ್ಯ
ರಾ. 7.30 : ಕು. ನಯನತಾರ ಭರತ ಮುಗದೂರ ಮತ್ತು ತಂಡದಿಂದ ಭರತನಾಟ್ಯ
ರಾ. 8.30 : ದಿವ್ಯ ಎಂ. ಮತ್ತು ತಂಡ, ಬೆಂಗಳೂರು ಅವರಿಂದ ಸುಗಮ ಸಂಗೀತ

ಜಗನ್ಮೋಹನ ಅರಮನೆ ವೇದಿಕೆ

ಸಂ. 4.00 : ರವಿ ಟಿ.ಎಂ. ಮತ್ತು ತಂಡದಿಂದ ವಾದ್ಯ ಸಂಗೀತ
ಸಂ. 4.30 : ಹರಿಣಾಕ್ಷಿ ಜಿ.ಎಸ್. ಮತ್ತು ತಂಡ, ಮೈಸೂರು ಅವರಿಂದ ಸುಗಮ ಸಂಗೀತ
ಸಂ. 5.30 : ಭುವನ ಗುರುಪ್ರಸಾದ್ ಮತ್ತು ತಂಡ, ಬೆಂಗಳೂರು ಅವರಿಂದ ಕಥಕ್
ಸಂ. 6.30 : ನಾಗರಾಜು ಪಿ. ಮತ್ತು ತಂಡ, ಮೈಸೂರು ಅವರಿಂದ ಸ್ಯಾಕ್ಸೋಫೋನ್ ವಾದನ
ರಾ. 7.30 : ಗಾನ ಸಂಭ್ರಮ ಟ್ರಸ್ಟ್, ಬೆಂಗಳೂರು, ಡಾ. ಪ್ರಭು ಬಿ.ಎಂ. ಮತ್ತು ತಂಡದಿಂದ ಸುಗಮ ಸಂಗೀತ
ರಾ. 8.30 : ಶ್ರೀ ನಂದೀಶ್ವರ ಭರತನಾಟ್ಯ ಕಲಾಶಾಲೆ, ಮಂಡ್ಯ – ವಿದುಷಿ ಶೈಲಾ ಕೆ.ಎಸ್. ಮತ್ತು ತಂಡದಿಂದ ನೃತ್ಯರೂಪಕ : ದಶಾವತಾರ

ಕರ್ನಾಟಕ ಕಲಾಮಂದಿರ ವೇದಿಕೆ

ಸಂ. 4.30 : ಚಿಕ್ಕಬೋರಯ್ಯ ಮತ್ತು ತಂಡ, ಮಂಡ್ಯ ಅವರಿಂದ ಪೂಜಾಕುಣಿತ
ಸಂ. 5.00 : ಸಂದೀಪ್ ದೇವಾಡಿಗ ಮತ್ತು ತಂಡ, ಪುತ್ತೂರು ಅವರಿಂದ ಸ್ಯಾಕ್ಸೋಫೋನ್ ವಾದನ
ಸಂ. 5.30 : ಸುಚೇತ ಮತ್ತು ತಂಡ, ಬೆಂಗಳೂರು ಅವರಿಂದ ಸಮೂಹ ನೃತ್ಯ
ರಾ. 6.30 : ಪ್ರದೀಪ್ ಮತ್ತು ಕಲಾವೃಂದ, ಮೈಸೂರು, ಪ್ರದೀಪ್ ಜಿ. ಮತ್ತು ತಂಡದಿಂದ ಸುಗಮ ಸಂಗೀತ
ರಾ. 7.30 : ಗುಂಡಪ್ಪ ಕಟ್ಟಿ ಮತ್ತು ತಂಡ, ಬೀದರ್ ಅವರಿಂದ ಹಿಂದೂಸ್ಥಾನಿ ಶಾಸ್ತ್ರೀಯ ಸಂಗೀತ
ರಾ. 8.30 : ವಿದುಷಿ ಪದ್ಮ ಗಂದಿನಿರಾವ್ ಹುಲಿಕಲ್ ಮತ್ತು ತಂಡದಿಂದ ಭರತನಾಟ್ಯ

ಚಾಮುಂಡಿಬೆಟ್ಟದ ತಪ್ಪಲು

ಬೆ. 6.00 : ಯೋಗಚಾರಣ, ಉದ್ಘಾಟನೆ : ಶಾಸಕ ಜಿ.ಟಿ. ದೇವೇಗೌಡರು
ರಾ. 9.00 : ಚಾಮುಂಡೇಶ್ವರಿ ದೇವಸ್ಥಾನದ ಆವರಣದಲ್ಲಿ ದುರ್ಗಾ ನಮಸ್ಕಾರ

ಭೂಮಿಗೀತ, ರಂಗಾಯಣ

ಬೆ. 7.00 : ರಂಗಭೀಷ್ಮ ಬಿ.ವಿ. ಕಾರಂತ ಕಾಲೇಜು ನವರಾತ್ರಿ ರಂಗೋತ್ಸವ, ಗೌತಮ ಸಾಂಸ್ಕೃತಿಕ ಸಂಸ್ಥೆ, ಮೈಸೂರು ಅವರಿಂದ ಜಾತ್ರೆ ನಾಟಕ ಪ್ರದರ್ಶನ, ರಚನೆ : ದ.ರಾ. ಬೇಂದ್ರೆ, ನಿರ್ದೇಶನ : ಕೃಷ್ಣಮೂರ್ತಿ

ವನರಂಗ, ರಂಗಾಯಣ

ಬೆ. 5.30 : ಅಂತರರಾಜ್ಯ ಕಲಾತಂಡಗಳಿಂದ ಜಾನಪದ ನೃತ್ಯ ಪ್ರದರ್ಶನ, ಲಂಬಾಡಿ, ಮಾತುರಿ, ತೆಲಂಗಾಣ; ಲಾವಣಿ, ಹೋಲಿ, ಮಹಾರಾಷ್ಟ್ರ; ಸಿದ್ದಿ ಧುಮಾಲ್, ಗುಜರಾತ್; ಸಂಬಲ್‌ಪುರಿ, ಒರಿಸ್ಸಾ; ತಿರುವತ್ತಿರಕಳಿ ಮತ್ತು ಒಪ್ಪಾನ, ಕೇರಳ; ಬಿಹು, ಗುಸಾನ್, ಅಸ್ಸಾಂ, ನೋರ್ತಾ ಮತ್ತು ಸೈತಾಮ್, ಮಧ್ಯಪ್ರದೇಶ; ರಥ್ವಾ, ಗುಜರಾತ್; ತಪ್ಪಾಟ್ಟಗುಳು, ಆಂಧ್ರಪ್ರದೇಶ, ಕರಗಂ, ಕಾವಾಡಿ, ತಪ್ಪಟ್ಟಮ್, ತಮಿಳುನಾಡು.

ಚಾಮರಾಜೇಂದ್ರ ದೃಶ್ಯಕಲಾ ಕಾಲೇಜು (ಕಾವಾ)

ಸಂ. 4.00 : ವಿಂಗ್ಸ್ ಆಫ್ ಲೈಫ್ ಸಾಕ್ಷ್ಯಚಿತ್ರ ಪ್ರದರ್ಶನ, ನಿರ್ದೇಶನ : ಲೂಯಿಸ್ ಸ್ಯಾಚ್ವರ್‌ಬರ್ಗ್, ಫ್ರೆಂಚ್.
ಸಂ. 4.30 : ತೊಗಲುಗೊಂಬೆ ಭಿತ್ತಿ ಚಿತ್ರಕಲಾ ಶಿಬಿರ ಮತ್ತು ಮೈಸೂರು ಶೈಲಿಯ ಸಾಂಪ್ರದಾಯಿಕ ಚಿತ್ರಕಲೆ ಪ್ರದರ್ಶನ, ಕರ್ನಾಟಕ ರಾಜ್ಯ ಡಾ. ಗಂಗೂಬಾಯಿ ಹಾನಗಲ್ ಸಂಗೀತ ಮತ್ತು ಪ್ರದರ್ಶಕ ಕಲೆಗಳ ವಿಶ್ವವಿದ್ಯಾನಿಲಯದ ವಿದ್ಯಾರ್ಥಿಗಳಿಂದ ವೀರಗಾಸೆ, ಕೊಳಲು ವಾದನ, ಸಮಕಾಲೀನ ನೃತ್ಯ ಮತ್ತು ಶಾಸ್ತ್ರೀಯ ನೃತ್ಯ

ಪಂಜಿನ ಕವಾಯತು ಮೈದಾನ (ಬನ್ನಿಮಂಟಪ)

ಮ. 3.30 : ಸೂರ್ಯಕಿರಣ್ ಏರೋಬೆಟಿಕ್ ಏರ್‌ಶೋ ತಾಲೀಮು

ದೈನಂದಿನ ಆಕರ್ಷಣೆಗಳು

ಬೆ. 9 ರಿಂದ ರಾ. 9 : ದಸರಾ ಫಲಪುಷ್ಪ ಪ್ರದರ್ಶನ, ಕುಪ್ಪಣ್ಣ ಪಾರ್ಕ್, ಜಯಚಾಮರಾಜ ಒಡೆಯರ್ ಸರ್ಕಲ್ (ಹಾರ್ಡಿಂಜ್ ವೃತ್ತ)
ಬೆ. 6.30 ರಿಂದ ಸಂ 5.30 : ದಸರಾ ಫಲಪುಷ್ಪ ಪ್ರದರ್ಶನ, ಕುಕ್ಕರಹಳ್ಳಿ ಕೆರೆ
ಬೆ. 9 ರಿಂದ ರಾ. 9 : ದಸರಾ ಫಲಪುಷ್ಪ ಪ್ರದರ್ಶನ, ಲಿಂಗಾಂಬುದಿ ಬಟಾನಿಕಲ್ ಗಾರ್ಡನ್
ಮ. 1, 4 ಮತ್ತು ಸಂಜೆ 7 : ಜೆಮಿನಿ ಸರ್ಕಸ್, ಹಾರ್ಸ್‌ಪಾರ್ಕ್ ಮೈದಾನ, ಕಾರಂಜಿಕೆರೆ ಸಮೀಪ (3 ಪ್ರದರ್ಶನ)
ಸಂಜೆ 6,7,8 ಮತ್ತು ರಾ.9 : ಅಂಬಾರಿ ಡಬ್ಬಲ್ ಡೆಕ್ಕರ್ ಬಸ್ ರೈಡ್ (1 ಗಂಟೆ– ದಿನ 4 ಟ್ರಿಪ್),
ಬೆ. 10 ರಿಂದ 5 : ಕಲಾ ವಸ್ತುಪ್ರದರ್ಶನ, ಕಾವಾ, ಸಿದ್ದಾರ್ಥನಗರ
ಬೆ. 10 ರಿಂದ ರಾತ್ರಿ 8 : ರೈಲ್ ಮ್ಯೂಸಿಯಂ (ಸಂಜೆ ದೀಪಾಲಂಕಾರ)
ಬೆ. 10 ರಿಂದ : ಆಹಾರ ಮೇಳ, ಸ್ಥಳ: ಮಹಾರಾಜ ಕಾಲೇಜು ಮೈದಾನ.

ದಸರಾ ಗೊಂಬೆ...



ಮೈಸೂರಿನ ಕುವೆಂಪುನಗರದಲ್ಲಿರುವ ಜೆಟಿಕೆ ರೆವಿನ್ಯೂ ಬಡಾವಣೆಯ ನಿವಾಸಿ ಡಿ.ಲಕ್ಷ್ಮೀ ಅವರು ನಂದನವನ ಸೇರಿದಂತೆ ಹಲವಾರು ಪೌರಾಣಿಕ ಹಿನ್ನೆಲೆಯುಳ್ಳ ಕಥೆಗಳಿಗೆ ಅನುಗುಣವಾಗಿ ಗೊಂಬೆ ಕೂರಿಸಿದ್ದಾರೆ.



ಮೈಸೂರಿನ ಜಟ್ಟಿಹುಂಡಿಯ ನಿವಾಸಿ ಆಶಾ ಗೋಪಾಲ್ ನಿವಾಸದಲ್ಲಿ ಆಕರ್ಷಕವಾಗಿ ಗೊಂಬೆ ಕೂರಿಸಿರುವುದನ್ನು ಕಾಣಬಹುದು.

ಪರೀಕ್ಷೆ ನಡೆಸದಂತೆ ಒತ್ತಾಯಿಸಿ ವಿದ್ಯಾರ್ಥಿಗಳ ಪ್ರತಿಭಟನೆ

ಸರ್ಕಾರಿ ಪದವಿ ಕಾಲೇಜುಗಳಲ್ಲಿ ನಡೆಯದ ಪಾಠ ಪ್ರವಚನ

ಮೈಸೂರು,ಸೆ.29(ಜಿಎ)–ಸರ್ಕಾರಿ ಪದವಿ ಕಾಲೇಜುಗಳ ಅತಿಥಿ ಉಪನ್ಯಾಸಕರ ನೇಮಕಾತಿ ಗೊಂದಲವು ಬಗೆಹರಿಯದೆ ತರಗತಿಗಳು ನಡೆಯುತ್ತಿಲ್ಲ. ತರಗತಿಗಳು ನಡೆದು ಪಾಠಗಳು ಸಂಪೂರ್ಣಗೊಳ್ಳುವವರೆಗೂ ಪರೀಕ್ಷೆಗಳನ್ನು ನಡೆಸದಂತೆ ಆಗ್ರಹಿಸಿ ಎಐಡಿಎಸ್‌ಓ ವಿದ್ಯಾರ್ಥಿ ಸಂಘಟನೆಯ ನೂರಾರು ವಿದ್ಯಾರ್ಥಿಗಳು ಹಳೇ ಡಿಸಿ ಕಚೇರಿ ಎದುರು ಪ್ರತಿಭಟನೆ ನಡೆಸಿದರು.

ಶೈಕ್ಷಣಿಕ ವಿಷಯಗಳಲ್ಲಿ ರಾಜ್ಯ ಸರ್ಕಾರವು ಕೇಂದ್ರದ ನಿರ್ಧಾರಗಳನ್ನು ಪಾಲಿಸುವುದು ಕಡ್ಡಾಯವಲ್ಲ ಎಂದು ಸರ್ವೋಚ್ಚ ನ್ಯಾಯಾಲಯದ ನಿರ್ದೇಶನವಿದೆ. ಇದಕ್ಕೆ ಅನುಗುಣವಾಗಿ ರಾಜ್ಯ ಸರ್ಕಾರವು ವಿದ್ಯಾರ್ಥಿಗಳ ಶೈಕ್ಷಣಿಕ ಹಿತಾಸಕ್ತಿಗೆ ಪೂರಕವಾದ ಸ್ಪಷ್ಟ ನಿಲುವು ತೆಗೆದುಕೊಳ್ಳಬೇಕು. ಒಂದೂ ತರಗತಿ ನಡೆಯದಿದ್ದರು ಸೆಮಿಸ್ಟರ್ ಪರೀಕ್ಷೆ ವೇಳಾಪಟ್ಟಿ ಮತ್ತು ಪರೀಕ್ಷಾ ಶುಲ್ಕದ ಸುತ್ತೋಲೆ ಹೊರಡಿಸಿರುವ ವಿವಿಗಳ ಧೋರಣೆ ಖಂಡನೀಯ. ಸರ್ಕಾರಿ ವಿವಿಗಳು ಖಾಸಗಿ ಪದವಿ ಕಾಲೇಜುಗಳಿಗೆ ಮಾತ್ರವೇ ಇರುವುದೇ ಎಂಬ ಪ್ರಶ್ನೆ ಮೂಡುತ್ತದೆ. ಆದ್ದರಿಂದ ನಮ್ಮ ಹೋರಾಟ ಮುಂದುವರೆಯುತ್ತದೆ ಎಂದು ವಿದ್ಯಾರ್ಥಿಗಳು ಎಚ್ಚರಿಸಿದರು.

ರಾಜ್ಯದ ಎಲ್ಲಾ ಸರ್ಕಾರಿ ಪದವಿ ಕಾಲೇಜುಗಳು ಅತಿಥಿ ಉಪನ್ಯಾಸಕರ ಮೇಲೆ ಅವಲಂಬಿತವಾಗಿದ್ದು ಇಲ್ಲಿಯವರೆಗೂ ತರಗತಿಗಳು ಸರಿಯಾಗಿ ನಡೆಯದೆ ಇರುವುದರಿಂದ ವಿದ್ಯಾರ್ಥಿಗಳು ಸಾಕಷ್ಟು ಆತಂಕದಲ್ಲಿದ್ದಾರೆ. ಇದು ಅವರ ಶೈಕ್ಷಣಿಕ ಭವಿಷ್ಯವನ್ನು ಅತಂತ್ರವನ್ನಾಗಿಸಿದೆ. ಮುಂದಿನ ತಿಂಗಳು ಪದವಿ ವಿದ್ಯಾರ್ಥಿಗಳ ಮೊದಲ ಆಂತರಿಕ ಪರೀಕ್ಷೆಗಳು ನಡೆಯಬೇಕಿದ್ದು ಪಾಠಗಳು ಇನ್ನೂ ಆರಂಭವಾಗಿಲ್ಲ. ಯುಜಿಸಿಯ ಹೊಸ ನಿರ್ದೇಶನಗಳು ಹಾಗೂ ಕೋರ್ಟ್‌ನಲ್ಲಿ ನಡೆಯುತ್ತಿರುವ ಮೊಕದ್ದಮೆಯಿಂದ ಅತಿಥಿ ಉಪನ್ಯಾಸಕರ ನೇಮಕಾತಿಯು ನನೆಗುದಿಗೆ ಬಿದ್ದಿದೆ ಎಂದು ಕಿಡಿಕಾರಿದರು.

ವಿಶ್ವವಿದ್ಯಾಲಯದಿಂದ ಪ್ರತಿಭಟನಾ ಸ್ಥಳಕ್ಕೆ ಭೇಟಿ ನೀಡಿದ ಅಧಿಕಾರಿಗಳು, ವಿದ್ಯಾರ್ಥಿಗಳ ಸಮಸ್ಯೆಗಳನ್ನು ಆಲಿಸಿ ಅವರಿಗೆ ಪರಿಹಾರ ನೀಡುವ ಬದಲು, ಅಡ್ಡಗೋಡೆ ಮೇಲೆ ದೀಪ ಇಟ್ಟಂತೆ ಮಾತನಾಡುತ್ತಾರೆ. ಒಂದು ಕಡೆ ಸಾವಿರಾರು ವಿದ್ಯಾರ್ಥಿಗಳು ಅವರ ಭವಿಷ್ಯದ ಬಗ್ಗೆ ಚಿಂತೆಗೀಡಾಗಿದ್ದರೆ, ಅಧಿಕಾರಿಗಳು ಅತ್ಯಂತ ಉದಾಸೀನವಾಗಿ ಚರ್ಚೆ ಮಾಡುತ್ತೇವೆ ಎಂದು ಉತ್ತರಿಸುತ್ತಾರೆ ಎಂದು ಅಸಮಾಧಾನ ವ್ಯಕ್ತಪಡಿಸಿದರು.

ಪ್ರತಿಭಟನೆಯಲ್ಲಿ ಸಾಮಾಜಿಕ ರೈತ ಹೋರಾಟಗಾರ ಉಗ್ರನರಸಿಂಹೇಗೌಡ, ಎಐಡಿಎಸ್‌ಓ ಜಿಲ್ಲಾ ಅಧ್ಯಕ್ಷೆ ಚಂದ್ರಕಲಾ, ಜಿಲ್ಲಾ ಕಾರ್ಯದರ್ಶಿ ನಿತಿನ್, ಸ್ವಾತಿ, ಚಂದ್ರಿಕಾ, ಅಂಜಲಿ, ಅಭಿಷೇಕ್, ಮಮತಾ ಮತ್ತು ಮಹಾರಾಣಿ ಹಾಗೂ ಸಿದ್ಧಾರ್ಥ ನಗರದ ಪದವಿ ಕಾಲೇಜಿನ ವಿದ್ಯಾರ್ಥಿಗಳು ಪಾಲ್ಗೊಂಡಿದ್ದರು.



ಪಾಠಗಳು ಸಂಪೂರ್ಣಗೊಳಿಸದೇ ಪರೀಕ್ಷೆಗಳನ್ನು ನಡೆಸದಂತೆ ಆಗ್ರಹಿಸಿ ಎಐಡಿಎಸ್‌ಓ ವಿದ್ಯಾರ್ಥಿ ಸಂಘಟನೆಯ ನೂರಾರು ವಿದ್ಯಾರ್ಥಿಗಳು ಹಳೆ ಡಿಸಿ ಕಚೇರಿ ಎದುರು ಪ್ರತಿಭಟನೆ ನಡೆಸಿದರು.

ಕಾದಂಬರಿ ಕ್ಷೇತ್ರಕ್ಕೆ ಭೈರಪ್ಪರದ್ದು ಮಹಾ ಕೊಡುಗೆ

ಶ್ರೀ ನಟರಾಜ ಪ್ರತಿಷ್ಠಾನದ ವಿಶೇಷಾಧಿಕಾರಿ ಪ್ರೊ.ಎಸ್.ಶಿವರಾಜಪ್ಪ ಸ್ಮರಣೆ



ಶ್ರೀ ನಟರಾಜ ಮಹಿಳಾ ಕಾಲೇಜಿನಲ್ಲಿ ಖ್ಯಾತ ಕಾದಂಬರಿಕಾರರಾದ ಡಾ.ಎಸ್.ಎಲ್.ಭೈರಪ್ಪ ಅವರಿಗೆ ನುಡಿನಮನ ಸಲ್ಲಿಸಲಾಯಿತು.


ಮೈಸೂರು, ಸೆ.29(ಎಂಕೆ)– ವಿಶ್ವದ ಕಾದಂಬರಿ ಲೋಕಕ್ಕೆ ಮಹತ್ತರ ಕೊಡುಗೆ ನೀಡಿರುವ ಡಾ.ಎಸ್.ಎಲ್.ಭೈರಪ್ಪ ಅವರು, ಕಾದಂಬರಿ ಲೋಕದ ಧ್ರುವತಾರೆ ಎಂದು ಶ್ರೀ ನಟರಾಜ ಪ್ರತಿಷ್ಠಾನದ ವಿಶೇಷಾಧಿಕಾರಿ ಪ್ರೊ.ಎಸ್.ಶಿವರಾಜಪ್ಪ ಸ್ಮರಿಸಿದರು.

ಮೈಸೂರಿನ ಅಗ್ರಹಾರದಲ್ಲಿರುವ ಶ್ರೀ ನಟರಾಜ ಮಹಿಳಾ ಕಾಲೇಜಿನಲ್ಲಿ ಏರ್ಪಡಿಸಿದ್ದ ನುಡಿನಮನ ಕಾರ್ಯಕ್ರಮದಲ್ಲಿ ಡಾ.ಎಸ್.ಎಲ್.ಭೈರಪ್ಪ ಅವರ ಭಾವಚಿತ್ರಕ್ಕೆ ಪುಷ್ಪಾರ್ಚನೆ ಮಾಡಿ ಮಾತನಾಡಿದ ಅವರು, ಹಾಸನ ಜಿಲ್ಲೆ ಚನ್ನರಾಯಪಟ್ಟಣ ತಾಲೂಕಿನ ಸಂತೇಶಿವರ ಗ್ರಾಮದಲ್ಲಿ ಜನಿಸಿದ ಭೈರಪ್ಪ ಅವರು ಮೈಸೂರಿಗೆ ಬಂದು ವಿದ್ಯಾಭ್ಯಾಸ ಮಾಡಿ, ಕಾದಂಬರಿ ಸಾಮ್ರಾಟ ಎನಿಸಿಕೊಂಡರು.

ಪದ್ಮಶ್ರೀ, ಪದ್ಮಭೂಷಣ, ಸರಸ್ವತಿ ಸಮ್ಮಾನ್ ಮುಂತಾದ ಪ್ರತಿಷ್ಠಿತ ಪ್ರಶಸ್ತಿಗಳಿಗೆ ಭಾಜನರಾಗಿದ್ದ ಅವರಿಗೆ ಜ್ಞಾನಪೀಠ ಪ್ರಶಸ್ತಿ ಕೂಡ ಸಿಗಬೇಕಿತ್ತು. ಆದರೂ ಕಾದಂಬರಿ ಕ್ಷೇತ್ರದಲ್ಲಿ ಅವರನ್ನು ಮೀರಿಸುವವರು ಯಾರೂ ಇಲ್ಲ. ಅವರ ಕಾದಂಬರಿಗಳು ಹಿಂದಿ, ಸಂಸ್ಕೃತ, ಇಂಗ್ಲಿಷ್, ಮರಾಠಿ,. ತಮಿಳು, ತೆಲುಗು, ಮಲಯಾಳಂ, ಗುಜರಾತಿ, ಸಂಕೇತಿ, ಹವ್ಯಕ, ಉರ್ದು, ಪಂಜಾಬಿ, ಬಂಗಾಳಿ, ಒಡಿಯಾ, ಚೀನಿ, ರಷ್ಯನ್ ಭಾಷೆಗಳಿಗೆ ಅನುವಾದವಾಗಿವೆ. ಬಹುತೇಕ ಕಾದಂಬರಿಗಳು ಚಲನಚಿತ್ರಗಳಾಗಿವೆ. ಕಿರುತೆರೆಯಲ್ಲಿ ಧಾರಾವಾಹಿಗಳಾಗಿವೆ ಎಂದರು.

ಹಿರಿಯ ಪತ್ರಕರ್ತ ಅಂಶಿಪ್ರಸನ್ನಕುಮಾರ್, ಶ್ರೀ ನಟರಾಜ ಮಹಿಳಾ ವಸತಿ ಪ್ರಥಮ ದರ್ಜೆ ಕಾಲೇಜಿನ ಪ್ರಾಂಶುಪಾಲೆ ಡಾ.ಎಂ. ಶಾರದಾ, ಉಪ ಪ್ರಾಂಶುಪಾಲ ಡಾ.ಜಿ.ಪ್ರಸಾದ್ ಮೂರ್ತಿ, ಪದವಿ ಪೂರ್ವ ಕಾಲೇಜಿನ ಪ್ರಾಂಶುಪಾಲೆ ವಿ.ಡಿ. ಸುನೀತಾ ರಾಣಿ, ಉಪನ್ಯಾಸಕರಾದ ದಿಲೀಪ್, ಬಸಪ್ಪ ಮತ್ತಿತರರಿದ್ದರು.

ಕಣ್ಮನ ಸೆಳೆಯುತ್ತಿದೆ ವಿಶೇಷ ಬೊಂಬೆ ಮನೆ



ಮೈಸೂರಿನ ಗಿರಿದರ್ಶಿನಿ ಬಡಾವಣೆಯ ಗೀತಾ ಹಾಗೂ ಶ್ರೀಹರಿ ಅವರ ನಿವಾಸದಲ್ಲಿ ಸಾವಿರಾರು ಬೊಂಬೆಗಳನ್ನು ಸೃಜನಾತ್ಮಕವಾಗಿ ಜೋಡಿಸಿರುವುದು.

ಮೈಸೂರು,ಸೆ.29– ಮೈಸೂರು ಆಲನಹಳ್ಳಿಯ ಗಿರಿದರ್ಶಿನಿ ಬಡಾವಣೆಯ ನಿವಾಸವೊಂದು ಆಕರ್ಷಕ 'ಬೊಂಬೆ ಮನೆ'ಯಾಗಿ ಪರಿವರ್ತನೆಗೊಂಡಿದೆ.

ಮೈಸೂರು ದಸರಾ ಮಹೋತ್ಸವದ ಹಿನ್ನೆಲೆಯಲ್ಲಿ ಶ್ರೀಮತಿ ಗೀತಾ–ಶ್ರೀಹರಿ ದಂಪತಿ ನಿವಾಸದಲ್ಲಿ ವೈವಿಧ್ಯಮಯ ಬೊಂಬೆಗಳನ್ನು ಜೋಡಿಸಿ, ಪೂಜಿಸುತ್ತಿದ್ದಾರೆ. 19 ವರ್ಷಗಳಿಂದ ನಿರಂತರವಾಗಿ ಈ ಸಂಪ್ರದಾಯ ನಡೆಸಿಕೊಂಡು ಬಂದಿದ್ದು, ಈ ಬಾರಿಯೂ ವಿಶೇಷ ರೀತಿಯಲ್ಲಿ ಸಾವಿರಾರು ಬೊಂಬೆಗಳನ್ನು ಜೋಡಿಸುವ ಮೂಲಕ ಗಮನ ಸೆಳೆದಿದ್ದಾರೆ.

ಪಹಲ್ಗಾಮ್ ಹತ್ಯಾಕಾಂಡಕ್ಕೆ ಪ್ರತಿಯಾಗಿ ಭಾರತ ನಡೆಸಿದ 'ಆಪರೇಷನ್ ಸಿಂಧೂರ್' ಕಾರ್ಯಾಚರಣೆಯನ್ನು ಬೊಂಬೆಗಳಲ್ಲಿ ಮೂಡಿಸಿರುವುದು ವಿಶೇಷವಾಗಿದೆ. ಕರ್ನಾಟಕ, ತಮಿಳುನಾಡು, ಕೇರಳ, ಮಹಾರಾಷ್ಟ್ರ ಸೇರಿದಂತೆ ವಿವಿಧ ರಾಜ್ಯಗಳ ವಿಶೇಷತೆಗಳನ್ನು ಬಿಂಬಿಸುವ ಬೊಂಬೆಗಳನ್ನು ಇಲ್ಲಿ ಅಚ್ಚುಕಟ್ಟಾಗಿ ಜೋಡಿಸಲಾಗಿದೆ.

ಶೃಂಗಾರ ರಸ, ಹಾಸ್ಯ, ಕರುಣ, ರೌದ್ರ ವೀರ, ಭಯಾನಕ, ಬೀಭತ್ಸ, ಅದ್ಭುತ ಹಾಗೂ ಶಾಂತರಸ ಹೀಗೆ ನವರಸಗಳ ಭಾವ ತೋರುವಂತಹ ಬೊಂಬೆಗಳು ನೋಡುಗರ ಕಣ್ಮನ ಸೆಳೆಯುತ್ತಿವೆ. ನಿತ್ಯ ಪ್ರಾರ್ಥನೆ, ಶಿವಗಣಗಳು, ದಸರಾ ಉದ್ಘಾಟನೆ ಪರಿಕಲ್ಪನೆ, ಚನ್ನಪಟ್ಟಣ ಬೊಂಬೆಗಳು ಆಕರ್ಷಕವಾಗಿವೆ.

ಇದಷ್ಟೇ ಅಲ್ಲದೆ ಶಿವನ ವಿಶ್ವ ಪರ್ಯಟನೆ, ಮಹಾಕಾಳಿ, ಮಹಾಲಕ್ಷ್ಮೀ, ಮಹಾ ಸರಸ್ವತಿ, ದಸರಾ ಮೆರವಣಿಗೆ, ಕೈಲಾಸದಲ್ಲಿ ದಶಾವತಾರ, ಕ್ಷೀರಸಾಗರ, ಸನಾತನ ಹಿಂದು ಧರ್ಮ, ಅಂಡಾಳೇಶ್ವರಿ, ಮೈಸೂರು ಸಂಸ್ಥಾನದ ಗತವೈಭವ, ಮಹಾರಾಜರ ಆಳ್ವಿಕೆ, ಸಂಗೀತ, ಮಹಾರಾಜರ ಕಾರುಗಳ ಪ್ರತಿಕೃತಿಗಳು ಬೊಂಬೆ ಮನೆಯ ವಿಶೇಷತೆ ಹೆಚ್ಚಿಸಿವೆ. ಪುರಾತನ ದೇವಾಲಯಗಳ ಸಂರಕ್ಷಣೆ ಮಹತ್ವ ಶ್ರೀಕೃಷ್ಣ ಲೀಲೆ, ಶ್ರೀರಾಮ ವೈಭವದಂತಹ ಪೌರಾಣಿಕ ಸಾರವೂ ಇಲ್ಲಿದೆ. ಮಕ್ಕಳ ಅಚ್ಚುಮೆಚ್ಚಿನ ಚೋಟಾ ಭೀಮ್ ಕೂಡ ಬೊಂಬೆ ಮನೆಯಲ್ಲಿದ್ದಾನೆ. ವನ್ಯಜೀವಿಗಳ ಸಂರಕ್ಷಣೆ ಸೇರಿದಂತೆ ಸಮಾಜಕ್ಕೆ ಸಂದೇಶ ಸಾರುವ ಪರಿಕಲ್ಪನೆಯೂ ಪಡಿಮೂಡಿದೆ.

ಅ.5ರವರೆಗೆ ವೀಕ್ಷಣೆಗೆ ಅವಕಾಶ

19ನೇ ವರ್ಷ ಬೊಂಬೆಗಳನ್ನು ಪ್ರದರ್ಶನಕ್ಕಿಡಲಾಗಿದ್ದು, ಈ ಮೂಲಕ ಸಮಾಜಕ್ಕೆ ಒಳ್ಳೆಯ ಸಂದೇಶ ನೀಡಬೇಕೆಂಬುದು ನಮ್ಮ ಆಶಯ. ನಿತ್ಯ ನೂರಾರು ಜನ ಭೇಟಿ ನೀಡಿ, ಮೆಚ್ಚುಗೆ ವ್ಯಕ್ತಪಡಿಸುತ್ತಿದ್ದಾರೆ. ವರ್ಷದಿಂದ ವರ್ಷಕ್ಕೆ ವೀಕ್ಷಕರ ಸಂಖ್ಯೆ ಹೆಚ್ಚಾಗುತ್ತಿದೆ. ಈ ಬಾರಿ ಅ.5ರವರೆಗೆ ಬೊಂಬೆಗಳನ್ನು ಪ್ರದರ್ಶನಕ್ಕಿಡಲಾಗುತ್ತಿದ್ದು, ಬೆಳಗ್ಗೆ 11.45ರಿಂದ ರಾತ್ರಿ 8 ಗಂಟೆವರೆಗೆ ಭೇಟಿ ನೀಡಿ, ವೀಕ್ಷಿಸಬಹುದಾಗಿದೆ.

23ನೇ ವರ್ಷದ ಪುಣ್ಯಸ್ಮರಣೆ



ಬೋಳಿಯಾಡೀರ ಎಂ. ಮೇದಪ್ಪ

(ನಿಧನ 30–9–2002)

ನಿಮ್ಮ ಆತ್ಮಕ್ಕೆ ಚಿರಶಾಂತಿ ಸಿಗಲಿ ಎಂದು ಕೋರುವ,
ಪತ್ನಿ– ಬಿ.ಎಂ. ಮುತ್ತಮ್ಮ,
ಮಕ್ಕಳು, ಮೊಮ್ಮಕ್ಕಳು,
ಕುಟುಂಬಸ್ಥರು, ರಾಘವೇಂದ್ರನಗರ,
ಮೈಸೂರು

Telecom Layout
SITE FOR SALE
40x60 E/F SITE
at Rs. 62 Lakhs
Behind Acharya Vidya Kula School near Huyilalu, before Yelwala, off Hunsur Road, Mysore.
Call : **99649 23399**

ಸಿಬಿಎಸ್‌ಸಿ 5ನೇ ತರಗತಿಗೆ ತುರ್ತಾಗಿ ಶ್ಯಾಡೋ ಟೀಚರ್ ಬೇಕಾಗಿದ್ದಾರೆ. ಅರ್ಹತೆ ಅಥವಾ ಅನುಭವ ಹೊಂದಿರಬೇಕು, ಇಂಗ್ಲಿಷ್‌ನಲ್ಲಿ ನಿರರ್ಗಳವಾಗಿರಬೇಕು.

8495835175

---

1 % NET PROFIT

INSTAGRAM LOCATION

1 ಸೀರೆ ಖರೀದಿಸಿ, 1 ಸೀರೆ ಉಚಿತ ಪಡೆಯಿರಿ,
2 ಸೀರೆ ಖರೀದಿಸಿ, 1 ಸೀರೆ ಉಚಿತ ಪಡೆಯಿರಿ

"ಅತೀ ಕಡಿಮೆ ಲಾಭದಲ್ಲಿ ಮಾರಾಟ, ಅತೀ ಕಡಿಮೆ ಬೆಲೆಯಲ್ಲಿ ಮಾರಾಟ"

"ಮದುವೆ ಮತ್ತು ಶುಭ ಸಮಾರಂಭ ಮಾಡುವವರಿಗೆ ಸದಾವಕಾಶ"

ಕುವೆಂಪುನಗರ KSRTC ಬಸ್ ಡಿಪೋ ಪಕ್ಕ, ಬಸ್ ನಿಲ್ದಾಣ ಕುವೆಂಪುನಗರ, ಮೈಸೂರು.

ಮೊ: 9980620678, 7411749410, 7899213825

सीएसबी - केन्द्रीय रेशम उत्पादन अनुसंधान एवं प्रशिक्षण संस्थान

CSB - Central Sericultural Research & Training Institute

[केन्द्रीय रेशम बोर्ड - वस्त्र मंत्रालय - भारत सरकार] मानंदवाडी रोड, श्रीरामपुरा, मैसूर - 570 008

[Central Silk Board - Min. of Textiles – Govt. of India] Manandavadi Road, Srirampura Mysore– 570 008

संख्या सीएसबी/आरटीआई/एजीआर/पीए/2025-26/ दिनांक: 29/09/2025

WALK-IN-INTERVIEW FOR THE POST OF PROJECT ASSISTANT

A Walk-in-Interview will be held on **16/10/2025** at Central Sericultural Research and Training Institute, Srirampura, Mysuru - 570 008 as shown below:

'A' 01 (One) **Project Assistant (PA)** purely on contract basis under CSB approved Project **"Development of customized fertilizer for higher mulberry productivity" Prj. Code PPA01034SI** for a period Up to **June 2027** or completion of project whichever is earlier under CSB Terms and Conditions.

Qualifications for Project Assistant (PA):
Full time B.Sc in Agriculture/ Life Sciences/ Sericulture

Desirable qualifications: Preference will be given to the candidates:
a) Having work Experience in Mulberry Garden maintenance & Soil/ Plant analysis in laboratory

Walk-in-Interview will be held on **16/10/2025**, time 10:30 AM (candidates should reach the venue by 9:30 AM for verification of documents, other recruitment procedures).

Interested can also visit our website www.csrtimys.res.in, https://csb.gov.in/ for details.

Sd/- Director, CSB-CSRTI, Mysuru

ಮೈಸೂರು ಮಿತ್ರ

ಓದುಗರ ಗಮನಕ್ಕೆ

ಪತ್ರಿಕೆಯಲ್ಲಿ ಪ್ರಕಟವಾಗುವ ಜಾಹೀರಾತುಗಳು ವಿಶ್ವಾಸಪೂರ್ಣವೇ ಆದರೂ ಅವುಗಳಲ್ಲಿನ ಮಾಹಿತಿ, ವಸ್ತು ಲೋಪ ದೋಷ, ಗುಣಮಟ್ಟ ಮುಂತಾದವುಗಳ ಕುರಿತು ಆಸಕ್ತ ಸಾರ್ವಜನಿಕರು ಜಾಹೀರಾತುದಾರರೊಡನೆಯೇ ವ್ಯವಹರಿಸಬೇಕಾಗುತ್ತದೆ. ಅದಕ್ಕೆ ಪತ್ರಿಕೆ ಜವಾಬ್ದಾರಿಯಾಗುವುದಿಲ್ಲ.

-ಜಾಹೀರಾತು ವ್ಯವಸ್ಥಾಪಕರು

ಪ್ಲಾಸ್ಟಿಕ್ ಬಳಕೆ ನಿಷೇಧಿಸಿ
ಪರಿಸರವನ್ನು ಕಾಪಾಡಿ

SITES FOR SALE
30x40 E/F Site
Rs. 24 Lakhs
DTCP Approved Layout
Bank Loan Available

Before Janthagalli, Next to Marashettihalli Behind Chamundi Hill, Mysuru

Call: 99649 23399

सीएसबी - केन्द्रीय रेशम उत्पादन अनुसंधान एवं प्रशिक्षण संस्थान

CSB - Central Sericultural Research & Training Institute

[केन्द्रीय रेशम बोर्ड - वस्त्र मंत्रालय - भारत सरकार] मानंदवाडी रोड, श्रीरामपुरा, मैसूर - 570 008

[Central Silk Board - Min. of Textiles – Govt. of India] Manandavadi Road, Srirampura Mysore– 570 008

संख्या सीएसबी/आरटीआई/एजीआर/पीए/2025-26/ दिनांक: 29/09/2025

WALK-IN-INTERVIEW FOR THE POST OF PROJECT ASSISTANT

A Walk-in-Interview will be held on **16/10/2025** at Central Sericultural Research and Training Institute, Srirampura, Mysuru - 570 008 as shown below:

'A' 01 (One) **Project Assistant (PA)** purely on contract basis under CSB approved Project **"Studies on natural farming in mulberry for sustainability" Prj. Code PPA01035SI** for a period Up to **August 2027** or completion of project whichever is earlier under CSB Terms and Conditions.

Qualifications for Project Assistant (PA):
Full time B.Sc in Agriculture/ Life Sciences/ Sericulture

Desirable qualifications: Preference will be given to the candidates:
a) Having work Experience in Mulberry Garden maintenance & Soil/ Plant analysis in laboratory

Walk-in-Interview will be held on 16/10/2025, time 10:30 AM (candidates should reach the venue by 9:30 AM for verification of documents, other recruitment procedures).

Interested can also visit our website www.csrtimys.res.in, https://csb.gov.in/ for details.

Sd/- Director, CSB-CSRTI, Mysuru

सीएसबी - केन्द्रीय रेशम उत्पादन अनुसंधान एवं प्रशिक्षण संस्थान

CSB - Central Sericultural Research & Training Institute

[केन्द्रीय रेशम बोर्ड - वस्त्र मंत्रालय - भारत सरकार] मानंदवाडी रोड, श्रीरामपुरा, मैसूर - 570 008

[Central Silk Board - Min. of Textiles – Govt. of India] Manandavadi Road, Srirampura Mysore– 570 008

संख्या सीएसबी/आरटीआई/एजीआर/पीए/2025-26/ दिनांक: 27/09/2025

WALK-IN-INTERVIEW FOR THE POST OF PROJECT ASSISTANT

A Walk-in-Interview will be held on **15/10/2025** at Central Sericultural Research and Training Institute, Srirampura, Mysuru - 570 008 as shown below:

'A' 01 (One) **Project Assistant (PA)** purely on contract basis under CSB approved Project **"Utilization of Japanese Silkworm genetic resources for the development of productive bivoltine hybrids" (SIB01038MGC)** for a period Up to **March 2028** or completion of project whichever is earlier under CSB Terms and Conditions.

Qualifications for Project Assistant (PA): Full time B.Sc in Life Sciences/ Sericulture with minimum 55% marks (50% for SC/ST candidates).

Desirable qualifications: Preference will be given to the candidates:
a) Having prior Experience in the Silkworm rearing, b) M.Sc. in Sericulture

Walk-in-Interview will be held on **15/10/2025**, time 10:30 AM (candidates should reach the venue by 9:30 AM for verification of documents, other recruitment procedures).

Interested can also visit our website www.csrtimys.res.in, https://csb.gov.in/ for details.

Sd/- Director, CSB-CSRTI, Mysuru

HEARTY WELCOME TO NEW SPIRITUAL LEADER



HIS LORDSHIP MOST REV. DR. FRANCIS SERRAO

The Bishop of Mysore

on Tuesday, October 7, 2025, at 4:30 pm at St. Joseph's Cathedral (St. Philomena's Shrine), Ashoka Road, Mysuru.


Eucharistic Celebration by

Most Rev. Dr. Peter Machado, Archbishop of Bangalore.

A felicitation programme

By His Excellency **Most Rev. Dr.Leopoldo Girelli,** Apostolic Nuncio to India and Nepal, the Holy See's diplomatic representative in India.

The occasion will also mark a



Gratitude to

MOST REV. DR. BERNARD MORAS

Apostolic Administrator of the Diocese of Mysore, who has been shepherding the Diocese since January 2023.

The Diocese of Mysore

SANMAARGI, Bishop's House, # 3845/M2, Nelson Mandela Road, Bannimantap 'C' Layout, Mysuru – 570015.
Ph: 0821-2443545 | Mobile: 9448600834.

All are cordially Invited



ಹಸಿರು ನಮ್ಮ ಉಸಿರು

NOT GETTING YOUR
STAR OF MYSORE & ಮೈಸೂರು ಮಿತ್ರ
Call: 98452-96447 / 99003-82840
